ಪುಸ್ತಕ ಪ್ರಪಂಚ

ಸಂಪುಟ ೩೬ ೧೯೮೨ ಫೆಬ್ರವರಿ ಸಂಚಿಕೆ ೭



ವಿಷಯ ಸೂಚಿ

ಮುಖಚಿತ್ರ : ಮಹಾದೇವ

ಸಂಪಾದಕೀಯ ಮಂಡಲಿ

ಪುಸ್ತಕ ಪ್ರಪಂಚ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆ

ಸಂಪುಟ ೩೬ ಫೆಬ್ರುವರಿ ೧೯೮೨ ಸಂಚಿಕೆ ೭

ಶೀಘ್ರ ಹಾಗೂ ನಿರಂತರ ಬದಲಾವಣೆಗಳ ಆಘಾತ

ಸಮಾಜ ಹಾಗೂ ವಿಶ್ವ ನಿರಂತರವಾಗಿ ಬದಲಾಯಿಸುತ್ತಿದೆ. ಸಮಯದ ಪ್ರಜ್ಞೆ, ಕೆಲಸಕಾರ್ಯಗಳ ನಿರ್ವಹಣೆ, ಮತಧರ್ಮಗಳು, ಲೈಂಗಿಕ ವಿಚಾರಗಳು ಮೊದಲಾದ ಎಲ್ಲಾ ರಂಗಗಳಲ್ಲೂ ಶೀಘ್ರ ಬದಲಾವಣೆಗಳು ಕಾಣಿಸಿಕೊಳ್ಳುತ್ತಿವೆ. ಹಿಂದಿನ ಜನಾಂಗ ಮತ್ತು ಇಂದಿನ ಜನಾಂಗಗಳ ನಡುವೆ, ಮಾತಾಪಿತೃಗಳು ಮತ್ತು ಅವರ ಮಕ್ಕಳನಡುವೆ, ನಾವು ಇಂದು ಕಾಣುವ ವಿರಸ ಹಾಗೂ ಭಿನ್ನಾಭಿಪ್ರಾಯಗಳಿಗೆ ಮೇಲೆ ತಿಳಿಸಿದ ಶೀಘ್ರ ಹಾಗೂ ನಿರಂತರವಾಗಿ ವಿಶ್ವದ ವಿದ್ಯಮಾನಗಳು ಬದಲಾಯಿಸುತ್ತಿರುವುದೇ ಕಾರಣವೆಂದು ಹೇಳಬಹುದು.

ಗ್ರಾಮಗಳಿಗಿಂತ ನಗರಗಳಲ್ಲಿ ತೀವ್ರ ಗತಿಯಲ್ಲಿ ಬದಲಾವಣೆಗಳಾಗಿವೆ. ಕಳೆದ ದಶಕವಲ್ಲಿ ನಗರವಾಸಿಗಳ ಸಂಖ್ಯೆ ದ್ವಿಗುಣಗೊಂಡಿದೆ. ಕೆಲವು ದೇಶಗಳಲ್ಲಿ ಆರ್ಥಿಕ ಪ್ರಗತಿಯು ಗಮನಾರ್ಹವಾಗಿ ಸಾಗಿದೆ. ಇಂದು ಕೆಲವು ದೇಶಗಳಲ್ಲಿ ವೃದ್ಧರೂ ಕೇಳರಿಯದ ಸೌಲಭ್ಯಗಳನ್ನು ಮತ್ತೆ ಕೆಲವು ದೇಶಗಳಲ್ಲಿ ಮಕ್ಕಳೇ ಹೊಂದಿದ್ದಾರೆ. ಆ ಮಕ್ಕಳ ಭಾವನೆಯಲ್ಲಿ ಈ ಸೌಲಭ್ಯಗಳೆಲ್ಲವೂ ಮೂಲಸೌಲಭ್ಯಗಳೆಂಬ ಭಾವನೆ ಮೂಡಿದೆ.

ಔದ್ಯೋಗಿಕ ರಂಗದಲ್ಲಿ ಒಂದು ಪ್ರಗತಿದಾಯಕ ಆಲೋಚನೆಯು ಮೂಡುವ ಮತ್ತು ಅದನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ಅಳವಡಿಸುವ ನಡುವಿನ ಅವಧಿ ವಿಸ್ಮಯಗೊಳಿಸುವಷ್ಟು ಸಂಕುಚಿತಗೊಂಡಿದೆ. ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಒಂದು ಸಂಶೋಧನಾಸಂಸ್ಥೆಯ ಅಂದಾಜಿನಂತೆ ೧೯೨೦ ಕ್ಕೂ ಮೊದಲು,

---

೧೯೭೧ರ ಡಿಸೆಂಬರ್ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ "ಕೋಪಿಂಗ್ ವಿತ್ ಫ್ಯೂಚರ್" ಎಂಬ ಲೇಖನದ ಅನುವಾದ.

ಒಂದು ಉಪಕರಣದ ನಿರ್ಮಾಣವನ್ನು ಯೋಚಿಸಿ ಆ ಉಪಕರಣವನ್ನು ಅಧಿಕ ಮಟ್ಟದಲ್ಲಿ ಉತ್ಪಾದನೆಗೊಳಿಸಲು ಸುಮಾರು ೩೪ ವರ್ಷಗಳಷ್ಟು ಅವಧಿ ಹಿಡಿಯುತ್ತಿತ್ತು. ನಾನಾ ವಿದ್ಯುಚ್ಛಕ್ತಿಯ ಉಪಕರಣಗಳು. ಶೈತ್ಯಾಗಾರಗಳೂ ಈ ಅವಧಿಯಲ್ಲಿ ಉಪಯೋಗಕ್ಕೆ ಬಂದುವು. ಆದರೆ ೧೯೩೯–೧೦೪೯ ಈ ಅವಧಿಯಲ್ಲಿಯ ಯೋಜನೆಗಳು ನಿರೀಕ್ಷಿಸಿದ ಮಟ್ಟದಲ್ಲಿ ಕಾರ್ಯರೂಪಕ್ಕೆ ಬರಲು ೮ ವರ್ಷಗಳ ಅವಧಿ ಸಾಕಾಯಿತು. ದೂರದರ್ಶನಗಳು, ಬಟ್ಟೆಗಳನ್ನು ಒಗೆದು ಒಣಗಿಸುವ ಯಂತ್ರಗಳು ಈ ಅವಧಿಯಲ್ಲಿ ಉತ್ಪಾದಿಸಲ್ಪಟ್ಟುವು. ಅಲ್ಲದೆ ಟ್ರಾನ್ಸಿಸ್ಟರ್, ಧ್ವನಿ ಮುದ್ರಿಕೆಗಳು ಮೊದಲಾದ ನಾನಾ ಆಧುನಿಕ ಸಾಮಗ್ರಿಗಳು ಉತ್ಪಾದಿಸಲ್ಪಟ್ಟು ಜನರನ್ನೂ ಅವರ ಜೀವನ ವಿಧಾನಗಳನ್ನೂ ಬಹುಮಟ್ಟಿಗೆ ಬದಲಾಯಿಸಿವೆ.

ನ್ಯೂಯಾರ್ಕ್, ಲಂಡನ್, ಟೋಕಿಯೋ ಮೊದಲಾದ ನಗರಗಳಲ್ಲಿಯ ಲಕ್ಷಾಂತರ ಜನರು, ಕೆಲವು ದೇಶಗಳ ಜನರು ಭವಿಷ್ಯದಲ್ಲಿ ಆಶಿಸಪಟ್ಟು ನಿರ್ಮಿಸಿಕೊಂಡಿರುವ ಕನಸಿನ ಸಾಮ್ರಾಜ್ಯದಲ್ಲಿ ಇಂದೇ ವಾಸಿಸುತ್ತಿದ್ದಾರೆ. ಈ ವ್ಯತ್ಯಾಸಕ್ಕೆ ಕಾರಣವೇನು? ಆ ದೇಶದ ಜನರು ಇತರ ದೇಶದ ಜನರಿಗಿಂತ ನಿಜವಾಗಿಯೂ ಹೆಚ್ಚು ಐಶ್ವರ್ಯವಂತರು, ವಿದ್ಯಾವಂತರು ಮತ್ತು ಹೆಚ್ಚು ಚಟುವಟಿಕೆಗಳಿಂದ ಜೀವಿಸುವವರು ಎಂದು ಧಾರಾಳವಾಗಿ ಹೇಳಬಹುದು. ಅವರ ಜೀವನ ಮಾರ್ಗಗಳ ಸುಧಾರಣೆಯು ಬಹುವೇಗದಲ್ಲಿ ಮುನ್ನಡೆದಿದೆ.

ಮೇಲೆ ತಿಳಿಸಿದ ವಾತಾವರಣದಲ್ಲಿ ಒಬ್ಬ ವ್ಯಕ್ತಿ ಜೀವಿಸಿರಬೇಕಾದರೆ ಆತ ತನ್ನ ಮನೋಭಿಪ್ರಾಯಗಳನ್ನು ಆಗಿಂದಾಗ್ಯೆ ಮತ್ತು ತೀವ್ರಗತಿಯಲ್ಲಿ ಬದಲಾಯಿಸಲು ಸಿದ್ಧವಾಗಿರಬೇಕು. ಈ ಮನೋಧರ್ಮದ ಬದಲಾವಣೆಯ ಅಗತ್ಯ ಹಿಂದೆ ಇದ್ದುದಕ್ಕಿಂತ ಈಗ ಹೆಚ್ಚು ಅಗತ್ಯವಾಗಿದೆ. ಆ ಬಗೆಯ ಜೀವನದಲ್ಲಿ ಯಾವ ವಸ್ತುವೇ ಆಗಲಿ, ಯಾವ ಅಭಿಪ್ರಾಯವೇ ಆಗಲಿ ಶಾಶ್ವತವಾಗಿರುವುದಿಲ್ಲ. ಪ್ರತಿನಿತ್ಯ ಕಾಣುವ ವಸ್ತುಗಳು, ಮೂಡುವ ಮನೋಭಾವಗಳು, ತಾತ್ಕಾಲಿಕವಾಗಿರುತ್ತವೆ. ಇಂದು ನೋಡಿದ ಜನರನ್ನು ನಾಳೆ ನೋಡದಿರಬಹುದು. ಪ್ರತಿನಿತ್ಯವೂ ಹೊಸ ವ್ಯಕ್ತಿಗಳೊಂದಿಗೆ ವ್ಯವಹರಿಸಬೇಕಾಗುವುದು. ಈ ಬಗೆಯ ವಾತಾವರಣವು ಅಮೆರಿಕಾದಲ್ಲಿ ಯಾವ ಸ್ವರೂಪವನ್ನು ತಾಳಿದೆ, ಎಂಬ ವಿಷಯವನ್ನು ಮುಂದೆ ಪರಿಶೀಲಿಸಲಾಗಿದೆ.

ವಸ್ತುಗಳು : ಆ ದೇಶದಲ್ಲಿ ತಯಾರಾಗುವ ವಸ್ತುಗಳಲ್ಲಿ ಅನೇಕ ವಸ್ತುಗಳು ಒಮ್ಮೆ ಅಥವಾ ಸ್ವಲ್ಪ ಕಾಲ ಮಾತ್ರ ಉಪಯೋಗಿಸಿ ನಂತರ ಅನರ್ಹವೆಂದು

ಪರಿಗಣಿಸಲ್ಪಡುತ್ತವೆ. ಗೃಹಕೃತ್ಯದಲ್ಲಿ ಉಪಯೋಗಿಸುವ ಸೀಸೆಗಳು, ಕಾಗದದ ಕರವಸ್ತ್ರಗಳು, ಮೈ ಒರಸಿಕೊಳ್ಳುವ ವಸ್ತ್ರಗಳು ಮೊದಲಾದುವುಗಳನ್ನು ಸ್ವಲ್ಪ ಕಾಲ ಮಾತ್ರ ಉಪಯೋಗಿಸಿ ನಂತರ ಅನರ್ಹವೆಂದು ಆಚೆಗೆ ಎಸೆಯುತ್ತಾರೆ. ಉಪಹಾರಕ್ಕೆ ತಯಾರಾದ ವಸ್ತುಗಳು ಆ ವೇಳೆಯಲ್ಲಿ ಮಾತ್ರ ಉಪಯೋಗಿಸಲ್ಪಟ್ಟು ಮಿಕ್ಕ ಪದಾರ್ಥಗಳು ಕಸದ ಬುಟ್ಟಿಗಳನ್ನು ಸೇರುತ್ತವೆ. ಅನೇಕ ಗೃಹಗಳಲ್ಲಿ ಆ ದಿನದ ಆವಶ್ಯಕ ಸಾಮುಗ್ರಿಗಳು ಅಂದೇ, ಅಲ್ಲೇ ತಯಾರಿಸಲ್ಪಟ್ಟು ಮಾರನೆಯ ದಿನ ಅದರ ಅವಶೇಷವೇ ಇಲ್ಲದಂತೆ ನಿರ್ನಾಮ ಹೊಂದುವುವು. ಅಲ್ಲಿನ ಶ್ರೀಮಂತರು ಓಡಾಟಕ್ಕೆ ಉಪಯೋಗಿಸುವ ವಾಹನಗಳೂ ಮೇಲಿನ ನಿಯಮಕ್ಕೆ ಹೊರತಾಗಿಲ್ಲ. ಸ್ವಂತವೇ ಆಗಿರಲಿ ಅಥವಾ ಬಾಡಿಗೆಗೆ ಕೊಡುವ ವಾಹನಗಳೇ ಆಗಿರಲಿ, ಸ್ವಲ್ಪ ಕಾಲ ಬಳಸಲ್ಪಟ್ಟು ನಂತರ ಅನರ್ಹವೆಂದು ತಿರಸ್ಕರಿಸಲ್ಪಡುತ್ತದೆ. ಪ್ರತಿದಿನವೂ ನೂರಾರು ಹೊಸ ವಸ್ತುಗಳನ್ನು ಕಾಣುತ್ತಾರೆ. ಹೆಚ್ಚಿನ ಸಂಖ್ಯೆಯಲ್ಲಿ ಹಳೆಯ ವಸ್ತುಗಳನ್ನು ಮರೆಯುತ್ತಾರೆ.

೧೯೫೦-೬೩ರ ಅವಧಿಯಲ್ಲಿ ಸಾಬೂನುಗಳ ನಮೂನೆಗಳು ೫೬ ರಿಂದ ೨೦೦ಕ್ಕೆ ಏರಿತು. ಊಟಕ್ಕೆ ಸಿದ್ಧಪಡಿಸಿದ ಸಾಮುಗ್ರಿಗಳ ಸಂಖ್ಯೆ ೧೨೦ ರಿಂದ ೩೫೦ಕ್ಕೆ ಏರಿತು. ಕೂಡಲೇ ತಿಂಡಿಗಳನ್ನು ತಯಾರಿಸಬಲ್ಲ ಸಾಮುಗ್ರಿಗಳ ಸಂಖ್ಯೆ ೪೫ ರಿಂದ ೨೦೦ಕ್ಕೆ ಏರಿತು. ಆಯ್ಕೆಗೆ ಯೋಗ್ಯವಾದ ವಸ್ತುಗಳ ಸಂಖ್ಯೆ ಭಾರಿ ಪ್ರಮಾಣದಲ್ಲಿ ಏರಿತು. ವಸ್ತುಗಳ ಆಯ್ಕೆ ಸರಳಗೊಳ್ಳುವ ಬದಲು, ಸಮಸ್ಯಾತ್ಮಕವಾಗಿ ಬದಲಾವಣೆ ಹೊಂದಿತು. ವಸ್ತುಗಳ ವೈವಿಧ್ಯತೆ ಒಂದು ಬಗೆಯಲ್ಲಿ ಸೌಕರ್ಯವೆಂದು ಕಂಡು ಬಂದರೂ ಅವುಗಳ ಆಯ್ಕೆ ಪ್ರಶ್ನೆ ಕ್ಲಿಷ್ಟವಾಯಿತು. ಈ ಬಗೆಯಲ್ಲಿ ನಾನಾ ಹೊಸ ಸಾಮುಗ್ರಿಗಳು ಮೇಲಿಂದ ಮೇಲೆ ಗೋಚರಿಸಿದಂತೆ, ಜನರು ತಮ್ಮ ನಿತ್ಯಬಳಕೆಯ ವಸ್ತುಗಳನ್ನು ಮೇಲಿಂದ ಮೇಲೆ ಬದಲಾಯಿಸಬಲ್ಲ ಮನೋಧರ್ಮವನ್ನು ಹೊಂದಬೇಕಾಯಿತು.

ಸ್ಥಳಗಳು : ಪ್ರತಿನಿತ್ಯ ಅನೇಕ ನೂತನ ವಸ್ತುಗಳು ಕಾಣಿಸಿಕೊಂಡು ಅದೃಶ್ಯವಾಗುವ ರೀತಿಯಲ್ಲಿಯೇ ಆಗಿಂದಾಗ್ಯೆ ಹೊಸ ಜಾಗಗಳನ್ನು ನೋಡಬೇಕಾಗುವುದು. ಅಮೇರಿಕಾದ ಜನರು ಹೆಚ್ಚು ವೇಗದಲ್ಲಿ ಪ್ರಯಾಣ ಮಾಡುತ್ತಾರೆ. ೧೯೬೭ರ ಮಾರ್ಚಿಯಿಂದ ಮುಂದಿನ ಒಂದು ವರ್ಷದ ಅವಧಿಯಲ್ಲಿ ಸುಮಾರು ೩೬ ದಶಲಕ್ಷ ಅಮೇರಿಕಾ ನಿವಾಸಿಗಳು ತಮ್ಮ ವಾಸಸ್ಥಳಗಳನ್ನು ಬದಲಾಯಿಸಿದರು. ಈ ಸಂಖ್ಯೆ ಕಾಂಬೋಡಿಯಾ, ಘಾನ, ಗ್ವಾಟೆಮಾಲಾ, ಇರಾಕ್ ಮೊದಲಾದ ಅನೇಕ ದೇಶಗಳ ಅಂದಿನ ಒಟ್ಟು ಜನ

ಸಂಖ್ಯೆಯನ್ನೂ ಮೀರಿಸಿತು. ಅಂದರೆ ಈ ಎಲ್ಲಾ ದೇಶಗಳ ಇಡೀ ಜನಸ್ತೋಮವೇ ತಮ್ಮ ದೇಶಗಳಿಂದ ದೇಶಾಂತರ ಹೊಂದಂತಾಯಿತು. ೧೯೪೪ಲ ರಿಂದ ಪ್ರತಿವರ್ಷವೂ ಐದು ಜನರಲ್ಲಿ ಒಬ್ಬರ ವಿಳಾಸ ಬದಲಾಯಿಸುತ್ತಿದೆ.

ಈ ರೀತಿ ಸ್ಥಳಾಂತರ ಹೊಂದುವವರಲ್ಲಿ ಉದ್ಯೋಗಸ್ಥರು ಮತ್ತು ಔದ್ಯೋಗಿಕ ರಂಗಕ್ಕೆ ಸೇರಿದವರು ಹೆಚ್ಚು. ಅಧಿಕಾರಿಗಳು ಒಂದಲ್ಲ ಒಂದು ಕಾರಣಕ್ಕಾಗಿ ಮನೆಯಿಂದ ಮನೆಗೆ ಚದುರಂಗದಾಟದ ಕಾಯಿಗಳಂತೆ, ವಾಸಸ್ಥಳಗಳನ್ನು ಬದಲಾಯಿಸುತ್ತಲಿರುವರು. ಈ ಬಗೆಯಲ್ಲಿ ಒಂದು ಕಡೆ ಸ್ವಲ್ಪಕಾಲವಾದರೂ ನೆಲಸದೆ ಸ್ಥಳಗಳನ್ನು ಬದಲಾಯಿಸುವವರಿಗೆ ಯಾವ ಜಾಗದ ಬಗೆಯೂ ವಿಶೇಷವಾದ ಆಸಕ್ತಿ ಉಂಟಾಗುವುದಿಲ್ಲ. ಈ ಜನರ ಸ್ಥಿತಿ, ಬೇರು ತಳವೂರುವ ಮುನ್ನವೇ ಸ್ಥಳದಿಂದ ಸ್ಥಳಕ್ಕೆ ವರ್ಗಾಯಿಸಿದ ವೃಕ್ಷಗಳಂತೆ ಇರುವುದು. ವಿಮಾನದಳದ ಅಧಿಕಾರಿಯೊಬ್ಬರು ತಾವು ವಾಸಿಸುವ ಸ್ಥಳದ ರಾಜಕೀಯ ಅಥವಾ ಯಾವುದೇ ವಿಚಾರದಲ್ಲಿ ಆಸಕ್ತಿ ವಹಿಸಲು ನಿರಾಕರಿಸಿದರು. ಇದಕ್ಕೆ ಅವರು ಕೊಟ್ಟ ಕಾರಣ "ಇನ್ನು ಕೆಲವು ತಿಂಗಳುಗಳಲ್ಲಿಯೇ ಇಲ್ಲಿಂದ ನನ್ನ ಸ್ಥಾನಪಲ್ಲಟವಾಗಿರುತ್ತದೆ." ಒಂದು ವೃಕ್ಷವನ್ನು ಒಂದು ಮನೆಯಲ್ಲಿ ಹುಟ್ಟು ಹಾಕಿದ ವ್ಯಕ್ತಿ ಅದು ಚಿಗುರುವ ಮೊದಲೇ ಮನೆಯನ್ನು ಬದಲಾಯಿಸಿರುತ್ತಾನೆ. ಈ ಕಾರಣದಿಂದ ತೋಟಗಾರಿಕೆ ಮೊದಲಾದ ಹವ್ಯಾಸಗಳೆಡೆಗೆ ಅಭಿರುಚಿ ಇರುವುದಿಲ್ಲ.

ವ್ಯಕ್ತಿ ಎಲ್ಲಾ ವಿಧವಾದ ಸಾಮಾಜಿಕ ಚಟುವಟಿಕೆಗಳಿಂದಲೂ ದೂರವಿರಲು ಪ್ರಯತ್ನಿಸಿದರೆ, ವ್ಯಕ್ತಿ ಮತ್ತು ಸಮಾಜಗಳ ನಡುವೆ ನಿಕಟ ಸಂಪರ್ಕ ಬೆಳೆಯಲು ಆಸ್ಪದವಿರುವುದಿಲ್ಲ. ಇದರಿಂದ ವ್ಯಕ್ತಿ ಒಂದು ಬಗೆಯ ನಷ್ಟಕ್ಕೆ ಒಳಪಡುತ್ತಾನೆ. ಇದು ಸಮಾಜಕ್ಕೂ ಒಳ್ಳೆಯದಲ್ಲ. ವ್ಯಕ್ತಿಯ ಪಾತ್ರವಿಲ್ಲದೆ ಸಮಾಜವೂ ಸಮಾಜದ ಸಂಪರ್ಕವಿಲ್ಲದೆ ವ್ಯಕ್ತಿಯೂ ವಿಕಾಸ ಹೊಂದಲು ಸಾಧ್ಯವಿಲ್ಲ.

ಜನರು: ನಾವು ಭೇಟಿಯಾಗುವ ವ್ಯಕ್ತಿಗಳು ಸ್ವಲ್ಪ ಕಾಲ ಮಾತ್ರ ನಮ್ಮೊಡನಿದ್ದು ಮರೆಯಾಗಿ ಹೋಗುತ್ತಾರೆ. ಪ್ರತಿನಿತ್ಯವೂ ಹೊಸ ವ್ಯಕ್ತಿಗಳೊಡನೆ ವ್ಯವಹಾರ ನಡೆಸಬೇಕಾಗುವುದು. ವ್ಯಕ್ತಿಗಳು ಪರಸ್ಪರ ನಿಕಟ ಸಂಪರ್ಕವನ್ನು ಹೊಂದಲು ಅವಕಾಶವಿರುವುದಿಲ್ಲ. ನಿಕಟವಾದ ಗೆಳೆತನದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ವ್ಯಕ್ತಿಗಳ ಕೆಲಸಗಳು, ಅವರ ಸ್ಥಾನಮಾನಗಳು, ವಾಸದಗೃಹಗಳು ಮತ್ತು ಕೆಲಸ ಮಾಡುವ ಸ್ಥಾನಗಳು ಪದೇ ಪದೇ ಬದಲಾ-

ವಣೆ ಆಗುವುದರಿಂದ ನಿಕಟಸಂಪರ್ಕ, ಸ್ನೇಹ ಮೊದಲಾದ ಮೂಲಭೂತ ಮಾನವೀಯ ಮೌಲ್ಯಗಳಿಗೆ ಕೊಡಲಿ ಏಟು ಬಿದ್ದಿದೆ. ಹಿಂದಿನ ಕಾಲದಲ್ಲಿ ವ್ಯಕ್ತಿಯ ಕಾರ್ಯಕ್ಷೇತ್ರದಲ್ಲಿ ಕೆಲವೇ ವ್ಯಕ್ತಿಗಳು ಇರುತ್ತಿದ್ದುದರಿಂದ ನಿಕಟ ಸಂಪರ್ಕ, ಸ್ನೇಹ, ಒಬ್ಬರ ಕಷ್ಟದಲ್ಲಿ ಮತ್ತೊಬ್ಬರು ಪಾಲುಗೊಳ್ಳುವಿಕೆ ಮುಂತಾದುವುಗಳಿಗೆ ಆಸ್ಪದವಿರುತ್ತಿತ್ತು. ಈಗ ಅನೇಕ ವ್ಯಕ್ತಿಗಳ ಭೇಟಿ ಮತ್ತು ಪರಿಚಯ ಆಗುತ್ತವೆ. ಆದರೆ ಯಾರೊಡನೆಯೂ ನಿಕಟ ಸಂಪರ್ಕಕ್ಕೆ ಆಸ್ಪದವೇ ಇಲ್ಲ. ಹಿಂದಿನ ಕಾಲದಲ್ಲಿ ನಿಕಟವರ್ತಿಗಳಾದ ಸ್ನೇಹಿತರು ಅನೇಕ ವರ್ಷಗಳ ಕಾಲ ಒಟ್ಟಾಗಿ ಜೀವಿಸುತ್ತಿದ್ದರು. ಈಗ ಅಮೆರಿಕಾ ದೇಶದ ಶಾಲೆಗಳ ಮಕ್ಕಳು ನಿಕಟವರ್ತಿಗಳಾದ ಸ್ನೇಹಿತರ ಕೊರತೆಯಿಂದ ಮೂಕವೇದನೆಯನ್ನು ಅನುಭವಿಸುತ್ತಿರುವುವು. ಸ್ನೇಹಹಸ್ತವನ್ನು ಚಾಚುವ ಮೊದಲೇ, ಆ ಮಕ್ಕಳ ಶಾಲೆಗಳು ಅಥವಾ ಸ್ಥಳಗಳೇ ಬದಲಾವಣೆಯಾಗಿಬಿಡುತ್ತವೆ.

ವಿಚಾರಗಳು : ನಾವು ನೋಡುವ ವಸ್ತುಗಳು, ಸಂಧಿಸುವ ಜನರು, ವಾಸ ಮಾಡುವ ಸ್ಥಾನಗಳು ಶರವೇಗದಲ್ಲಿ ಬದಲಾವಣೆ ಹೊಂದುತ್ತಿರುವಂತೆಯೇ, ಹಳೆಯ ವಿಚಾರಗಳನ್ನು ಮರೆತು, ಹೊಸಸಂಗತಿಗಳನ್ನು ಅರಿಯಬೇಕಾದ ಮಾನಸಿಕ ಒತ್ತಡಕ್ಕೆ ಗುರಿಯಾಗಬೇಕಾಗಿದೆ. ವಾಸ್ತವಿಕ ಪ್ರಪಂಚದಲ್ಲಿ ನಾವು ನೆಮ್ಮದಿಯಿಂದ ಮತ್ತು ಅರ್ಥಪೂರ್ಣವಾದ ಜೀವನವನ್ನು ನಡೆಸಲು, ಅಂದಿನ ವಾಸ್ತವಿಕ ಮಾದರಿಯಿಂದ, ಬಹಳ ಹಿಂದಿನ ಮಾದರಿಯನ್ನು ಅನುಸರಿಸುವುದು ಬುದ್ಧಿವಂತಿಕೆ ಎನಿಸುವುದಿಲ್ಲ. ತೀವ್ರಗತಿಯಲ್ಲಿ ಬದಲಾಯಿಸುತ್ತಿರುವ ವಿಶ್ವದ ಇಂದಿನ ಪರಿಸ್ಥಿತಿಯಲ್ಲಿ, ಸ್ವಲ್ಪ ದಿನಗಳ ಹಿಂದೆ ಸತ್ಯವಾಗಿದ್ದ ಅಂಶಗಳು, ಕೆಲವು ದಿನಗಳ ನಂತರ ಕಾಗಕ್ಕಗುಬ್ಬಕ್ಕ ಮೊದಲಾದ ಕಟ್ಟುಕತೆಗಳಂತೆ ಮಾರ್ಪಾಡು ಹೊಂದುವುವು, ಇಂದು ಜನಿಸಿದ ಮಗುವು ಪದವೀಧರನಾಗುವ ವೇಳೆಗೆ ನಾವು ಅರಿತ ವಿಷಯಗಳ ನಾಲ್ಕರಷ್ಟು ವಿಷಯಗಳನ್ನು ಅರಿಯಬೇಕಾಗುವುದು.

ಈ ಶೀಘ್ರ ಬದಲಾವಣೆಗಳು ಪ್ರತಿ ವ್ಯಕ್ತಿಯ ಮನಸ್ಸಿನ ಮೇಲೆ ಪ್ರಭಾವ ಹಾಗೂ ಪರಿಣಾಮಗಳನ್ನು ಬೀರುತ್ತವೆ. ಮಕ್ಕಳನ್ನು ಸರಿಯಾಗಿ ರೂಪಿಸಲು ಅನುಸರಿಸಬೇಕಾದ ಮೂಲತತ್ವಗಳಲ್ಲೇ ಬದಲಾವಣೆಗಳಾಗಿ ಮಾತಾಪಿತೃಗಳು ಚಿಂತೆಗೀಡಾಗಿರುವ ಪ್ರಸಂಗಗಳು ಇವೆ.

ಸಾಧಾರಣವಾಗಿ ಒಬ್ಬ ಅಮೇರಿಕನ್ ಪ್ರಜೆ ಪ್ರತಿದಿನವೂ ಸುಮಾರು ೧೦ ಸಾವಿರದಿಂದ ೨೦ ಸಾವಿರದವರೆಗೆ ವರ್ತಮಾನ ಪತ್ರಿಕೆಯಲ್ಲಿರುವ ಅಕ್ಷರಗಳನ್ನು ಓದುತ್ತಾನೆ. ಆಕಾಶವಾಣಿ, ದೂರದರ್ಶನ ಮೊದಲಾದ ಕಾರ್ಯಕ್ರಮಗಳಿಗೆ

ಕೆಲವು ಗಂಟೆಗಳ ಕಾಲವನ್ನೇ ಮೀಸಲಾಗಿಡಬೇಕಾಗುತ್ತದೆ. ದಿನಂಪ್ರತಿ ೫೦೦ ರಿಂದ ೬೦೦ರವರೆಗೆ ಜಾಹೀರಾತುಗಳು ಅವನ ಕಣ್ಣಿಗೆ ಬೀಳುತ್ತವೆ. ಪ್ರತಿಭಾವಂತನಾದ ಮಾನವನ ಮೆದುಳಿಗೂ ಈ ಪ್ರಮಾಣದಲ್ಲಿ ಹೊಸ ವಿಚಾರಧಾರೆಗಳು ಶ್ರಮವನ್ನು ಉಂಟುಮಾಡುತ್ತವೆ. ನಾಗರಿಕತೆಯ ಸೋಗಿನಲ್ಲಿ ಈ ಮೂಕ ವೇದನೆಗಳನ್ನು ನುಂಗಲಾರದ ತುತ್ತಿನಂತೆ ಅನುಭವಿಸಬೇಕಾದ ಪರಿಸ್ಥಿತಿ ಒದಗಿದೆ. ವಿಶ್ವದ ಆಗುಹೋಗುಗಳ ಬಗ್ಗೆ ವ್ಯಕ್ತಿ ಒಂದು ಚಿತ್ರವನ್ನು ರೂಪಿಸಿಕೊಳ್ಳುವ ಮುನ್ನವೇ ಆ ಚಿತ್ರವೇ ಬದಲಾಯಿಸಿಬಿಟ್ಟಿರುತ್ತದೆ. ಈ ಬಗೆಯ ಮಾನಸಿಕ ಬವಣೆಯನ್ನು ಮಾನವ ಎಷ್ಟು ಕಾಲ ಸಹಿಸಬಲ್ಲನು? ಈ ಒತ್ತಡಗಳಿಂದ ಮುಕ್ತಿಯೋ ಇಲ್ಲವೇ ಎಂಬ ಪ್ರಶ್ನೆಗಳಿಗೆ ಯಾರೂ ಉತ್ತರ ಕೊಡುವ ಸ್ಥಿತಿಯಲ್ಲಿಲ್ಲ.

ಮಾನಸಿಕ ಸಮತೋಲನ: ಪದೇ ಪದೇ ನಾನಾ ರೀತಿಯ ಬದಲಾವಣೆಗಳಿಗೆ ನಿರಂತರವಾಗಿ ಮನಸ್ಸು ಹೊಂದಿಕೊಳ್ಳುವುದು ಕಷ್ಟವಾದಾಗ, ಮಾನಸಿಕ ಸಮತೋಲನದ ಹತೋಟಿ ತಪ್ಪುವ ಸಂಭವ ಹೆಚ್ಚಾಗಿರುತ್ತದೆ. ನಾವು ವಾಸಿಸುವ ಪರಿಸರವು ಎಲ್ಲಾ ರೀತಿಗಳಲ್ಲೂ ಆಗಿಂದಾಗ್ಯೆ ಬದಲಾಯಿಸುತ್ತಿದ್ದರೆ ಮಾನಸಿಕ ಹಾಗೂ ದೈಹಿಕ ಚಟುವಟಿಕೆಗಳಲ್ಲಿ ಬಳಲಿಕೆ ಉಂಟಾಗುತ್ತದೆ. ರೋಗಗಳಿಗೂ ನಾಂದಿ ಆಗಬಹುದು. ಶೀಘ್ರಗತಿಯಲ್ಲಿ, ನಿರಂತರವಾಗಿ ಉಂಟಾಗುವ ಅನಿರೀಕ್ಷಿತ ಬದಲಾವಣೆಗಳು ನಾನಾ ಬಗೆಯ ಆಘಾತಗಳನ್ನು ಉಂಟುಮಾಡುವುವು. ಮಾನಸಿಕ ಒತ್ತಡಗಳನ್ನು ಕಡಿಮೆ ಮಾಡುವುದಕ್ಕಾಗಿಯೇ ಸಾವಿರಾರು ಬಗೆಯ ಔಷಧಿಗಳು ಮತ್ತು ಮಾತ್ರೆಗಳು ತಲೆ ಎತ್ತಿವೆ. ವಯಸ್ಕರು ಹಾಗೂ ಕಿರಿಯರು ತಮಗರಿವಿಲ್ಲದಂತೆಯೇ ಈ ಔಷಧಗಳ ಮೊರೆ ಹೊಕ್ಕು ಅವುಗಳ ದಾಸರಂತೆ ಜೀವಿಸುತ್ತಿದ್ದಾರೆ.

ಈ ಆಘಾತಗಳ ಪರಿಣಾಮಗಳನ್ನು ಎದುರಿಸಲು ಪ್ರತಿವ್ಯಕ್ತಿಯೂ ಕೆಲವು ಮಾರ್ಗಗಳನ್ನು ಅನುಸರಿಸುವುದು ಒಳ್ಳೆಯದು. ಮೊದಲನೆಯದಾಗಿ ಈ ಆಘಾತವನ್ನು ಎದುರಿಸುವ ಮನೋಸ್ಥೈರ್ಯವನ್ನು ವೃದ್ಧಿಪಡಿಸಿಕೊಳ್ಳಬೇಕು. ಅರಿವಿಲ್ಲದೆಯೇ ನಾವು ನಿತ್ಯವೂ ಅನೇಕ ಕಾರ್ಯಗಳನ್ನು ಮಾಡುತ್ತಿರುತ್ತೇವೆ. ಆ ಕೆಲಸಗಳನ್ನು ಸರಿಯಾಗಿ ಅರ್ಥಮಾಡಿಕೊಂಡು, ಅದರ ನಿಜವಾದ ಗುರಿಯನ್ನು ಗ್ರಹಿಸಿ ಕಾರ್ಯಗಳನ್ನು ನಿರ್ವಹಿಸಲು ಆರಂಭಿಸಬೇಕು. ನಮ್ಮ ಹೃದಯದ ಬಡಿತ, ನಿದ್ರಾಹೀನತೆ, ಸ್ವಲ್ಪ ಕೆಲಸ ಮಾಡುವಷ್ಟರಲ್ಲೇ ವಿಶೇಷ ಆಯಾಸ ಉಂಟಾಗುವಿಕೆ ಮೊದಲಾದ ನಮ್ಮ ಶರೀರ ದೌರ್ಬಲ್ಯಗಳನ್ನು ನಾವೇ ಅರ್ಥಮಾಡಿಕೊಂಡು

ನಮ್ಮ ದೈಹಿಕ ಹಾಗೂ ಮಾನಸಿಕ ಶಕ್ತಿಗಳ ಮಿತಿಯನ್ನು ಅರಿಯಬೇಕು. ಒಂದು ಗೊತ್ತಾದ ಕ್ರಮದಲ್ಲಿ ಮತ್ತು ಒಂದು ನಿಗದಿಯಾದ ವೇಗದಲ್ಲಿ ಬದಲಾವಣೆಗಳಿಗೆ ಹೊಂದಿಕೊಳ್ಳಬೇಕು.

ಯುಕ್ತಕ್ರಮಗಳು : ಬೇಸರವಾದಾಗ ನಮ್ಮ ಕಿವಿ ಒಡೆದು ಹೋಗುವಂತೆ ಧ್ವನಿಮುದ್ರಿಕೆಗಳನ್ನು ಹಾಕಿಕೊಳ್ಳುವಿಕೆ, ಧೂಮಪಾನ, ಮದ್ಯಪಾನ, ಮಾತ್ರೆಗಳ ಸೇವನೆ, ಒಂಟಿಯಾಗಿ ಸಮುದ್ರ ತೀರದಲ್ಲಿ ಸಂಚಾರಕ್ಕೆ ಹೋಗುವಿಕೆ ಮೊದಲಾದ ಚಟಗಳಿಂದ ಸಮಸ್ಯೆ ಬಗೆಹರಿಯುವುದಿಲ್ಲ. ತಾತ್ಕಾಲಿಕ ಬಳಕೆಗೆಂದೇ ತಯಾರಿಸಲ್ಪಟ್ಟ ವಸ್ತುಗಳನ್ನು ಕೊಳ್ಳದಿರುವುದೇ ಉತ್ತಮ. ಒಂದು ವಸ್ತುವನ್ನು ಸಾಧ್ಯವಾದಷ್ಟು ಹೆಚ್ಚು ಕಾಲ ಉಪಯೋಗಿಸುವುದು ಒಳ್ಳೆಯದು. ಪ್ರತಿನಿತ್ಯವೂ ಮಾರುಕಟ್ಟೆಯಲ್ಲಿ ನೂರಾರು ಹೊಸ ವಸ್ತುಗಳು ಗೋಚರಿಸಿದ ಕೂಡಲೇ ಹಳೆಯ ವಸ್ತುಗಳನ್ನು ತ್ಯಜಿಸಿ ಉತ್ಸಾಹದಿಂದ ಹೊಸ ವಸ್ತುಗಳನ್ನು ಕೊಂಡು ಅವುಗಳ ಬಳಕೆಯನ್ನು ಪ್ರಾರಂಭಿಸಬಾರದು. ನಮ್ಮ ನೆರೆಹೊರೆಯಲ್ಲಿರುವ ಕೆಲವು ವಸ್ತುಗಳನ್ನಾದರೂ ಪ್ರೀತಿಸಿ, ಅವುಗಳೊಡನೆ ಆತ್ಮೀಯತೆಯನ್ನು ಬೆಳಸಿಕೊಳ್ಳಬೇಕು. ಈ ರೀತಿ ತಿಳಿಸಿದಾಗ ಬದಲಾವಣೆಗಳನ್ನು ತಡೆಯಬೇಕು ಅಥವಾ ಅವುಗಳನ್ನು ಸ್ವಾಗತಿಸಬಾರದು ಎಂದು ಭಾವಿಸಬಾರದು. ಬದಲಾವಣೆಗಳನ್ನು ತಡೆಯಲು ಪ್ರಯತ್ನಿಸುವುದು ಮೂರ್ಖತ್ವವಾಗುವುದು. ಬುದ್ಧಿವಂತಿಕೆಯಿಂದ ಅವುಗಳ ಸ್ವಾಗತಕ್ಕೆ ನಾವು ಸಿದ್ಧರಾಗುವುದು ಜಾಣತನ. ಇಬ್ಬರು ಅಧಿಕಾರಿಗಳ ನಡುವೆ ಸ್ವಲ್ಪ ವೈಮನಸ್ಸು ಬಂದ ಕೂಡಲೇ ಹಿರಿಯ ಅಧಿಕಾರಿಯು ಕಿರಿಯ ಅಧಿಕಾರಿಯ ವರ್ಗಾವಣೆಗೆ ಆಜ್ಞೆ ಮಾಡಬಾರದು. ಪತಿಯನ್ನು ಕಳೆದುಕೊಂಡು ವಿಧವೆಯಾದವಳು ಕೂಡಲೇ ತನ್ನ ಮನೆಯನ್ನೇ ಮಾರಲು ಪ್ರಯತ್ನಿಸಬಾರದು.

ಹಿಂದಿನ ಕಾಲದಲ್ಲಿ ಹಬ್ಬದ ಆಚರಣೆಗಳು ಅರ್ಥಪೂರ್ಣವಾಗಿದ್ದು ಮನಸ್ಸಿಗೆ ಉಲ್ಲಾಸ ಮತ್ತು ಮನೋರಂಜನೆಗಳನ್ನು ಒದಗಿಸುತ್ತಿದ್ದುವು. ಇಂದಿಗೂ ಇವುಗಳ ಆಚರಣೆಯನ್ನು ಮುಂದುವರಿಸುವುದು ಒಳ್ಳೆಯದು. ಮಿತ್ರರಿಗೆ ಹೊಸ ವರ್ಷದ ಶುಭಾಶಯಗಳನ್ನು ಕಳುಹಿಸುವುದು, ಅವರ ಜನ್ಮದಿನೋತ್ಸವಗಳಲ್ಲಿ ಭಾಗವಹಿಸಿ ಉಡುಗೊರೆ ನೀಡುವುದು ಮೊದಲಾದ ಹವ್ಯಾಸಗಳಿಂದ, ಸಂಪೂರ್ಣವಾಗಿ ತಾತ್ಕಾಲಿಕವೆಂದು ಭಾವಿಸಿರುವ ಸ್ನೇಹವನ್ನು ಶಾಶ್ವತವಾದ ಸ್ನೇಹದ ದಾರಿಯೆಡೆಗೆ ಒಯ್ಯಬಹುದು.

ಕೇವಲ ಮೇಲೆ ಕಾಣಿಸಿದ ವೈಯಕ್ತಿಕ ಹವ್ಯಾಸಗಳಿಂದಲೇ ಸಮಸ್ಯೆ ಬಗೆಹರಿಯುವುದಿಲ್ಲ. ಸಮಾಜವು ತೀವ್ರಗತಿಯಲ್ಲಿ ಬದಲಾಯಿಸುತ್ತಿದೆ ಎಂಬ ಅಂಶ

ವನ್ನು ಪ್ರತಿಯೊಬ್ಬರೂ ಸದಾಕಾಲದಲ್ಲೂ ನೆನಪಿನಲ್ಲಿಟ್ಟಿರಬೇಕು. ಸಮಾಜ ನಾಗಾಲೋಟದಲ್ಲಿ ಮುಂದುವರಿಯುತ್ತಿರುವಾಗ ವ್ಯಕ್ತಿ ಆಮೆ ವೇಗದಲ್ಲಿ ಸಾಗುವುದು ಸಾಧ್ಯವಿಲ್ಲ. ಆದುದರಿಂದ ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರಗಳೂ ಈ ಸಮಸ್ಯೆಯ ಪರಿಹಾರಕ್ಕೆ ನೆರವಾಗಬೇಕು.

ಶಿಕ್ಷಣ ರಂಗದಲ್ಲಿ ತೀವ್ರವಾದ ಮಾರ್ಪಾಟುಗಳು ಆಗಬೇಕು. ಮುಂಬರುವ ವರ್ಷಗಳಲ್ಲಿ ಶ್ರಮದಾಯಕವಾದ ಹಾಗೂ ಒಂದು ನಿಗದಿಯಾದ ವಿಧಾನ ದಲ್ಲಿ ಮಾಡಬೇಕಾದ ಅನೇಕ ಕೆಲಸ ಕಾರ್ಯಗಳನ್ನು ಯಂತ್ರಗಳು ನಿರ್ವಹಿಸುವುವು. ಬುದ್ಧಿಶಕ್ತಿಯ ಅಗತ್ಯ ಮತ್ತು ರಚನಾತ್ಮಕವಾದ ಕಾರ್ಯ ಗಳ ಯೋಜನೆ ಮುಂತಾದ ಕ್ಷೇತ್ರಗಳಲ್ಲಿ ಮಾತ್ರ ಮಾನವಶಕ್ತಿಯ ಅಗತ್ಯ ಕಂಡು ಬರುವುದು.

ಇಂದು ಶಾಲೆಗೆ ಸೇರುವ ಮಕ್ಕಳು ಹಿಂದಿನ ಕಾಲದ ಚರಿತ್ರೆ ಮತ್ತು ಇತರ ಪಠ್ಯ ವಿಷಯಗಳನ್ನು ಗಿಳಿಪಾಠದಂತೆ ಒಪ್ಪಿಸುವ ತರಪೇತಿ ಪಡೆದರೆ ಸಾಲದು. ಈ ವಿಧವಾದ ಶಿಕ್ಷಣ ಕ್ರಮ ಸ್ವಲ್ಪವೂ ಅಗತ್ಯವಿಲ್ಲ. ಕೇವಲ ವರ್ತಮಾನ ಕಾಲದ ಜ್ಞಾನವನ್ನು ಬೋಧಿಸಿದರೂ ಸಾಲದು. ಏಕೆಂದರೆ ಸ್ವಲ್ಪ ಕಾಲದ ನಂತರ ಈ ವಿಷಯಗಳು ಬಹುಮಟ್ಟಿಗೆ ಬದಲಾವಣೆ ಹೊಂದುವುವು. ಭವಿಷ್ಯತ್ಕಾಲದಲ್ಲಿ ವಿದ್ಯಾರ್ಥಿಗಳು ತಮ್ಮ ಕಾಲ ಮೇಲೆ ತಾವು ನಿಂತುಕೊಳ್ಳ ಬಲ್ಲ ಮತ್ತು ಬದಲಾವಣೆಗಳಿಗೆ ಹೊಂದಿಕೊಳ್ಳಬಲ್ಲ ಆತ್ಮ ವಿಶ್ವಾಸವನ್ನು ಅವರಿಗೆ ಒದಗಿಸಬಲ್ಲ ಶಿಕ್ಷಣವು ಇಂದು ಬೇಕಾಗಿದೆ. ಶಿಕ್ಷಣ ವಿಧಾನಗಳನ್ನು ಸರಿಯಾದ ಕ್ರಮದಲ್ಲಿ ರೂಪಿಸಲು ಸೂಕ್ತ ಕಾರ್ಯಕ್ರಮಗಳ ಯೋಜನೆಗಳನ್ನು ಅಳವಡಿಸಬೇಕಾಗಿದೆ. ಇನ್ನು ಕೆಲವೇ ದಿನಗಳಲ್ಲಿ ನಿರುಪಯುಕ್ತವಾಗುವ ಅಂಶ ಗಳನ್ನು ಇಂದಿನ ಶಿಕ್ಷಣ ಕ್ರಮದಲ್ಲಿ ಸೇರಿಸಬಾರದು. ಭವಿಷ್ಯತ್ಕಾಲಕ್ಕೆ ಬಹಳ ಉಪಯುಕ್ತವಾಗುವ ಅಂಶಗಳ ಬೋಧನೆ ಈಗ ನಡೆಯಬೇಕು. ಹಾಗೆ ತಿಳಿಸಿದ ಮಾತ್ರಕ್ಕೆ ಹಳೆಯ ಸಂಸ್ಕೃತಿಯನ್ನು ನಿರ್ನಾಮ ಮಾಡಬೇಕೆಂದು ಅರ್ಥವಲ್ಲ. ಮೂಲಭೂತ ಅಂಶಗಳಾದ ಸರಿಯಾಗಿ ಓದುವಿಕೆ, ಸ್ಫುಟವಾಗಿ ಬರೆಯುವಿಕೆ, ಗಣಿತದ ಮೂಲತತ್ವಗಳು ಇವುಗಳನ್ನು ಶಿಕ್ಷಣ ಕ್ರಮದಿಂದ ಹೊರಹಾಕಲು ಸಾಧ್ಯವಿಲ್ಲ. ಆದರೆ ಲಕ್ಷಾಂತರ ವಿದ್ಯಾರ್ಥಿಗಳು ಮುಂದಿನ ಕಾಲಕ್ಕೆ ಸ್ವಲ್ಪವೂ ಉಪಯೋಗಕ್ಕೆ ಬಾರದ ವಿಚಾರಗಳ ಅಭ್ಯಾಸದಲ್ಲಿ ಅಮೂಲ್ಯವಾದ ಸಮಯ ವನ್ನು ವ್ಯರ್ಥಮಾಡಲು ಆಸ್ಪದ ನೀಡಬಾರದು. ಉದಾಹರಣೆಗೆ ವ್ಯಾಕರಣ, ಅರ್ಥಶಾಸ್ತ್ರ, ಗಣಿತಶಾಸ್ತ್ರ, ಜೀವಶಾಸ್ತ್ರ ಮೊದಲಾದ ಕೆಲವೇ ವಿಷಯಗಳಿಗೆ

ಸಂಬಂಧಪಟ್ಟಂತೆ ಅತ್ಯಧಿಕ ಗಮನ ನೀಡುವುದು ಉಚಿತವಲ್ಲ. ಮಾನವನ ಜೀವನಕ್ಕೆ ನೇರವಾಗಿ ಸಂಬಂಧಪಟ್ಟ ಕೆಲವು ವಿಷಯಗಳಿಗೆ ಹೆಚ್ಚು ಗಮನ ಕೊಡಬಹುದು. ಅಂದಿನ ಸಾಮಾಜಿಕ ಸಮಸ್ಯೆಗಳ ಸ್ವರೂಪವನ್ನು ಚೆನ್ನಾಗಿ ವಿವರಿಸಿ ಮುಂದೆ ಅವುಗಳ ಪರಿಹಾರೋಪಾಯಗಳನ್ನು ಭೋಧಿಸಬಹುದು. ಸಂಸಾರಗಳ ಭವಿಷ್ಯವನ್ನು ಆನಂದದಾಯಕವಾಗಿ ರೂಪಿಸಲು ಪ್ರೇರಕವಾದ ವಿಷಯಗಳನ್ನು ಭೋಧಿಸಬಹುದು.

ಔದ್ಯೋಗಿಕ ರಂಗದಲ್ಲಿ ಬೆಳವಣಿಗೆಯನ್ನು ಒಂದು ಗೊತ್ತಾದ ವೇಗದಲ್ಲಿ ರೂಪಿಸಬೇಕು. ಬೆಳವಣಿಗೆಯನ್ನು ಯಾವುದೇ ರೀತಿಯಲ್ಲೂ ತಡೆಯಬಾರದು. ಔದ್ಯೋಗಿಕರಂಗದಲ್ಲಿ ಪ್ರಯೋಗಗಳನ್ನು ಅರ್ಥವಿಲ್ಲದಂತೆ ಮತ್ತು ಸ್ವಾರ್ಥ ಉದ್ದೇಶಗಳಿಗೆ ನಡೆಸಬಾರದು. ಪ್ರತಿನಿತ್ಯ ಒಂದು ಚಿನ್ನದ ಮೊಟ್ಟೆ ನೀಡುವ ಕೋಳಿಯನ್ನು, ಎಲ್ಲಾ ಚಿನ್ನವನ್ನೂ ಒಮ್ಮೆಗೇ ಪಡೆಯಲು ಪ್ರಯತ್ನಿಸಿ ಕೊಲ್ಲಲು ಹೋಗುವ ಮಾದರಿಯ ಪ್ರಯೋಗಗಳಿಗೆ ಕೈಹಾಕಬಾರದು. ಯೋಜನೆಗಳು ಹಾಗೂ ಪ್ರಯೋಗಗಳು ಹಂತಹಂತವಾಗಿ ಏಳಿಗೆಯೆಡೆಗೆ ಒಯ್ಯುವ ಏಣಿಗಳಂತೆ ರೂಪಿಸಲ್ಪಡಬೇಕು.

ನೈತಿಕ ಮೌಲ್ಯಗಳು: ವಿಶ್ವದ ಎಲ್ಲಾ ಭಾಗಗಳಲ್ಲೂ ಔದ್ಯೋಗೀಕರಣವನ್ನು ಜವಾಬ್ದಾರಿಯುತವಾಗಿ ಬೆಳವಣಿಗೆಗೆ ಒಳಪಡಿಸಬೇಕು. ಒಂದು ಪ್ರಯೋಗವನ್ನು ನಡೆಸುವ ಮೊದಲು ವಾತಾವರಣದ ಮಾಲಿನ್ಯತೆ, ಜನಜೀವನದ ಮೇಲೆ ಅದರ ಪರಿಣಾಮ ಮೊದಲಾದ ಅಂಶಗಳ ಮೇಲೆ ದೀರ್ಘಾಲೋಚನೆ ನಡೆಯಬೇಕು. ಪ್ರಯೋಗ ನಡೆಸಿ ವಾತಾವರಣ ಕಲುಷಿತಗೊಂಡ ಮೇಲೆ ಹಲುಬಿದರೆ ಪ್ರಯೋಜನವಿಲ್ಲ. ವಾತಾವರಣದಲ್ಲಿ ಅನಗತ್ಯವಾಗಿ ಕರ್ಕಶವಾದ ಶಬ್ದಗಳುಂಟಾಗದಂತೆ ಎಚ್ಚರ ವಹಿಸಬೇಕು. ಸರಿಪಡಿಸಲು ಸಾಧ್ಯವಿಲ್ಲದಂತೆ ವಾತಾವರಣಕ್ಕೆ ಕಲ್ಮಶವನ್ನು ಸೇರಿಸಬಾರದು. ತಕ್ಷಣದ ಫಲಿತಾಂಶಗಳಿಗಿಂತ ದೀರ್ಘಕಾಲದ ಪರಿಣಾಮ ಮತ್ತು ಉಪಯುಕ್ತತೆಗಳಿಗೆ ಹೆಚ್ಚು ಆದ್ಯತೆ ನೀಡಬೇಕು. ಉದಾಹರಣೆಗೆ ವಾಹನಗಳ ನಿರ್ಮಾಣ, ರಸ್ತೆಗಳ ಮಾದರಿಮೇಲೆ ಅವಲಂಬಿಸಬೇಕೇ ವಿನಾ, ವಾಹನ ನಿರ್ಮಾಣಗೊಂಡನಂತರ ಅದಕ್ಕನುಸಾರವಾಗಿ ರಸ್ತೆಗಳ ಬದಲಾವಣೆ, ಗೃಹಗಳ ಬದಲಾವಣೆ ಹಿತಕಾರಿಯಲ್ಲ. ಈ ಪರಿಣಾಮಗಳನ್ನು ಅನಿರೀಕ್ಷಿತವಾಗಿ ಎದುರಿಸುವ ಪರಿಸ್ಥಿತಿ ತಪ್ಪಬೇಕು. ಅನಿರೀಕ್ಷಿತ ಆಘಾತಗಳನ್ನು ತಡೆಗಟ್ಟಲು ಪ್ರಯತ್ನಿಸಬೇಕು. ಪ್ರಯೋಗಗಳ ಫಲಿತಾಂಶ ಶೀಘ್ರ ಪರಿಣಾಮ ಹಾಗೂ ಅನಪೇಕ್ಷಣೀಯ ಆಘಾತಗಳನ್ನು

ಉಂಟುಮಾಡುವಂತಿದ್ದರೆ ಆ ಬಗೆಯ ಪ್ರಯೋಗಗಳನ್ನು ತಡೆಗಟ್ಟಲೂ ಹಿಂಜರಿಯಬಾರದು.

ಇತ್ತೀಚೆಗೆ ಕೆಲವು ಪ್ರಯೋಗಗಳ ಬಗ್ಗೆ ಸಾರ್ವತ್ರಿಕವಾಗಿ ಪ್ರತಿಭಟನೆ ವ್ಯಕ್ತವಾದುದು ಒಂದು ಒಳ್ಳೆಯ ಚಿಹ್ನೆ. ಪ್ರಯೋಗಗಳ ಫಲಿತಾಂಶವನ್ನು ಕಂಡ ನಂತರ ಪ್ರತಿಭಟಿಸುವುದಕ್ಕಿಂತ, ಪರಿಣಾಮಗಳನ್ನು ಮೊದಲೇ ಮನಗಂಡು ಆ ಬಗೆಯ ಪ್ರಯೋಗಗಳನ್ನೇ ಪ್ರತಿಭಟಿಸುವ ಮನೋಭಾವ ಬೆಳೆಯಬೇಕು. ಭವಿಷ್ಯದ ವಿಚಾರಗಳ ಬಗ್ಗೆ ಕೇವಲ ಸರ್ಕಾರ, ರಾಜಕೀಯ ನಿಪುಣರು ಮತ್ತು ವೈಜ್ಞಾನಿಕ ಮೇಧಾವಿಗಳು ಮಾತ್ರ ಚಿಂತಿಸಿ ಕಾರ್ಯತತ್ಪರರಾದರೆ ಸಾಲದು. ಈ ವಿಚಾರಗಳಲ್ಲಿ ಸಾರ್ವಜನಿಕರು ಹೆಚ್ಚು ಸಂಖ್ಯೆಯಲ್ಲಿ ರಚನಾತ್ಮಕವಾಗಿ ಭಾಗವಹಿಸುವಂತೆ ವಿಧಾನಗಳನ್ನು ರೂಪಿಸಬೇಕು.

ಪ್ರಯೋಗ ಹಾಗೂ ನೂತನ ವಿಚಾರಧಾರೆಗಳನ್ನು ರವೇಗದಲ್ಲಿ ಮುನ್ನುಗ್ಗುವ ಪ್ರವಾಹಗಳಂತೆ ಭಾವಿಸಬೇಕು. ಈ ಪ್ರವಾಹಕ್ಕೆ ಅಡ್ಡಗಟ್ಟೆ ನಿರ್ಮಿಸಿ ಕಾಲುವೆಗಳ ಮೂಲಕ ನಿಯಂತ್ರಿತವಾಗಿ ನೀರನ್ನು ಹರಿಯಬಿಟ್ಟರೆ ಜನತೆಯ ಕಲ್ಯಾಣವಾಗುವುದು. ಇಲ್ಲದಿದ್ದರೆ ಪ್ರವಾಹ ಹುಚ್ಚುಹೊಳೆಯಂತೆ ಅನಿರೀಕ್ಷಿತವಾಗಿ ಧಾಳಿಮಾಡಿ ಜನಜೀವನವನ್ನೇ ಕೊಚ್ಚಿಕೊಂಡು ಹೋಗುವುದು.

ಒಟ್ಟಿನಲ್ಲಿ ಪ್ರತಿ ವ್ಯಕ್ತಿಯೂ ಬದಲಾಯಿಸುವ ಪರಿಸ್ಥಿತಿಗಳಿಗೆ ಸತತವಾಗಿ ಹೊಂದಿಕೊಳ್ಳುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಈ ಮನೋಭಾವ ವ್ಯಕ್ತಿಗತ ಜೀವನದಲ್ಲಿ ಮಾತ್ರ ಬೆಳೆದರೆ ಸಾಲದು. ಇಡೀ ಸಮಾಜವೇ ಈ ಪರಿಸ್ಥಿತಿಗೆ ಹೊಂದಿಕೊಂಡು ಪ್ರಗತಿಯತ್ತ ಸಾಗುವ ವ್ಯವಸ್ಥೆ ರೂಪುಗೊಳ್ಳಬೇಕು.

ಬಿ. ಎಸ್. ರಾವ್

ನಮ್ಮ ಪ್ರಗತಿ ಪ್ರತಿಷ್ಠೆಗಳನ್ನು ನೋಡಿ ಆಶ್ಚರ್ಯಪಡುವವರನ್ನು ನಾವು ಹತ್ತಿರ ಕರೆದುಕೊಳ್ಳುತ್ತೇವೆ ಮತ್ತು ಪ್ರೀತಿಸುತ್ತೇವೆ. ಇತರರ ಪ್ರತಿಷ್ಠೆಗಳನ್ನು ನೋಡಿ ನಾವು ಆಶ್ಚರ್ಯಪಟ್ಟರೂ ಅವರನ್ನು ಪ್ರೀತಿಸುವುದಿಲ್ಲ. ಹತ್ತಿರ ಕರೆದು ಕೊಳ್ಳುವುದಿಲ್ಲ.

—ರೋಚೆಫೋಲ್

ಕಾಯಿ ಕೊಡುವುದು

‘ಕಾಯಿ ಕೊಡುವುದು’ ಎಂದಾಕ್ಷಣ ನೆನಪಿಗೆ ಬರುವುದು ಶ್ರಾವಣ ಮಾಸ ಮತ್ತು ಗೌರಿಹಬ್ಬದ ಮಾಸ. ‘ಸೈಣ್ಣಸೋಮಾರ’ (ಸೋಮವಾರ) ಅಂತಲೂ ನಾಗಪ್ಪ (ಹುತ್ತಪ್ಪ)ನನ್ನು ಪೂಜಿಸುವ, ಹಾಲೆರೆದು ಕಾಯಿಕುಕ್ಕುವ ಸಲುವಾಗಿ ‘ನಾಗರಪಂಚಮಿ’ ಎಂದೂ ಶ್ರಾವಣ ಮಾಸದ ಹಬ್ಬದ ಹೆಸರುಗಳು. ಈ ನಾಗರ ಪಂಚಮಿ ನಾಡಿಗೆಲ್ಲ ಬಹುದೊಡ್ಡ ಹಬ್ಬ. ಅದರಲ್ಲೂ ಹೆಣ್ಣು ಮಕ್ಕಳಿಗೆ ತುಂಬು ಸ್ವಾಗತದ ಹಬ್ಬ. ಆದ್ದರಿಂದ ಇದು ಹೆಣ್ಣಿನ ಹಬ್ಬವೇ ಆಗಿದೆ. ತೌರಿಗೂ ತೌರಿನಿಂದ ದೂರಹೋದ ಹೆಣ್ಣಿಗೂ ಬಿಟ್ಟುಹೋಗಲಾರದ ರೀತಿಯಲ್ಲಿ ಬೆಸೆದು ಬಿಟ್ಟಿರುವ ಸ್ಮರಣೀಯ ನೆನಪು ಈ ಹಬ್ಬದ್ದಾಗಿದೆ. ತಾಯಿಗಿರುವ ಮಮತೆ ದೂರದ ಇಲ್ಲವೆ ಹತ್ತಿರದಲ್ಲಿರುವ ತನ್ನ ಮಗಳನ್ನು ತೌರಿಗೆ ಕರೆಸಿಕೊಳ್ಳುವ ಬಯಕೆ ಯಾವಾಗಲೂ ಇದ್ದೇ ಇರುತ್ತದೆ. ಯಾವುದೇ ಹೆಣ್ಣಿಗಿರುವ ತೌರಿನ ಹಂಬಲವೂ ತೌರಿಗೆ ಬಂದು ಹೋಗುವಲ್ಲಿ ಬಿಟ್ಟದಷ್ಟು. ತಾನು ತೊಟ್ಟಿಲನ್ನು ಹೊತ್ತುಕೊಂಡು ತೌರಿನ ಬಣ್ಣವನ್ನು ಉಟ್ಟುಕೊಂಡು ಅಪ್ಪ ಕೊಟ್ಟಂತಹ ಬಳುಲಿ (ಎಮ್ಮೆ, ಹಸು ಇತ್ಯಾದಿ)ಯನ್ನು ಹೊಡೆದುಕೊಂಡು ಹೋಗಲಾರದ ಮನಸ್ಸಿನಿಂದ ತೌರಿನ ಕಿಟ್ಟನ್ನು ಹತ್ತಿ ತಿರುಗಿ ನೋಡುತ್ತ ಹೋಗುತ್ತಿರುವಾಗಲೂ ಮನಸ್ಸು ತೌರಿನಲ್ಲೇ. ಹೀಗಿರುವಾಗಲೇ ತಾನು ತೌರಿಗೆ ವರ್ಷಕ್ಕೆ ಒಂದು ಬಾರಿಯಾದರೂ ಬಂದು ಹೋಗಲೇಬೇಕು. ಇಲ್ಲದಿದ್ದರೆ ಸಮಾಧಾನ ವಿಲ್ಲ; ಹೃದಯಕ್ಕೆ ತೃಪ್ತಿಯಿಲ್ಲ: ಮನಸ್ಸಿಗೆ ಶಾಂತಿಯಿಲ್ಲ. ಅಣ್ಣನ ಬರವಿನ ದಾರಿ ಅವಳಿಗೆ ಹರ್ಷೋದ್ಗಾರವನ್ನುಂಟುಮಾಡುತ್ತದೆ. ಶ್ರಾವಣ ಮಾಸವೇ ಅವಳ ಆಸೆಯನ್ನು ಪೂರೈಸುವ ಸಂದರ್ಭ. ಅಂತೆಯೇ ಗೌರಿಗಣೇಶನ ಹಬ್ಬವೂ ಹೆಣ್ಣುಮಕ್ಕಳ ಹಬ್ಬವಾಗಿದೆ. ಜೊತೆಗೆ ತುಂಬು ಯೌವನದ ನವದಂಪತಿಗಳಿಗೆ ಉಲ್ಲಾಸದ ಚಿಲುಮೆಯುಕ್ಕಿಸುವ ಹಬ್ಬವೆನಿಸಿದೆ. ಮೊದಲ ಬಯಕೆಗಳ ತುಂಬಿದಾಕಾಂಕ್ಷೆಗಳನ್ನು ಸ್ವಾಗತಿಸುತ್ತಿರುವುದೂ ಆಗಿದೆ.

ಶ್ರಾವಣ ಮತ್ತು ಗೌರಿಹಬ್ಬಗಳ ಸಂದರ್ಭಗಳಲ್ಲಿ **ಕಾಯಿಕೊಡುವ ಪದ್ಧತಿ** ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಕಾಯಿಕೊಡುವುದು ಎನ್ನುವುದರಲ್ಲೇ ತವರಿನ ಸಂಬಂಧ ಬಿಟ್ಟುಹೋಗಬಾರದು, ಹೆಣ್ಣುಮಕ್ಕಳಿಗೆ ಈ ರೀತಿಯಲ್ಲಾದರೂ ವರ್ಷಕ್ಕೊಮ್ಮೆ ತೌರಿನ ಕಾಣಿಕೆಯಾಗಿ ಸಲ್ಲಿಸುವುದು–ಎಂಬ ಅರ್ಥ ಕಲ್ಪಿಸಿದೆ. ತೌರಿನಿಂದ ಯಾವಾಗ ಗಂಡನ ಮನೆಗೆ ಹೆಣ್ಣು

ಹೋದಳೋ ಅಂದಿನಿಂದ ಅವಳು ತೌರಿನಲ್ಲಿ ಮೊದಲಿನಂತೆಯೇ ಸ್ವತಂತ್ರವಾಗಿ ಬದುಕಲು ಇಷ್ಟಪಡುವಂತಿಲ್ಲ. ತನ್ನ ತಂದೆ ತಾಯಿಗಳು ಇಲ್ಲವೆ ಅಣ್ಣ ತಮ್ಮಂದಿರು ತನಗೆ ಕೊಡುವ ಉಡುಗೆ-ತೊಡುಗೆಗಳನ್ನು ಕೊಡುವ ಆಭರಣಾದಿ ಕಾಣಿಕೆಗಳನ್ನು ತನ್ನನ್ನು ಮಮತೆಯಿಂದ ಸ್ವಾಗತಿಸಿ ಆದರಿಸಿ ಕೊಡುವಾಗ ಒತ್ತಾಯಪೂರ್ವಕವಾಗಿ ಕೇಳದೆ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಶ್ರಾವಣ ಮಾಸವೇ ತುಂಬು ಸ್ವಾಗತದ ಹಬ್ಬದ ಘಳಿಗೆಯಾಗಿದೆ.

ಕಾಯಿ ಕೊಡುವುದು ತೌರಿಗೆ ಬಂದಿರುವ ಹೆಣ್ಣುಮಕ್ಕಳಿಗೆ ಮಾತ್ರ. ಹತ್ತಾರು ವರ್ಷ ಮನೆಗೇ ಬರುತ್ತಿದ್ದು ಅಲ್ಲಿಗೇ ನಿಲ್ಲಿಸಿದ್ದಾದರೆ ಅವಳಿಗೆ ಮೊದಲ ವರ್ಷದಲ್ಲಿ "ಹೆಡಿಗೆ" ಮಾಡಿ ಕಳಿಸಿ, ವರ್ಷ ವರ್ಷವೂ ಕಾಯಿ ಕೊಡಬೇಕು. ಹೆಣ್ಣನ್ನು ತೌರಿಗೆ ಕರೆದುಕೊಂಡು ಬಂದದ್ದಾದರೆ ಹೆಣ್ಣು ಕೊಟ್ಟ ಊರಿಗೆ ಹೋಗಿ ಕಾಯಿ ಕೊಡುವಂತಿಲ್ಲ, ತೌರಿನಲ್ಲಿ ಕಷ್ಟವಿದ್ದು ತೌರಿಗೆ ಕರೆದುಕೊಂಡು ಬರಲಿಕ್ಕಾಗದೆ ಇರುವ ಹೆಣ್ಣಿಗೆ ಅವರ ಮನೆಗೆ ಹೋಗಿ ಕಾಯಿ ಕೊಟ್ಟು ಬರುತ್ತಾರೆ. ಇಲ್ಲವೇ ತೌರಿಗೆ ಬರುವ ಹೆಣ್ಣೇ ತನ್ನ ಮನೆಯಲ್ಲಿ ತೊಂದರೆಯಿದ್ದ ಘಳಿಗೆಯಲ್ಲಿ ತಾನು ಬರಲಾಗದಿದ್ದರೆ ತನ್ನ ಮನೆಗೇ ಕಾಯಿ ಕೊಟ್ಟು ಕಳುಹಿಸಿ ಎಂದು ತನ್ನ ತವರೂರಿನವರಿಗೆ ಹೇಳಿಕಳಿಸುತ್ತಾಳೆ. ಕಾಯಿ ಕೊಡುವಾಗ ಅನುಸರಿಸುವ ಕ್ರಮ ಹೀಗಿದೆ: ಒಂದು ತೆಂಗಿನಕಾಯಿ, ಒಂದೆರಡು ಸೇರು ಗೋಧಿ ಇಲ್ಲವೆ ಅಕ್ಕಿ, ಹಬ್ಬದ ಉಂಡೆ (ಮುಟ್ಟ ತಂಬಿಟ್ಟು) ಉಂಡೆ, ಎಳ್ಳುಂಡೆ, ಶೇಂಗಾಉಂಡೆ, ಕಡ್ಲೆಉಂಡೆ, ಮಂಡಕ್ಕಿಉಂಡೆ ಹೀಗೆ ನಾನಾ ತರದಲ್ಲಿ ಕಟ್ಟಿರುತ್ತಾರೆ) ಏಳೆಂಟು. ಹೆಣ್ಣಿಗೆ ಕೊಡುವ ಸೀರೆ, ಕುಬುಸ ಇಲ್ಲವೆ ಜಾಕೀಟು. ಅವಳ ಮಕ್ಕಳಿಗೂ ಹೊಲಿಸುವ ಬಟ್ಟೆ ಮತ್ತು ಹೋಳಿಗೆಯ ಹಣ-ಇಷ್ಟನ್ನು ಕೊಡಬೇಕು. ಸೀರೆ ಕುಬುಸಗಳನ್ನು ಕಾಲಕಾಲಕ್ಕೆ ಕೊಡಲಾಗದಿದ್ದಾಗ ಅವಳಿಗೆ ಇಷ್ಟು ಒಂದಿಷ್ಟು ಹಣವನ್ನು ಕೊಡಬೇಕು. ಕಾಯಿ ಕೊಡುವಾಗ ಅವನದು ಇಲ್ಲದಿದ್ದಾಗ " ಹೆಣ್ಣುಗಳ ಸಂಕಟ ಹೇಳತೀರದು. ಏಕೆಂದರೆ ತನ್ನ ತವರಿನವರು ವರ್ಷಕ್ಕೆ ಒಂದು ಬಾರಿಯಾದರೂ ನನಗೆ ಇಷ್ಟನ್ನು ಕೊಡಲಾರರೆ ಎಂಬ ಚಿಂತೆ ಅವಳಿಗೆ ಕಾಡುತ್ತದೆ. ನಾನು ಗಂಡಾಗಿದ್ದರೆ ತಂದೆಯ ಆಸ್ತಿಯಲ್ಲಿ ನನಗೂ ಪಾಲು ದಕ್ಕುತ್ತಿರಲಿಲ್ಲವೆ? ಎಂಬ ಭಾವನೆ ಅವಳಲ್ಲಿ ಮೂಡುವುದು ಸಹಜವಾಗಿರುತ್ತದೆ. ಹಾಗೆಯೇ ಗಂಡಾದವನೂ ಸಹ ಇವನ್ನೆಲ್ಲ ಯೋಚಿಸಿಯೇ ಹೆಣ್ಣಿಗೆ ಕೊಡಬೇಕಾದ್ದನ್ನೆಲ್ಲ ಕೊಟ್ಟು ಅವಳ ಮನತೃಪ್ತಿಗೆ ಸದಾ ಜಾಗೃತನಾಗಿರಬೇಕಾಗುತ್ತದೆ.

ಎಷ್ಟಾದರೂ ಅಣ್ಣ-ತಂಗಿ, ಅಕ್ಕ-ತಮ್ಮರ ಸಂಬಂಧ ಕೆಟ್ಟುಹೋಗದಂತೆ ನೋಡಿಕೊಳ್ಳಬೇಕಾಗುತ್ತದೆ. ಶ್ರಾವಣ ಮಾಸದಲ್ಲಿ ಹೆಣ್ಣುಮಕ್ಕಳನ್ನು ತವರಿಗೆ ಕರೆದುಕೊಂಡು ಬಂದು ಹೆಣ್ಣುಮಕ್ಕಳ ಹಬ್ಬ ಇದಾಗಿರುವುದರಿಂದ ಅವರಿಂದಲೇ ಹುತ್ತಪ್ಪ (ನಾಗಪ್ಪ)ನಿಗೆ ಹಾಲೆರೆಸಿ, ಕಾಯಿ ಮುಟ್ಟಿಸಿ ಆಶೀರ್ವದಿಸಿಕೊಂಡು ಹೋಗುವಂತೆ ನೋಡಿಕೊಳ್ಳಬೇಕು. ಇಬ್ಬರ ಉಸಿರಿರುವತನಕ ಇದು ಮುಂದುವರಿಯಬೇಕು.

ಮದುವೆಯಾದ ಹೊಸದರಲ್ಲಿ ಗಂಡಿನ ಮನೆಯವರು ಹೆಣ್ಣಿಗೆ ಕಾಯಿ ಕೊಟ್ಟು ಹಬ್ಬಕ್ಕೆ ಕರೆದುತರಬೇಕು. ಹೆಣ್ಣಿಗೆ ಕಾಯಿಕೊಡಲಿಕ್ಕೆ ಹೊರಟಾಗ "ಹೆಡಿಗೆ" ಮಾಡಿಕೊಂಡು ಹೋಗಬೇಕು. ಹೆಡಿಗೆ ಮಾಡುವುದೆಂದರೆ ಅದರಲ್ಲಿ ನಾನಾ ರೀತಿಯ ವಸ್ತುಗಳನ್ನು ತುಂಬಿರಬೇಕು. ಹೆಡಿಗೆಯಲ್ಲಿ ಒಂದು ಹಿಡಿ ಅಡಕೆ, ಒಂದು ಕವಳಿಗೆ ಎಲೆ, ಮುಖ್ಯವಾಗಿ ಕೈಹೋಳಿಗೆ (ಪುಟ್ಟಪುಟ್ಟದಾಗಿ ಅಂಗೈನಷ್ಟು ಅಗಲವಾಗಿ ತಟ್ಟಿರುವುದು), ಕೈ ಹೋಳಿಗೆಗಳನ್ನು ಲೆಕ್ಕದ ಪ್ರಕಾರ ಅಂದರೆ ೯ ಕೈ, ೧೩ ಕೈ, ೧೫ ಕೈ, ೧೯ ಕೈ, ೨೫ ಕೈ ಒಟ್ಟಿನಲ್ಲಿ ಹೆಣ್ಣಿನ ಊರಿನ ವಿಸ್ತಾರತೆಯನ್ನು ಗಮನಿಸಿ, ಮನೆಯ ಜನಸಂಖ್ಯೆಯನ್ನು ಲೆಕ್ಕಿಸಿಕೊಂಡು ೨೫ ಕೈಗಿಂತಲೂ ಹೆಚ್ಚು ಇಡಬಹುದು. ಸರಿ ಸಂಖ್ಯೆಗಿಂತ ಒಂದನ್ನಾದರೂ ಕಡಿಮೆ ಇಡಬೇಕು. ಒಂದು ಕೈ ಅಂದರೆ ಒಂದು ಕೈಯಲ್ಲಿರುವ ೫ ಬೆರಳಿಗೆ ಒಂದೊಂದು ಹೋಳಿಗೆಯಂತೆ. ನಂತರ ಎರಡು ತೆಂಗಿನಕಾಯಿ, ನೇಮದಂತೆ ಐದು ತರದ ದಿನಸಿ ಪದಾರ್ಥ (ತರಕಾರಿ), ಕಾಯಿ ಕೊಡಲಿಕ್ಕಾಗಿಯೇ ಕಟ್ಟಿದ ಸ್ವಲ್ಪ ದೊಡ್ಡದೆನಿಸುವ ಉಂಡೆಗಳು ಐದಾರು, ಮೂರ್ನಾಲ್ಕು ಹಣ್ಣು (ಸೇಬು, ಮೂಸಂಬಿ ಇತ್ಯಾದಿ), ಹೆಣ್ಣಿಗೆ ಕೊಡಬೇಕಾದ ಕುಬುಸ (ಅಂದರೆ ಜಾಕೀಟು)ಗಳನ್ನು ಜೋಡಿಯಾಗಿ ಇಟ್ಟಿರುತ್ತಾರೆ. ಏಕೆಂದರೆ ಒಂದನ್ನು ಕೊಟ್ಟು ಒಂದನ್ನು ಕಾಯಿ ಹೋಳಿಗೆಯ ತಲೆಯ ಭಾಗದ ಕಡೆಯವರ ಜೊತೆಗೆ ಹಿಂದಕ್ಕೆ ತರಬೇಕಾಗಿರುತ್ತದೆ. ಇದೆಲ್ಲ ಕೊಟ್ಟು ಬಂದಿವಿ ಎನ್ನುವ ಗುರುತಿಗಾಗಿ. ಈ ನಿಯಮವೆಲ್ಲ ಮದುವೆಯಾದ ಮೊದಲ ವರ್ಷದಲ್ಲಿ ನಡೆಸುವ ಪದ್ಧತಿಯಾಗಿದೆ.

ಕಾಯಿ ಕೊಟ್ಟು ಹೆಣ್ಣನ್ನು ತಮ್ಮ ಜೊತೆಗೆ ಗಂಡಿನ ಊರಿಗೆ ಕರೆದುಕೊಂಡು ಬರಬೇಕು. ಅಕಸ್ಮಾತ್ ಬರದೇ ಹೋದಾಗ ಗೌರಿ ಹಬ್ಬಕ್ಕೆ ಮುಂಚೆ ನಾಲ್ಕೈದು ದಿನಗಳಲ್ಲಿ ಕರೆದುತರಬೇಕು. ಕಾಯಿ ಕೊಡಲು ಮನೆಯವರೊಬ್ಬರು ಮತ್ತೆ ಬೇರೊಬ್ಬರು ಹೋಗಬೇಕು. ಬರೀ ಮನೆಯವರೇ

ಹೋದದ್ದಾದರೆ ಜನ ಅಂದುಕೊಳ್ಳುವುದುಂಟು: 'ಹೊಸ್ತಾಗಿ ಮದುವೆ ಮಾಡಿದಾರೆ ಒಬ್ಬರನಾದ್ರೂ ಕಾಯಿ ಕೊಡಲಿಕ್ಕೆ ಕರೀಲೇ ಇಲ್ಲ. ಅವರೇ ಹೋಪ್ರು. ನಾವು ಹೋದ್ರೆ ಅವರ ಮನೆ ಹೋಳ್ಗೆ ಎಲ್ಲಿ ಉಂಡುಬತ್ತಿದ್ವಾ? ಕಟ್ಟಿದ ಉಂಡೆನೆಲ್ಲ ತಿಂದುಬತ್ತಿದ್ವಾ? ಹೀಗೆ. ಮನೆಯವರೇ ಹೋಗಲಾಗ ದಿದ್ದಲ್ಲಿ ಬೇರೆಯ ಮನೆಯವರನ್ನು ಕಳಿಸಿಕೊಡುತ್ತಾರೆ. ಹತ್ತಾರು ವರ್ಷ ತವರು ಮನೆಗೆ ಬರುತ್ತಿದ್ದು ನಂತರ ಬರಲಾಗದಿರುವ ಹೆಣ್ಣು ಮಕ್ಕಳ ಮನೆಗೆ ಇದೇ ರೀತಿಯಲ್ಲಿ "ಹೆಡಿಗೆ"ಯನ್ನು ಮಾಡಿ ಹೊರಿಸಿ ಕಳಿಸುತ್ತಾರೆ.

ಇನ್ನು ಹೆಣ್ಣಿನ ಕಡೆಯವರು ಹೆಣ್ಣನ್ನು ಕಳಿಸಿಕೊಡುವಾಗ ಹಾಗೆಯೇ ಕಳಿಸುವಂತಿಲ್ಲ. ಮುಖ್ಯವಾಗಿ "ಹೆಡಿಗೆ"ಯ ಕಾರ್ಯವನ್ನು ಬಿಡುವಂತಿಲ್ಲ; ಅತ್ತಲಿಂದಲೂ ಇದೇ ರೀತಿಯಲ್ಲಿ ಹೋಳಿಗೆ ಇಲ್ಲವೆ ಕಾಗಡಬಿನ ಅಡಿಗೆ ಮಾಡಿ ಹೆಡಿಗೆ ಕಳಿಸಬೇಕು. ಹೋಳಿಗೆ ಇಲ್ಲವೆ ಕಾಗಡಬನ್ನು ಅವರವರ ಊರಿನ ಪ್ರತಿಯೊಂದು ಮನೆಗಳಿಗೂ ಹಂಚುತ್ತಾರೆ.

ಗೌರಿಹಬ್ಬಕ್ಕೆ ಮುಂಚೆ ಕಳಿಸಿಕೊಟ್ಟ ಹೆಣ್ಣು ಗಂಡಿನ ಮನೆಯಲ್ಲೇ ಇರಬೇಕು. ಮತ್ತೆ ಹೆಣ್ಣಿನ ಮನೆಯವರು ಗೌರಿಹಬ್ಬಕ್ಕೆ "ಪೆಟ್ಟಿಗೆ" ಮಾಡಿಕೊಂಡು ಬಂದು ಹೆಣ್ಣಿನಿಂದ ಕೊಡ ಹೊರಿಸುವ ನೇಮವನ್ನು ಮಾಡಿದ ಮೇಲೆ ಮರು ದಿನವೇ ಇಲ್ಲವೆ ಯಾವಾಗಲಾದರೂ ಕರೆದುಕೊಂಡು ಹೋಗಬಹುದು. ಹೆಣ್ಣನ್ನು ಕರೆದುಕೊಂಡು ಬಂದ ರಾತ್ರಿ ಗಂಡಿನ ಮನೆಯಲ್ಲಿ ಇರುವಂತಿಲ್ಲ. ಅಂದು ಅವಳನ್ನು ಬೇರೆ ಮನೆಯವರು "ಕೋರೂಟ" (ವಿಶೇಷವಾದ ಊಟ)ಕ್ಕೆ ಕರೆದೊಯ್ಯುತ್ತಾರೆ. ಯಾರೂ ಸಹ ಕರೆದುಕೊಂಡು ಹೋಗದಿದ್ದಾಗ ತುಂಬಿದ ಕೊಡಪಾನದಲ್ಲಿ ಒಂದು ಅಡಿಕೆ ಎಲೆಯನ್ನು ಬಿಡಬೇಕು. ಹಾಗಾದ ಮೇಲೆ ಅದು ಕರೆದುಕೊಂಡು ಹೋದಂತಾಗುತ್ತದಂತೆ.

ಹೆಣ್ಣಿನ ಮನೆಯಿಂದ ಪೆಟ್ಟಿಗೆ ಮಾಡಿ (ತುಂಬಿ) ಕಳಿಸುವಾಗ ಚಕ್ಕುಲಿ, ಕರ್ಜಿಕಾಯಿ ತಿನಿಸುಗಳನ್ನಿಟ್ಟಿರಬೇಕು. ಗಂಧ, ಹಂಗನೂಲು (ದಾರದ ಎಳೆ), ಅಕ್ಕಿಕಾಳು, ನೆನೆಸಿದ ಕಡ್ಲೆಕಾಳು, ಪೂಜುವ ಸಾಮಾನು, ಅಡಿಕೆ, ಎಲೆ, ಚಿಕ್ಕ ಚಿಕ್ಕದಾಗಿ ಕಟ್ಟಿರುವ ಎಳ್ಳುಂಡೆ, ತಂಬಿಟ್ಟು (ಬೆಲ್ಲ, ಅಕ್ಕಿ ಹಾಕಿ ಕುಟ್ಟಿ ಕಟ್ಟಿದ್ದು) ಉಂಡೆ, ಇವೆಲ್ಲಕ್ಕಿಂತ ಮುಖ್ಯವಾಗಿ ಹೆಣ್ಣಿನಿಂದ ಬಾವಿಗೆ ಉಡಿತುಂಬಿಸುವ ಹೊತ್ತಿನಲ್ಲಿ ಬಂದವರಿಗೆ ಕೊಡಲು ಸಾಕಷ್ಟು ಬಾಳೆಹಣ್ಣು, ಹೆಣ್ಣಿಗೆ ಸೀರೆ—ಇವೆಲ್ಲವನ್ನು ಆ "ಪೆಟ್ಟಿಗೆ"ಯಲ್ಲಿ ಇಟ್ಟಿರಬೇಕು. ಅತ್ತಲಿಂದ ಪೆಟ್ಟಿಗೆಯನ್ನು ಹೊತ್ತುಕೊಂಡು ಇಬ್ಬರು ಬಂದಿರುತ್ತಾರೆ.

ಊರಿನ ಇತರ ಹೆಣ್ಣುಮಕ್ಕಳನ್ನು ಐದು ಜನ ಮುತ್ತೈದೆಯರೊಡನೆ ಹೊಂದಿಸಿಕೊಂಡು ಬಾವಿಗೆ ಉಡಿತುಂಬಿಸುವ ಸಂದರ್ಭದಲ್ಲಿ ಆ ಹೆಣ್ಣಿನೊಡನೆ ಕೂಡಿಸಿರಬೇಕು. ಜನವನ್ನು ಕರೆಯದೆ ತಮ್ಮ ತಮ್ಮ ಮನೆಯವರೇ ಹೋಗಿ ದ್ದಾವರೆ 'ಅಂಥಾ ಚಂದಕ್ಕೆ ಮದುವೆ ಮಾಡಿದ್ರು....ಸುದ್ದಿಲ್ಲ ಗದ್ದಿಲ್ಲ.... ಸ್ವಸೇರ್ನ ಕರಕಂಡು ಬಂದ್ರು ಕರೀಲಿಲ್ಲ ಮಾಡ್ಲಿಲ್ಲ. ಅದೆಂತದು ತೆಗಿ!' ಅಂತ ಆಡಿಕೊಳ್ಳುವುದುಂಟು. ಎಲ್ಲರ ಸಹಕಾರದಲ್ಲಿ ಬಾವಿಗೆ ಉಡಿತುಂಬಿಸಿ ಕೊಡ ಹೊರಿಸುವ ಕಾರ್ಯವನ್ನು ಮಾಡಬೇಕು. ಅಂದಿನ ರಾತ್ರಿ ಎಲ್ಲ ದೇವರಿಗೂ ಹಣ್ಣುಕಾಯಿಗಳನ್ನು ಮಾಡಿಸಿಕೊಂಡು ಬರುತ್ತಾರೆ. ಇದಾದ ಮಾರನೆಯ ದಿನ ಹೆಣ್ಣನ್ನು ಮತ್ತೆ ತವರಿಗೆ ಕಳಿಸುವಾಗ ಹೆಡಿಗೆ ಮಾಡಿ ಉಡಿ ಅಕ್ಕಿ ಹಾಕಿ ಕಳಿಸಿಕೊಡುತ್ತಾರೆ.

ಕಾಯಿಕೊಡುವುದು, ಕಾಯಿಕೊಟ್ಟು ಕರೆದುತರುವುದು ಈ ಪದ್ಧತಿ ಈಗಲೂ ಸಹ ವೀರಶೈವರಲ್ಲಿ ಉಳಿದುಕೊಂಡು ಬಂದಿದೆ. ಈ ಕಾರ್ಯದ ಅನಿವಾರ್ಯತೆಯಿಂದ ಗಂಡು-ಹೆಣ್ಣಿನ ಸಂಬಂಧವೂ ಚನ್ನಾಗಿ ಬೆಳೆಯಲಿ ಎಂಬುದೇ ಈ ಜನರ ನಂಬಿಕೆಯಾಗಿದೆ. ಹೆಣ್ಣುಮಕ್ಕಳನ್ನು ವರ್ಷಕ್ಕೊಮ್ಮೆ ಯಾದರೂ ಸತ್ಕರಿಸಿ ಅವರಿಗೆ ತೃಪ್ತಿಯನ್ನೀಯುವುದು ತೌರಿನವರ ಕರ್ತವ್ಯವಾಗಬೇಕು ಎಂಬುದೇ ತೌರಿಗೆ ಕರೆತರುವ ಬರದಿದ್ದಾಗ ಅಲ್ಲಿಗೇ ಕಾಯಿಕೊಡುವ ಅನ್ಯೋನ್ಯತೆಯನ್ನು ಬೆಳೆಸಿದೆ. ಮದುವೆಯಾದ ಹೊಸತರಲ್ಲಿ ಮಾತ್ರ ಮೇಲೆ ಹೇಳಿರುವ ವಿಧಾನವನ್ನನುಸರಿಸುತ್ತಾರೆ. ಒಟ್ಟಿನಲ್ಲಿ ಹೆಣ್ಣಿಗಿರುವ ಆಸೆ ಆಕಾಂಕ್ಷೆಗಳು ಗಂಡು ಮಕ್ಕಳ ಸಂಬಂಧದ ಪ್ರೀತಿಮಮತೆಯಿಂದ ಚಿಗುರೊಡೆದು ಯಾರೂ ಕೂಡ ಒಬ್ಬರನ್ನೊಬ್ಬರು ಬಿಟ್ಟು ದೂರವಾಗಬೇಕಿಲ್ಲ ಎಂಬುದನ್ನು ಸಾರಿ ಹೇಳುವಂತಿದೆ.

ಜೀನಹಳ್ಳಿ ಸಿದ್ಧಲಿಂಗಪ್ಪ

ಮನುಷ್ಯನ ಜೀವಿತಕ್ಕೂ ರಾಷ್ಟ್ರದ ಜೀವಿತಕ್ಕೂ ಸಾಮ್ಯವಿದೆ. ಮನುಷ್ಯನು ತನ್ನ ಆತ್ಮರಕ್ಷಣೆಗೆ ಇತರರ ಪ್ರಾಣ ತೆಗೆಯುವಂತೆಯೇ ರಾಷ್ಟ್ರಗಳು ತಮ್ಮ ಉಳುವಿಗಾಗಿ ಇತರ ದೇಶಗಳೊಂದಿಗೆ ಯುದ್ಧ ಮಾಡುತ್ತವೆ.

—ಮಾಂಟೆಸ್ಕ್ಯೊ

ಅತ್ತಿಗೆ, ಬಳೆ ತೊಡಿ, ಕುಂಕುಮ ಇಡಿ....

ದಿನವೂ ಕಾಲೇಜಿಗೆ ಹೋಗಲು ತಯಾರಾಗಿ ಹೊರಟ ಮಿತಾ ಐ.ಐ.ಟಿ.ಯ ಹತ್ತಿರ ಹೋಗುತ್ತಿದ್ದಂತೆಯೇ, ಕಾಲೇಜಿಗೆ ಹೋಗದೆ ಐ.ಐ.ಟಿ.ಯ ಆ ಕಾಲುವೆಯ ಅಂಚಿನಲ್ಲಿ ಹೋಗಿ ಕುಳಿತುಕೊಳ್ಳೋಣ ಅಂದುಕೊಳ್ಳುತ್ತಿದ್ದಳು. ಚಿಕ್ಕಂದಿನಲ್ಲಿ ಕೂಡ ಅವಳು ಸ್ಕೂಲಿಗೆ ಹೋಗುವಾಗ ದಾರಿಯಲ್ಲಿ ಒಂದು ದೊಡ್ಡ ಕೆರೆಯನ್ನು ದಾಟಿಹೋಗಬೇಕಾಗಿತ್ತು. ಆಗೆಲ್ಲ ಅವಳು ಹೋಗುವಾಗ ಬರುವಾಗ ಅಲ್ಲಿ ನಿಂತು ಏನನ್ನೋ ಯೋಚಿಸುತ್ತಿರಬೇಕು ಅಥವಾ ಪ್ರಾಯಶಃ ಹಾಗೆ ಸುಮ್ಮನೆ ನಿಂತಿರುತ್ತಿದ್ದಳೋ! ಆದರೆ ಈಗ ಬಹಳ ದಿನಗಳಿಂದ ಅವಳಿಗೆ ಯಾರೂ ಇಲ್ಲದಿರುವಾಗ ನೀರಿನ ಹತ್ತಿರ ಹೋಗಿ ಒಬ್ಬಳೇ ಕುಳಿತುಕೊಳ್ಳಬೇಕು ಅನ್ನಿಸುತ್ತಿತ್ತು. ನಡೆದುಹೋಗುತ್ತಿರುವಂತೆಯೇ ಅವಳಿಗೆ ನಡೆದು ಹೋಗುತ್ತಿರುವುದು ಮರೆಯಾಯಿತು. ಅವಳು ಒಂದು ಕೊಳದ ತಡಿಯಲ್ಲಿ ಕುಳಿತಿದ್ದಾಳೆ. ಆ ಕೊಳಕು ನೀರಿನ ಆಳದಿಂದ ಒಂದೊಂದೇ ಕಮಲದ ಮೊಗ್ಗುಗಳು ಮೇಲೆ ಬರುತ್ತಾ ಇವೆ; ಬಂದು ಅರಳುತ್ತಿವೆ. ಮೊಗ್ಗಿನ ಒಳಗೆ ಇದುವರೆಗೆ ಹುದುಗಿದ್ದ ಬಂಗಾರದ ಬಣ್ಣ ಒಮ್ಮೆಲೇ ಸೂರ್ಯನ ಛಾಯೆಯಿಂದ ಝಿಲ್ಲಾಪಿಲ್ಲಿಯಾಗುತ್ತಿವೆ. ಮಿತಾ ಕುಳಿತು ನೋಡುತ್ತಿದ್ದಾಳೆ: ಹೊಂಬಣ್ಣ, ಕೆಂಪು, ಗುಲಾಬಿ ಬಣ್ಣಗಳಲ್ಲಿ ಅರಳುತ್ತಿರುವ ಕಮಲಗಳನ್ನು. ನೀರಿನ ನಾಲ್ಕೂ ಕಡೆ ಬಿದಿರಿನ ಮೆಳೆಗಳು. ಅವುಗಳಿಂದ ಸುಯ್ ಎಂದು ಬೀಸುವ ತಂಪಾದ ಗಾಳಿ. ಬೀಸುತ್ತಿರುವ ಗಾಳಿಯಿಂದಾಗಿ ಒಂದಕ್ಕೊಂದು ತಿಕ್ಕಾಡಿದ ಬಿದಿರು ಮೆಳೆಗಳು ರೋದಿಸುತ್ತಿವೆ. ಬಿದಿರು ಮೆಳೆಗಳಿಂದ ಆವರಿಸಿದ ಕೊಳದಲ್ಲಿ ಅರಳುತ್ತಿರುವ ಕಮಲಗಳನ್ನು ನೋಡುತ್ತಿದ್ದಂತೆ ಅವಳಿಗೆ, ಬಿದಿರುಮೆಳೆಯಲ್ಲಿ ಗಾಳಿ ಚಲಿಸುತ್ತಲೇ ಕೊಳಲ ದನಿಯಾಗುತ್ತದೆ ಎಂದು ಎಲ್ಲೋ ಓದಿದ ನೆನಪು. ಆದರೆ ಇಲ್ಲಿ ಮಾತ್ರ ಯಾಕೆ ಹೀಗೆ ತಿಕ್ಕಾಟದ ಸದ್ದು ಕೇಳಿಬರುತ್ತಿದೆ? ಕೊಳಲ ನಾದ ಯಾಕೆ ಕೇಳಿಸುತ್ತಿಲ್ಲ?....

ಅಷ್ಟರಲ್ಲಿ 'ಉಚಿತ ದರದ ಅಂಗಡಿಯು ಎದುರಿಗೆ ಬಂದಿದ್ದ ಮಿತಾ ಅಂಗಡಿಯ ಒಳಹೊಕ್ಕು, ವಿಚಾರಿಸಿದಳು :

"ಶೆಟ್ರೇ, ವನಸ್ಪತಿ ತುಪ್ಪ ಬಂದಿದೆಯಾ?"

೧೯೮೦ರ ನವಂಬರ್ ತಿಂಗಳ ನವನೀತದ ಸುನೀತಾ ಜೈನ ಅವರ "ತುಮ್ ಚೂಡಿ ಪಹನೊ, ಬಿಂದಿ ಲಗಾವೋ, ಭಾಭಿ..." ಕತೆಯ ಭಾವಾನುವಾದ.

ಒಂದು ಗಳಿಗೆ ಅವಳನ್ನೇ ದಿಟ್ಟಿಸಿದ ಶೆಟ್ಟರು ಉದಾಸೀನದಿಂದ ಹೇಳಿದರು :

"ಬಂದೂ ಆಯಿತು. ಖರ್ಚಾಗಿಯೂ ಆಯಿತು. ನಾನ್ಹೇಳಿದಾಗ ನೀವು ಬರೋದಿಲ್ಲ."

'ಹೇಗೆ ಬರಲಿ ? ಕೆಲಸಕ್ಕೆ ಹೋಗಬೇಕಾಗಿದೆ. ಹಾಗಾಗಿ ಸಮಯ ಸಿಗಲಿಲ್ಲ. ಆಲ್ಲಿ ಎಷ್ಟೋ ಬಾರಿ ಬಂದಿದ್ದೇನೆ. ನೀವೇ ಒಂದು ಡಬ್ಬಿ ಇಟ್ಟಿರಬಾರದೆ' ಎಂದು ಹೇಳಬಹುದಿತ್ತು. ಆದರೆ ಅವಳು ಏನನ್ನೂ ಹೇಳದೆ ಸುಮ್ಮನೆ ಹೊರ ನಡೆದಳು. ಬೇರೆಯವರು ಯಾವ ಮಾತನ್ನು ಸಹಜ ಎಂಬಂತೆ ಹೇಳುತ್ತಿದ್ದರೋ ಅದನ್ನು ಅವಳಿಂದ ಹೇಳಲಾಗುತ್ತಿರಲಿಲ್ಲ. ಶೆಟ್ಟರ ಹತ್ತಿರ ಒಂದೆರಡು ಡಬ್ಬ ಇದ್ದರೆ, ಸರಿಯಾದ ರೀತಿಯಲ್ಲಿ ಕೇಳಿದರೆ ಒಂದು ವಿಧವಾದ ಕರ್ಟಸಿಯಿಂದ ಕೊಟ್ಟೇ ಕೊಡುತ್ತಾರೆ ಅಂತ ಮಿಸೆಸ್ ನಾಯರ್ ಅವಳಿಗೆ ಹೇಳಿಕೊಟ್ಟಿದ್ದರು. ಆದರೆ ಮಿತಾಳಿಂದ ಹಾಗೆ 'ಸರಿಯಾಗಿ' ಕೇಳೋದು ಸಾಧ್ಯವಿರಲಿಲ್ಲ. ಅಲ್ಲದೆ, ಶೆಟ್ಟರು ತುಪ್ಪ ಖರ್ಚಾಗಿಹೋಗಿದೆ ಅಂತ ಹೇಳಿದ ಮೇಲೆ ಕೌಂಟರ ಕೆಳಗೆ ಎರಡು-ಮೂರು ಡಬ್ಬ ಇರಲೇಬೇಕೆಂದು ಅವಳು ಹೇಗೆ ತಾನೆ ಊಹಿಸೋಕೆ ಸಾಧ್ಯ ?

*   *   *

ಅಂಗಡಿಯಿಂದ ಹೊರಬಂದ ಮಿತಾಳಿಗೆ ಜಿಮ್ಮನಿಂದ ಕಾಗದ ಏನಾದರೂ ಬಂದಿದ್ದರೆ ತಾನು ಅವನಿಗೆ ಹೀಗೆ ಬರೆಯಬೇಕು ಅನ್ನೋ ಆಲೋಚನೆ ಬಂತು 'ನಾನೀಗ ವನಸ್ಪತಿ ತುಪ್ಪವನ್ನು ಒಟ್ಟಾಕುವುದರಲ್ಲಿದ್ದೇನೆ. ಹಾಗಾಗಿ ರಿಸರ್ಚ್ ಪೇಪರನ್ನು ಮುಗಿಸಿ ಕಳಿಸಲು ಆಗುತ್ತಿಲ್ಲ' ಅಂತ. ಅಷ್ಟರಲ್ಲಿ ನೆನಪಾಯಿತು : ನಾನು ಪತ್ರದಲ್ಲಿ ಏನನ್ನೂ ಬರೆಯೋದಿಲ್ಲ. ಅಷ್ಟಕ್ಕೂ ಪತ್ರವನ್ನೇ ಬರೆಯೋದಿಲ್ಲ........

ಅಮೇರಿಕದಿಂದ ಹೊರಟಾಗ ಜಿಮ್ ಕೇಳಿದ್ದ :

"ಮಿತಾ, ನೀನ್ಯಾಕೆ ಹೋಗ್ತಿದೀಯೆ ?"

"ಹೇಗೂ ಒಂದಿನ ಹೋಗ್ಲೇಬೇಕಲ್ಲ ಜಿಮ್."

"ಯಾಕೆ ? ನಿಂಗಿಲ್ಲಿ ಏನ್ ತೊಂದರೆಯಾಗಿದೇಂತ ?"

"ಹಾಗಲ್ಲ, ಇಲ್ಲಿ ಇರೋಕೆ ಇಷ್ಟವಾಗುತ್ತೆ. ಜೀವನವಿಡೀಬೇಕಾದ್ರೂ ಇಲ್ಲೇ ಇರಬಲ್ಲೆ. ಆದ್ರೆ ಇಲ್ಲಿ ಸಾಯೋಕೆ ಮಾತ್ರ ಇಷ್ಟವಾಗಲ್ಲ ಜಿಮ್. ಹೊರದೇಶದಲ್ಲಿ ಸಾಯ್ತೀನಿ ಅನ್ನೋ ಕಲ್ಪನೆ ಕೂಡ ಭಯ ಹುಟ್ಟಿಸುತ್ತೆ."

"ನೋಡು ಮಿತಾ, ನಿನ್ನ ಎಷ್ಟೋ ಮಾತು ನಂಗೆ ವಿಚಿತ್ರ ಅನ್ಸುತ್ತೆ.

ಅವ್ರೆಲ್ಲೂ ಈ ಸಾಯೋ ಮಾತಂತೂ ಬಾಳ ವಿಚಿತ್ರವೇ......."

"ಅರ್ಥವಾಗದೇಯಾ? ಅಥ್ವಾ ಅರ್ಥ ಮಾಡಿಕೊಳ್ತಿಲ್ವಾ?"

"ಅದೇ, 'ಕಲ್ಚರಲ್ ಡಿಫರೆನ್ಸ್' ಅನ್ನೋ ಕಾರಣಕ್ಕಾಗಿ?"

"ಅದಲ್ಲ ಜಿಮ್...."

"ಹಾಗಾದ್ರೆ, ಎಲ್ಲಿ ಬದುಕೋಕೆ ಸಾಧ್ಯವಾಗುತ್ತೋ ಅಲ್ಲಿ ಸಾಯೋಕೆ ಹೇಗೆ ಸಾಧ್ಯವಾಗಲ್ಲ ಅನ್ನೋದನ್ನ ತಿಳ್ಸು."

"ಹೂಂ, ನಿಂಗೆ ಅರ್ಥಮಾಡಿಸಬಹುದು ಅನ್ನೋ ಭರವಸೆ ಇಲ್ಲ. ಆದ್ರೂ ಹೇಳ್ತೀನಿ. ನಿಮ್ ದೇಶದಲ್ಲಿ ನಾನು ಸಾಯ್ತೀನಿ ಅನ್ನೋ ನೆನಪು ಬಂದರೆ ಒಂದು ಬಗೆಯ 'ಒಂಟಿತನ'ದ ಅನುಭವವಾಗುತ್ತೆ. ಯಾರಾದ್ರೂ ಅಳುವವರಿದ್ರೆ ಮಾತ್ರ ಸಾವು ಪ್ರಿಯವಾಗುತ್ತೆ ನೋಡು. ಆದ್ರೆ ಇದೂ ಸ್ವಾರ್ಥವೇ."

"ನಿನ್ನ ಮಾತು ಸ್ವಲ್ಪವೂ ತರ್ಕಬದ್ಧವಾದುದಲ್ಲ ಮಿತ್ರಾ. ನೀನು ಹೇಗೆ ಪಿ.ಎಚ್.ಡಿ. ಮಾಡಿದ್ಯೋ ಅರ್ಥವಾಗಲ್ಲ. ಯಾರಿಗಾಗಿ ಯಾರಾದ್ರೂ ಯಾಕೆ ಅಳ್ಬೇಕು? ಕೇಳ್ಲಿ. ಸರಿಯಾಗಿ ಬದುಕಬೇಕು: ಬಸ್ಸೋಕೋ ಅದನ್ನ ಮಾಡಬೇಕು, ಕೊಡಬೇಕು, ಪಡೀಬೇಕು. ಉಳಿದದ್ದೆಲ್ಲಾ ಉಳಿದಂತೆ......."

"ನಿಜ ಜಿಮ್, ಅದ್ರೆ ನನ್ನದು ಕತ್ತಲಲ್ಲಿ ಕಣ್ಣುಬಿಟ್ಟ ಪರಿಸ್ಥಿತಿ. ಇರಲಿ ಬಿಡು. ಅದು ಭಾವನೆಗಳಿಗೆ ಸಂಬಂಧಿಸಿದ ವಿಷಯ. ನಿನ್ನ ತರ್ಕಕ್ಕೆ ಎಟಕುವಂಥದಲ್ಲ."

"ಭಾವನೆಗಳಿಗೆ ನಾನು ಪ್ರಾಶಸ್ತ್ಯ ಕೊಡೋದಿಲ್ಲ ಅಂತಿಲ್ಲ. ಆದರೆ.... ಮನುಷ್ಯ ಬದುಕೋದು ಬಿಟ್ಟು ಯಾಕೆ ಸಾಯೋಕೆ ಹೋಗ್ಬೇಕು? ಅಂದ್ರೆ ಭಾವುಕತೆಯ ಹೆಸರಿನಲ್ಲಿ ಆತ್ಮಹತ್ಯೆ ಮಾಡ್ಕೊಳ್ಳೋದು? ಮಿತ್ರಾ, ನಿಮ್ ದೇಶವನ್ನು ಹತ್ತಿರದಿಂದ ನೋಡಿ ಬಲ್ಲೆ. ನೀನಲ್ಲಿಗೆ ಹೋದ್ರೆ ಖಂಡಿತ ಬೆಳೆಯಲಾರೆ."

"ಹಾಗೆ ಹೇಳ್ಬೇಡ ಜಿಮ್! ಇಷ್ಟು ವರ್ಷಗಳಿಂದ ಹೊರದೇಶದಲ್ಲಿದ್ರೂ ಅದನ್ನ ಜೇರಿಯೋ ಆದ ಒಂದು ದ್ವೀಪದಂತೆ ಮನಸ್ಸಿನಲ್ಲಿ ಕಾಪಾಡಿಕೊಂಡು ಬಂದಿದ್ದೀನಿ. ಇದುವರೆಗಿನ ಜೀವನಕ್ಕೆ ಅಲ್ಲಿ ಹೋದ್ಮೇಲೆ ಶಾಂತಿ ದೊರಕುತ್ತೆ. ಅಲ್ಲಿ ಸ್ನೇಹ-ಸಂಬಂಧ-ಅನುಬಂಧಗಳ ಸಂಸಾರವೇ ನನ್ನ ನಿರೀಕ್ಷೆಯಲ್ಲಿರೋವಾಗ ನಾನು ಇಲ್ಲಿದ್ದೂ ಕೂಡ ಹೇಗೆ ಬೆಳೆಯಬಲ್ಲೆ?"

ಅದ್ನೆಲ್ಲಾ ಮನಸ್ನಲ್ಲೇ ದ್ವೀಪದಂತೆ ಕಾಪಾಡ್ಕೋ ಮಿತ್ರಾ. ಹೋದಮೇಲೆ ನಿಂಗೆ ಅದು ಸಿಗಲಾರದು. ಯಾಕಂದ್ರೆ ಇಲ್ಲೇ ಇರೋ ವಸ್ತು ಹೇಗೆ ಸಿಗೋಕೆ

ಸಾಧ್ಯ? ಅಲ್ಲಿಂದ ಬರುವಾಗ ನೀನು ಬಾಳ ಚಿಕ್ಕವಳಾಗಿದ್ದೆ. ಈಗ ಹಿಂತಿರುಗಿ ಹೋದ್ರೆ ಸುಖಿಯಾಗಿರಲಾರೆ ಅಂತ ನನ್ನ ಮನಸ್ಸು ಹೇಳ್ತಾ ಇದೆ. ನಿಜ್ವಾಗಿಯೂ ನಿಂಗೆ ನಿರಾಶೆ ಆಗುತ್ತೆ"........

* * *

ನಿತಾ ಇದ್ದಕ್ಕಿದ್ದಂತೆ ರಸ್ತೆಯನ್ನು ಬಿಟ್ಟು ಪಕ್ಕದಲ್ಲಿ ನಡೆಯತೊಡಗಿದಳು. ಎದುರಿನಿಂದ ಒಂದು ಇಟ್ಟಿಗೆ ತುಂಬಿರೋ ಟ್ರಕ್ ವೇಗವಾಗಿ ಅವಳ ಕಡೆಗೆ ಬರುತ್ತಿತ್ತು. ಅವಳನ್ನು ಹೆದರಿಸಲಿಕ್ಕಾಗಿಯೇ ಡ್ರೈವರ್ ಗಾಡಿಯನ್ನು ಅಷ್ಟು ವೇಗವಾಗಿ ಓಡಿಸುತ್ತಿದ್ದಾನೇನೋ ಎನ್ನುವಂತಿತ್ತು. ತಾವ್ರುದಂತೆ ಹೊಳೆಯುತ್ತಿರೋ ಡ್ರೈವರನ ಮುಖ ಕಾಣುತ್ತಿದ್ದಂತೆಯೇ ಟ್ರಕ್ ಹೊರಟು ಹೋಯಿತು. ಅದರಲ್ಲಿದ್ದ ಒಂದು ಇಟ್ಟಿಗೆ ಹಾರಿ ರಸ್ತೆ ಮೇಲೆ ಬಿದ್ದು ಚೂರು ಚೂರಾಯಿತು. ಇಟ್ಟಿಗೆ ಅವಳ ತಲೆ ಮೇಲೆ ಬಿತ್ತೇನೋ ಅನ್ನೋ ಹಾಗೆ ಅವಳು ಬೆಚ್ಚಿಬಿದ್ದು ನೋಡಿದಳು. ಅದನ್ನು ನೋಡುತ್ತಿದ್ದಂತೆಯೇ ಅವಳಿಗೆ ತಾನೊಂದು ಕಾರನ್ನು ನಡೆಸುತ್ತಿರುವಂತೆ, ಟ್ರಕ್ಕಿನಿಂದ ಪುಟಿದ ಇಟ್ಟಿಗೆ ಅವಳ ಕಾರಿನ ಗಾಜನ್ನು ಒಡೆದು ಅವಳ ಹಣೆಗೆ ತಾಗಿತು ಅನ್ನುವಂತಾಯಿತು. ಎದೆಯಿಂದ ಹೊರಟ ನಿಟ್ಟುಸಿರನ್ನು ಹತ್ತಿಕ್ಕಿದಳು. ಇವತ್ತು ಕಾಲೇಜಿಗೆ ಹೋಗದೆ ಮನೆಗೇ ಹಿಂತಿರುಗೋಣ ಎನ್ನಿಸಿತು. ಕಾಲೇಜು ಅವಳಿಗೆ ಹಿಡಿಸಲಿಲ್ಲ. ಈಗ ತಾನೆ ಟ್ರಾನ್ಸ್‌ಫರ್ ಮಾಡಿಕೊಂಡೇನೋ ಬಂದಿದ್ದಳು. ಮೊದಲು ಅಧ್ಯಾಪನ ಮಾಡುತ್ತಿದ್ದ ಕಾಲೇಜು ಬಹಳ ದೂರವಾಗಿದ್ದರೂ ಅಲ್ಲಿಯ ವಾತಾವರಣ ಶಾಂತವಾಗಿತ್ತು, ಜನ ಒಳ್ಳೆಯವರಾಗಿದ್ದರು. ಆದರೆ ಇಲ್ಲಿ ಜನ....ಅವಳಿಗೆ ಅರ್ಥವೇ ಆಗುತ್ತಿರಲಿಲ್ಲ. ಅವಳು ಬಂದ ಹೊಸದರಲ್ಲಿ ಕೆಲವರು, 'ಅವಳು ಅಮೆರಿಕ ರಿಟರ್ನ್ಡ್ ಅಪ್ಪ' ಎಂದು ಹಿಂದಿನಿಂದ ತಮಾಷೆ ಮಾಡುತ್ತಿದ್ದರೆ, ಅದನ್ನು ಕೇಳುತ್ತಿದ್ದವರು ನಕ್ಕು, 'ಅಯ್ಯೋ! ಅಷ್ಟೂ ಗೊತ್ತಿಲ್ವೆ? ಅಮೆರಿಕ ರಿಟರ್ನ್ಡ್ ಆಗಿದ್ದರೆ ಈ ಕಾಲೇಜಿಗೆ ಕಲಿಸೋಕೆ ಬರ್ತಾ ಇದ್ಲೆ' ಅನ್ನುತ್ತಿದ್ದರು.

ಅವಳಿಗೆ ರಸ್ತೆಯಲ್ಲಿ ಎಲ್ಲಾದರೂ ಬೇವಿನ ಮರದ ನೆರಳಲ್ಲಿ ಒಂದು ಕಲ್ಲು ಬೆಂಚಿನ ಮೇಲೆ ಕುಳಿತುಕೊಳ್ಳೋಣ ಎನ್ನಿಸಿತು. ಆದರೆ ಬೇವಿನ ಮರದ ನೆರಳಾಗಲಿ, ಕಲ್ಲಾಗಲಿ ಅಲ್ಲಿ ಇರಲಿಲ್ಲ. ತೀಕ್ಷ್ಣವಾದ ಬಿಸಿಲಿನೊಂದಿಗೆ ಬೀಸುತ್ತಿರೋ ಬಿಸಿ ಗಾಳಿಯಿಂದಾಗಿ ಮೈಯೆಲ್ಲ ಬೆವರಿ ಚುಚ್ಚಿದಂತಾಯಿತು.

ಕಾಲೇಜಿನ ಹಿಂಭಾಗದ ಕ್ಯಾಂಟೀನಿನ ಕಡೆಯಿಂದ ಒಳಗೆ ಪ್ರವೇಶಿಸುತ್ತಿದ್ದಂತೆಯೇ ಯಾರೋ ಸೆರಗನ್ನು ಹಿಡಿದು ಎಳೆದಂತಾಯಿತು.

"ಮೇಡಂ"

"ಅರೆ, ಯಾಕಳ್ತಿದೀಯೆ? ಏನಾಯ್ತು?"

"ನನ್ನ ಶುಲ್ಕ ರಿಯಾಯಿತಿ ಮಾಡಿಸ್ಕೊಡಿ ಮೇಡಂ. ನಮ್ ತಂದೆಗೆ ಬಾಳ ಹುಷಾರಿಲ್ಲ. ಅವ್ರಿಂದ ಕೆಲ್ಸಕ್ಕೆ ಹೋಗತ್ತಾ ಇಲ್ಲ. ಅಮ್ಮನಿಂದ ಫೀಸಿಗೆ ಹಣ ಕೊಡೋಕೆ ಆಗಲ್ಲ. ಹಾಗಾಗಿ ನಾನು ಓದೋದನ್ನ ಬಿಡ್ಬೇಕಾಗುತ್ತೆ. ಅಣ್ಣ, ತಮ್ಮಂದಿರ್‍ಯಾರೂ ಇಲ್ಲ. ನಾನೇ ಓದಿ ಕೆಲ್ಸಕ್ಕೆ ಸೇರ್ಬೇಕು......."

"ಅದಕ್ಯಾಕೆ ಅಳ್ಬೇಕು. ಫೀಸು ರಿಯಾಯಿತಿ ಕಮಿಟಿಗೆ ಇವ್ನೆಲ್ಲ ತಿಳ್ಸು. ರಿಯಾಯಿತಿ ಸಿಕ್ಕಬಹುದು."

"ಇಲ್ಲ ಮೇಡಂ, ಆ ಕಮಿಟಿಲಿರೋ ಮೇಷ್ಟ್ರು ರಿಯಾಯಿತಿ ಕೊಡಲ್ಲ ಅಂತಾರೆ."

"ಮತ್ತ್ಯಾಕೆ ಅಳೋಕೆ ಶುರುಮಾಡ್ದೆ? ಯಾಕೆ ರಿಯಾಯಿತಿ ಕೊಡೋದಿಲ್ಲಂತೆ?"

"ಹೋದ್ಸಲ ನೀವು ನಮ್ಗೆ ಕಲಿಸ್ತಾ ಇರಲಿಲ್ವಾ ಮೇಡಂ. ಆಮೇಲೆ ಬೇರೆ ಕ್ಲಾಸಿಗೆ ಕಲ್ಸೋಕೆ ಶುರುಮಾಡಿದ್ರಲ್ಲ. ಆಗ ನಾವೆಲ್ಲ ಪ್ರಿನ್ಸಿಪಾಲರತ್ರ ಹೋಗಿ ನಮ್ಗೆ ಮೇಡಂನೇ ಬೇಕು. ಸೇಠಿ ಮೇಷ್ಟ್ರು ಹೇಳೋದು ನಮ್ಗೆ ಅರ್ಥವಾಗಲ್ಲ ಅಂತ ಮನವಿ ಪತ್ರ ಕೊಟ್ಟಿದ್ವಿ. ಈಗ ಆ ಸೇಠಿ ಮೇಷ್ಟ್ರು ಫೀಸು ರಿಯಾಯಿತಿ ಕಮಿಟೀಲಿದಾರೆ. ಹಾಗಾಗಿ 'ಫೀಸು ರಿಯಾಯಿತಿ ಕೊಡಲ್ಲ. ಇಲ್ಲಿದ್ರೆ ಅದನ್ನ ಯಾರು ಬರೆಸಿದ್ರು? ಯಾರು ಬರೆದ್ರು? ಅಂತ ಹೇಳು' ಎಂದು ಗೋಳಾಡಿಸ್ತಿದಾರೆ.

ಸ್ಟಾಫ್ ರೂಮಿನ ಕಡೆ ಹೆಜ್ಜೆ ಹಾಕುತ್ತಿದ್ದಂತೆ ಅವಳಿಗೆ ತಲೆ ತಿರುಗಿದಂತಾಯಿತು. 'ಮಿತಾ, ನೀನ್ಯಾಕೆ ಹೋಗ್ತಿದೀಯೆ? ಯಾಕೆ ಹೋಗ್ತಿದೀಯೆ? ಮಿತಾ, ನೀನ್ಯಾಕೆ ಹೋಗ್ತಿದೀಯೆ?' ಎಂದು ಜಿಮ್ ಚೀರಿದಂತಾಯಿತು. ಸ್ಟಾಫ್ ರೂಮಿನ ಪರದೆಯನ್ನು ಸರಿಸುತ್ತಿದ್ದಂತೆಯೇ ಅರುಣ ಸೇಠಿ ಕಂಡ. ಸೀದಾ ಅವನ ಹತ್ತಿರ ಹೋಗಿ ನಿಂತವಳೇ,

"ಮಿಸ್ಟರ್ ಸೇಠಿ, ಮಕ್ಕಳನ್ನು ಯಾಕೆ ಸತಾಯಿಸ್ತಿದೀರಿ? ಏನಾದ್ರು ಹೇಳೋದಿದ್ರೆ ನನ್ನ ಹತ್ರ ಹೇಳಿ" ಎಂದಳು.

"ನಂಗೆ ನಿಮ್ ಹತ್ರ ಮಾತಾಡೋಕೆ ಇಷ್ಟವಿಲ್ಲ."

ಅವಳಿಗೆ ತಲೆ ಸಿಡಿಯೋಕೆ ಶುರುವಾಯಿತು. ಜೋರಾಗಿ ನಕ್ಕು, ಉಳಿದ ಸ್ಟಾಫಿನ ಕಡೆ ನೋಡುತ್ತ ಹೇಳಿದಳು:

"ಇವರು ಅರುಣ ಸೇಠಿ ಅಂತ. ಅವರು ನಮ್ಮ ಜೊತೆಗೆಲ್ಲ ಮಾತಾಡಲ್ಲ. ಇವರ ವಿರುದ್ಧ ವಿದ್ಯಾರ್ಥಿಗಳು ಕಾಗದ ಬರೆದಿದ್ದರು. ನಾನದನ್ನು ಹರಿದು ಹಾಕುವುದಾಗಿ ಹೇಳಿದ್ದೆ. ಈ ವಿಷಯ ಯಾರಿಗೂ ಹೇಳ್ಬೇಡಿ ಅಂತ ಹೇಳಿದ ಅವ್ರೆ ಈಗ ಆ ಕಾಗ್ದ ಬರೆಸ್ದೋರು ಯಾರು ಅಂತ ವಿದ್ಯಾರ್ಥಿಗಳನ್ನು ಕೇಳ್ತಿದಾರೆ. ಜೊತೆಗೆ ಅವರ ಫೀಸು ರಿಯಾಯಿತಿ ಕೊಡೋಕೆ ಬೇರೆ ಒಪ್ತಾ ಇಲ್ಲ. ಮಿಸ್ಟರ್ ಸೇಠಿ, ನನ್ನ ಹತ್ರ ಕೇಳ್ಬೇಕಾಗಿತ್ತು, ನಿಮ್ಗೆ ನನ್ಮೇಲೆ ತಾನೆ ಸಂಶಯ ?"

"ನಾನು ನಿಮ್‌ಹತ್ರ ಮಾತಾಡೋಕೆ ಇಷ್ಟಪಡಲ್ಲ ಅಂತ ಹೇಳಿಲ್ವಾ? ನಿಮ್ 'ಬಿಹೇವಿಯರ್' ಬಾಳ ಕೆಟ್ಟಿದೆ."

"ಓಹೋ! ಅದ್ಕೇನಾ ನೀವು ಎಷ್ಟೋ ದಿನದಿಂದ ನನ್ನ ಕಂಡ್ರೆ ಮುಖ ತಿರುಗಿಸ್ಕೊಂಡು ಹೋಗ್ತಿರೋದು. ಉಳಿದೋರಿಗೂ ಏನೇನೋ ಹೇಳಿರ್ಬೇಕು. ಹಾಗಾಗಿ ಬಾಳ ಜನ ನನ್ನ ಕಣ್ತಪ್ಪಿಸ್ತಾರೆ. ಸರಿಯಾಗಿ ಉತ್ರ ಕೂಡ ಕೊಡಲ್ಲ. ಇದೇ 'ಬಿಹೇವಿಯರ್'ನೇ ಕಲಿಯೋಕೆ ಬಂದಿದೀನಿ........?"

ಮಿತಾ ಒಮ್ಮೆಲೇ ಅಲ್ಲಿರೋ ಕುರ್ಚಿಮೇಲೆ ಕುಕ್ಕರಿಸಿದಳು. ಇಡೀ ಸ್ಟಾಫ್ ರೂಮು "ದಿ ಬರ್ಡ್ಸ್" ಫಿಲಂನ ಒಂದು ಸೀನಿನಂತಾಯಿತು. ಕಾಗೆಹಾಗೆ ಎಲ್ಲರೂ ಒಟ್ಟಾಗಿ ಕೌವ್ ಕೌವ್ ಅಂತ ಅವಳ ಮೇಲೆ ಬಿದ್ದರು. ಅರುಣ ಸೇಠಿಯಂತೂ ರೆಕ್ಕೆ ಬಿಚ್ಚಿದ ಹದ್ದಿನಂತೆ ಅವಳ ಮೇಲೆ ಎರಗಿದ. ಅವಳಿಗೆ ಉಸಿರಾಡಲೂ ಸಾಧ್ಯವಾಗಲಿಲ್ಲ. ಆ ದೃಶ್ಯವನ್ನು ನೋಡಲಾರದವಳಂತೆ ತನ್ನೆರಡು ಕೈಗಳಿಂದಲೂ ಕಣ್ಣನ್ನು ಗಟ್ಟಿಯಾಗಿ ಮುಚ್ಚಿಕೊಂಡಳು.

* * *

ತನ್ನ ಕಲಾಗುರು ಮೌಸಾಜಿ ಅವರ ತೊಡೆಮೇಲೆ ತಲೆ ಇಟ್ಟು, ಮಿತಾ ಬಹಳ ಹೊತ್ತಿನಿಂದ ಅಳುತ್ತಿದ್ದಳು. ಅತ್ತು ಅತ್ತು ಅವಳ ಬಿಕ್ಕಳಿಕೆ ನಿಂತು ಹೋಯಿತು. ಕಾಲೇಜಿನಲ್ಲಿ ತನ್ನನ್ನು ಸಂಭಾಳಿಸಿಕೊಳ್ಳಲಾರದೆ ಒಂದು ಟ್ಯಾಕ್ಸಿ ಹಿಡಿದು ತನ್ನ ತಂದೆ, ಗೆಳೆಯ, ಸಹೋದರ ಎಲ್ಲಾ ಆಗಿರುವ ಮೌಸಾಜಿ ಅವರಲ್ಲಿಗೆ ಬಂದಿದ್ದಳು ಮಿತಾ. ಆಗಿನಿಂದಲೂ 'ಜನ ಯಾಕೆ ಇಷ್ಟು ಕೆಟ್ಟೋರು ? ಸುಳ್ಯಾಕೆ ಹೇಳ್ತಾರೆ ?'........ಅಂತ ಅಳುತ್ತಲೇ ಇದ್ದಳು.

ಅತ್ತೂ ಅತ್ತೂ ಅವಳ ದುಃಖ ಕಡಿಮೆಯಾದ ಮೇಲೆ ಮೌಸಾಜಿಯವರು ಅವಳ ಮುಖವನ್ನು ಎತ್ತಿದರು ; ಆದರೆ ಏನನ್ನೂ ಹೇಳಲಿಲ್ಲ. ಅವಳ ಅಂತರ್ಯವನ್ನು ತಾಗುವಂತೆ ಆಳವಾಗಿ ದಿಟ್ಟಿಸಿದರು. 'ಮಗು, ಇಷ್ಟುದಿನ ಯಾಕೆ

ಬರಲಿಲ್ಲ? ಎಲ್ಲಿದ್ದೆ? ಇದೆಲ್ಲ ಏನು?' ಎಂದು ಕೂಡ ಪ್ರಶ್ನಿಸಲಿಲ್ಲ. ಸರಿ, ಅವಳನ್ನು ಆಳವಾಗಿ ದಿಟ್ಟಿಸಿದರು; ಅವಳ ನೋವಿನ ತೀಕ್ಷ್ಣತೆ ಎಷ್ಟು ಎಂಬುದನು ಅರ್ಥಮಾಡಿಕೊಂಡರು. ಏನನ್ನೂ ಹೇಳದೆ, ಏನನ್ನೂ ಕೇಳದೆಯೇ ಅವರು ಅವಳ ಆತ್ಮವನ್ನು ಸಂತೈಸಿ ಹೊರಟುಹೋದರು.

ಮನೆಗೆ ಹೋಗುವಷ್ಟರಲ್ಲಿ ಬಿಸಿಲು ಕಡಿಮೆಯಾಗಿತ್ತು. ಆಕಾಶದಲ್ಲಿ ಅಲ್ಲೊಂದು ಇಲ್ಲೊಂದು ಮೋಡಗಳು ಹರಡಿದ್ದವು. ಅವಳು ಸ್ನಾನಮಾಡಿ ಚಂದದ ಡಿಸೈನಿರೋ ಒಳ್ಳೇ ಜಾರ್ಜೆಟ್ ಸೀರೆಯುಟ್ಟು ಕನ್ನಡಿಯಲ್ಲಿ ತನ್ನ ಪ್ರತಿಬಿಂಬ ನೋಡುತ್ತಿರುವಾಗ ಇವತ್ತು ಗುರುವಾರ ಅನ್ನೋದು ನೆನಪಾಯಿತು. ವಿಶು ಇವತ್ತು ಬಂದರೂ ಬರಬಹುದು ಅಂದುಕೊಳ್ಳುತ್ತ ಬಿಡಿದಾದ ಹಣೆಗೆ ಬೊಟ್ಟಿಟ್ಟುಕೊಂಡಳು. ವಿಶು ಅವಳಿಗಾಗಿ ಹಣೆ ಬೊಟ್ಟಿನ ಪ್ಯಾಕೆಟ್ಟುಗಳನ್ನು ಮತ್ತು ಒಂದು ಬಳೆ ಅಂಗಡಿಯನ್ನೇ ಖರೀದಿಸಿ ತಂದಿದ್ದ.

"ಈ ಬೋಳು ಕೈ ನಂಗೆ ಇಷ್ಟವಾಗಲ್ಲ ಅತ್ತೆ. ನೀವು ಬಳೆ ತೊಡೋಲ್ವಾ? ಬೊಟ್ಟು ಯಾಕೆ ಇಟ್ಕೊಳ್ಳಲ್ಲ?" ಎಂದು ಕೇಳಿದ್ದ.

"ಅಯ್ಯೋ ಹುಚ್ಚ, ನಾನು ಹನ್ನೆರಡು ವರ್ಷ ಅಮೇರಿಕದಲ್ಲಿ ಇದ್ನಲ್ಲ, ಆಗ ಇದನ್ನೆಲ್ಲಾ ಇಟ್ಕೊಳ್ತಿದ್ನಾ? ಅಲ್ಲಿ, ಅಲ್ಲಂತೂ ಇದೆಲ್ಲ ಸಿಗ್ತಾನೂ ಇಲ್ಲ. ಈಗ ಇದೆಲ್ಲ ಕಷ್ಟವಾಗುತ್ತೆ."

"ಕಷ್ಟವಾದ್ರೆ ಆಗ್ಲಿ. ಇನ್ಮೇಲೆ ಬರಿಗೈಯಲ್ಲಿರಲ್ಲ ಅಂತ ಮಾತು ಕೊಡಿ."

ಎರಡು ಕೈಗಳಿಗೂ ಬಳೆ ತೊಟ್ಟುಕೊಳ್ಳುತ್ತಲೇ ಅವಳ ಆಲೋಚನೆ ಮುಂದುವರಿಯಿತು. ಪ್ರಾಯಶಃ ವಿಶು ಇವತ್ತೂ ಬರೋಲ್ಲವೇನೋ. ಹಿಂದಿನವಾರವೂ ಬಂದಿರಲಿಲ್ಲ. ಅವಳೇನೋ ಕಾಯುತ್ತಿದ್ದಾಳೆ. ಇವತ್ತೂ ಅದು ಸುಳ್ಳಾಗಬಹುದು. ಬರದಿದ್ದಾಗ ಅವಳು 'ಯಾಕೆ ಬರಲಿಲ್ಲ ಹೇಳು?' ಅಂತ ಕೇಳುತ್ತಿದ್ದಳು. ಸಿಟ್ಟುಬಂದು ಒಮ್ಮೆ ಹಾಗೆ ಕೇಳದಿದ್ದರೆ ಎಷ್ಟೋ ದಿನಗಳವರೆಗೆ ಅವನಿಗೇ ನೋವಾಗುತ್ತಿತ್ತು. ಎಷ್ಟೋ ಬಾರಿ ಅವಳು 'ನಿಂಗೆ ಸ್ನೇಹಿತರ ಜೊತೆ ಸೇರಿ ಸಿಗರೇಟು, ಪಾರ್ಟಿ ಎಲ್ಲ ಪ್ರೋಗ್ರಾಂಗಳ ಮಧ್ಯೆ ನಂಗಾಗಿ ಅವಳು ಪ್ರಾಯಶಃ ಊಟ ಕೂಡ ಮಾಡ್ದೆ ಕಾಯಬಹುದು ಅನ್ನೋ ನೆನಪು ಕೂಡ ಬರಲಿಲ್ಲ ಅಲ್ವಾ? ಅಷ್ಟು ಪರಿವೆ ಇಲ್ಲದ ಮೇಲೆ ನಾನು ಬಳೆ ಇಟ್ಕೋಬೇಕು ಅಂತ ಯಾಕೆ ಇಷ್ಟಪಡ್ತೀಯ?' ಅಂತ ರೇಗ್ಬೇಕು ಅಂದುಕೊಳ್ಳುತ್ತಾಳೆ.


ಛೀ, ಅವಳು ಹಾಗೆ ಯೋಚಿಸಲಾರಳು. ಬಳೆ ತೊಡುತ್ತಾಳೆ. ಬೊಟ್ಟಿಡುತ್ತಾಳೆ. ಯಾರನ್ನೂ ನಿರ್ಬಂಧಿಸುವುದಿಲ್ಲ; ಯಾವುದಕ್ಕೂ ಬದ್ಧಳಲ್ಲ. ಹಾಗೆ

'ಬಿಚ್ಕೋಲಿ ಗೌರಮ್ಮ'ನಾಗಿ ಇರೋದ್ರಲ್ಲೇ ಅವಳಿಗೆ ಸುಖವಿದೆ. ಕಮಲ ಅರಳಿದಾಗ ಸಹಜವಾಗಿಯೇ ಅದರೊಳಗಿನ ಕೇಸರ ಸುಖದ ಭಾವನೆಯಿಂದ ಹರಡಿಕೊಳ್ಳುತ್ತದೆ. ವಿಶು ಯಾವಾಗಲೇ ಬರಲಿ, ತೊಡೆ ಮೇಲೆ ಮಲಗಿ ಕೊಂಡು ಮೊಂಡಾಟ ಮಾಡುತ್ತ ಹೇಳುತ್ತಾನೆ:

"ಮಿತಾ, ಮಿತಾ, ಮಿತಾ! ನೀನು ಅಮ್ಮನೂ ಹೌದು, ಮಿತಾ ಕೂಡ ಹೌದು ಅಂತ ಹೇಳು."

"ಹೌದು ವಿಶು, ನಾನು ಅಮ್ಮನೂ ಹೌದು; ಮಿತಾ ಕೂಡ ಹೌದು. ಕೇಳಿಲ್ಲಿ, ಯಾವಾಗ ಗಾಳಿ ಬಿದಿರಿನ ಮೆಳೆಗಳಲ್ಲಿ ಹಾದು ಬರುತ್ತೋ ಆಗೆಲ್ಲ ಬಿದಿರು ಒಂದಕ್ಕೊಂದು ತಾಕಲಾಡುವುದರಿಂದ ಕಟ ಕಟ ಅನ್ನೋ ಸದ್ದು ಬರುತ್ತೆ; ಅಥವಾ ಸುಯ್ ಸುಯ್ ಅನ್ನುತ್ತೆ. ಆದರೆ ಬಿದಿರಿನ ಹೃದಯದಲ್ಲಿ ಮಾತ್ರ ಕೊಳಲಿನ ದನಿ ತುಂಬಿರುತ್ತೆ........"

ಚಂದ್ರಮತಿ



ದೈವೀಕೃಪೆಯಿಂದ ಎಲ್ಲವನ್ನೂ ಸಾಧಿಸಿಕೊಳ್ಳಬಹುದು. ಆದರೆ ಸಾಧಕನ ಸಾಧನೆ ಮಾತ್ರ ಅದಕ್ಕೆ ಅತ್ಯವಶ್ಯ.

—ಶ್ರೀ ಅರವಿಂದ

ಪರರ ಸಂತೋಷಕ್ಕಾಗಿಯೇ ಆತ್ಮಾರ್ಪಣೆ ಮಾಡುವ ಸುಗಂಧ ಹೂವೇ, ನಿನ್ನ ನಿಸ್ವಾರ್ಥ ಸೇವೆಯೇ ಸೇವೆ.

—ಕೀಟ್ಸ್

ಆಹಾರ ವಿಷವೇರಿಕೆ:
ಅದನ್ನು ತಡೆಗಟ್ಟುವುದು ಹೇಗೆ?

೧೯೭೯ರ ಗಾಂಧೀ ಜಯಂತಿ ದಿನದಂದು ಮಹಾರಾಷ್ಟ್ರ ಸರ್ಕಾರ ಗ್ರಾಮಾಂತರ ಪ್ರದೇಶಗಳ ಶಾಲಾಮಕ್ಕಳಿಗಾಗಿ ಉಚಿತ ಹಾಲು ವಿತರಣಾ ಯೋಜನೆಯೊಂದನ್ನು ಪ್ರಾರಂಭಿಸಿತು. ಯೋಜನೆಯ ಉದ್ಘಾಟನಾ ಸಂದರ್ಭದಲ್ಲಿ ಪುಣೆಗೆ ಸಮೀಪದ ವಡಗಾಂವ್—ಪಟೋಲೆ ಗ್ರಾಮದ ೧೫೦ ಮಕ್ಕಳಿಗೆ ಉಚಿತ ಹಾಲು ಒದಗಿಸಿದರು. ಹಾಲು ಕುಡಿದ ಮಕ್ಕಳು ಒಂದು ಗಂಟೆಯೊಳಗಾಗಿ ವಾಂತಿಮಾಡಲು ಪ್ರಾರಂಭಿಸಿದಲ್ಲದೆ ಹೊಟ್ಟೆನೋವು ಮತ್ತು ಭೇದಿಯೂ ಅವರಿಗೆ ಪ್ರಾರಂಭವಾದ್ದರಿಂದ ಅವರನ್ನು ಆಸ್ಪತ್ರೆಗೆ ಸೇರಿಸುವುದು ಅನಿವಾರ್ಯವಾಯಿತು. ಇಂದಿನ ಗಂಭೀರ ಸಮಸ್ಯೆ ಆಹಾರ ವಿಷವೇರಿಕೆ.

ನೆಗಡಿಯನ್ನು ಬಿಟ್ಟರೆ ಪ್ರಪಂಚದಲ್ಲಿರುವ ಸಾಮಾನ್ಯ ಕಾಯಿಲೆ—ಆಹಾರ ವಿಷವೇರಿಕೆ. ಇದಕ್ಕೆ ವರ್ಷಂಪ್ರತಿ ಸಾವಿರಾರು ಭಾರತೀಯರು ಬಲಿಯಾಗುತ್ತಾರೆ. ಕಳೆದ ವರ್ಷ ಮುಂಬಯಿ ಮಹಾನಗರದ ವಿವಿಧ ಭಾಗಗಳಲ್ಲಿ ಆಹಾರದ ವಿಷವೇರಿಕೆಗೆ ತುತ್ತಾದವರ ಸಂಖ್ಯೆ ೫೦೦.

ಸಾಮಾನ್ಯವಾಗಿ ಆಹಾರ ಪದಾರ್ಥಗಳ ಮೇಲೆ ದಾಳಿಮಾಡುವುದು ಬ್ಯಾಕ್ಟೀರಿಯ. ಇದು ಉದರ ಇಲ್ಲವೇ ಕರುಳಿನ ಮೇಲೆ ನೇರವಾಗಿ ದಾಳಿ ನಡೆಸಿ, ಇಲ್ಲವೇ ವಿಷ ಉತ್ಪಾದಿಸುವುದರಿಂದ ಜ್ವಾಲೆ ಹೊತ್ತಿಸುವ ಪರಿಣಾಮವುಂಟಾಗುವುದು. ರಾಸಾಯನಿಕ ಗೊಬ್ಬರ ಮತ್ತು ಕೀಟಗಳ ಔಷಧಗಳು ಆಹಾರದ ಮೇಲೆ ಪರಿಣಾಮವನ್ನುಂಟುಮಾಡಬಲ್ಲವು. ಅನಾರೋಗ್ಯ ಉಂಟಾಗಲು ಕಾರಣ—ವಿಷಾಹಾರ ಅಣಜೆಯ ಸೇವನೆ.

ಶೇಕಡ ೯೦ ಆಹಾರ ವಿಷವೇರಿಕೆಗೆ ಕಾರಣ ಸ್ಟ್ಯಾಫಿಲೋಕಾಕಸ್ ಎಂಬ ಬ್ಯಾಕ್ಟೀರಿಯಮ್. ಸ್ಟ್ಯಾಫಿಲೋಕಾಕಸ್ ಜೀವಾಣುಗಳು ಪಚನಕ್ಕೆ ಅಪಾಯಕಾರಿಯಲ್ಲ, ಆದರೆ ಆಹಾರದಲ್ಲಿ ಕಿರಿಕಿರಿ ಉಂಟುಮಾಡಬಲ್ಲ ವಿಷವನ್ನು ಅದು ಉತ್ಪಾದಿಸಬಲ್ಲುವು. ಇದಕ್ಕೆ ಬಲಿಯಾದವರ ಉದರ, ಕರುಳು, ನರಮಂಡಲದ ಮೇಲೆ ಇದು ಗಂಭೀರ ಪರಿಣಾಮವುಂಟಾಗುವುದು. ಈ ವಿಷ ಸೆಳೆತ, ವಾಕರಿಕೆ, ತಲೆನೋವು, ಭೇದಿ, ನಿರ್ಜಲತೆ—ಇವನ್ನು ಉಂಟುಮಾಡಬಲ್ಲುದು.

ರೀಡರ್ಸ್ ಡೈಜೆಸ್ಟಿನ ೧೯೮೧ರ ನವೆಂಬರ್ ಸಂಚಿಕೆಯಲ್ಲಿ ಪ್ರಕಟವಾದ 'ಫುಡ್ ಪಾಯ್ಸನಿಂಗ್; ಹೌಟು ಅವಾಯ್ಡ್ ಇಟ್' ಎಂಬುದರ ರೂಪಾಂತರ

ಸ್ಟ್ಯಾಫಿಲೊಕಾಕೈನಿಂದ ಸಾವು ಸಂಭವಿಸದಿರುವುದು ಸುದೈವ. ಇದಕ್ಕೆ ಬಲಿಯಾದವರೂ ಒಂದೆರಡು ದಿವಸಗಳಲ್ಲಿ ಚೇತರಿಸಿಕೊಳ್ಳುತ್ತಾರೆ.

ವಡಗಾಂವ—ಪಟೋಲಿ ಗ್ರಾಮದ ಘಟನೆಯ ಬಗ್ಗೆ ತನಿಖೆ ನಡೆಸಿದ ಸಾರ್ವಜನಿಕ ಆರೋಗ್ಯಾಧಿಕಾರಿಗಳು ಮಕ್ಕಳು ಸೇವಿಸಿದ ಹಾಲಿನಲ್ಲಿ ಬಹುಸಂಖ್ಯೆಯಲ್ಲಿ ಸ್ಟ್ಯಾಫಿಲೊಕಾಕಸ್ ಇರುವುದನ್ನು ಪತ್ತೆಹಚ್ಚಿದರು. ಹಾಲು ಬಂದಸ್ಥಳಕ್ಕೆ ಮತ್ತು ಕೊಟ್ಟಿಗೆಗೆ ಅವರು ಭೇಟಿ ನೀಡಿದಾಗ ಏನು ಸಂಭವಿಸಿರಬಹುದೆಂಬುದರ ಮೇಲೆ ಬೆಳಕು ಬಿತ್ತು. ಹಾಲನ್ನು ಸಂಗ್ರಹಿಸಿದ ಮತ್ತು ಮಾರಾಟಕ್ಕಾಗಿ ಬಳಸಲಾದ ಪಾತ್ರೆಗಳು ಮಲಿನವಾಗಿದ್ದರಿಂದ ಅದರಲ್ಲಿ ಸ್ಟ್ಯಾಫಿಲೊಕಾಕಸ್ ಇತ್ತು. ಜಂತುಗಳು ದ್ವಿಗುಣವಾಗಲು ಮತ್ತು ವಿಷ ಉತ್ಪಾದನೆಯಾಗಲು ಇನ್ನೊಂದು ಕಾರಣ ಹಾಲನ್ನು ಚೆನ್ನಾಗಿ ಕಾಯಿಸದಿದ್ದುದು.

ಆಹಾರ ಪದಾರ್ಥಗಳನ್ನು ಅಜಾಗರೂಕತೆಯಿಂದ ಹಿಡಿಯುವುದರಿಂದಲೂ ಸ್ಟ್ಯಾಫಿಲೊಕಾಕಸ್ ಸಂಬಂಧಿ ಸೋಂಕುಗಳು ಹರಡಬಲ್ಲವೆಂದು ಮುಂಬಯಿ ಮಹಾನಗರ ಪಾಲಿಕೆಯ ಆರೋಗ್ಯಾಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

ಕೆಲವು ವರ್ಷಗಳ ಹಿಂದೆ ದೆಹಲಿಯ ವಾಯುವ್ಯದಲ್ಲಿ ಸಿಹಿ ಅಂಗಡಿಯೊಂದರಿಂದ ತಂದ ಬರ್ಫಿ ತಿಂದುದಕ್ಕಾಗಿ ನೂರಕ್ಕೂ ಹೆಚ್ಚು ಜನ ಆಸ್ಪತ್ರೆಗೆ ದಾಖಲಾದರು. ತನಿಖೆಗಾಗಿ ಆರೋಗ್ಯಾಧಿಕಾರಿಗಳು ಅಂಗಡಿಗೆ ಭೇಟಿ ನೀಡಿದಾಗ ಬರ್ಫಿ ತಯಾರಿಸುತ್ತಿರುವನ ಮತ್ತು ಪ್ಯಾಕು ಮಾಡುತ್ತಿರುವವನ ಬಲಗೈ ಬೆರಳು ಕೀವು ತುಂಬಿಕೊಂಡಿದ್ದು ಕಂಡುಬಂತು.

ಸ್ಟ್ಯಾಫಿಲೊಕಾಕಸ್ ಬೆಳೆಯುವುದು ಅರೆಬೆಂದ ಮತ್ತು ವಾತಾವರಣದಲ್ಲಿ ತೆರೆದಿಟ್ಟ ಆಹಾರ ಪದಾರ್ಥಗಳಲ್ಲಿ. ೬೦ಸಿ. ಡಿಗ್ರಿ ಉಷ್ಣತೆಯಲ್ಲಿ ಸುಮಾರು ೩೦ ನಿಮಿಷಗಳಲ್ಲಿ ಬೇಯಿಸಿದ ಆಹಾರ ಪದಾರ್ಥಗಳಲ್ಲಿ ಸ್ಟ್ಯಾಫಿಲೊಕಾಕಸ್ ನಾಶಪಡಿಸಬಹುದು. ಶೀತಕ್ಕೆ ಒಳಪಡಿಸುವುದರಿಂದ ಜೀವಾಣುವನ್ನು ತಡೆಗಟ್ಟಬಹುದೇ ವಿನಾ ಪೂರ್ಣವಾಗಿ ನಾಶಗೊಳಿಸಲಾಗುವುದಿಲ್ಲ.

ಸ್ಟ್ಯಾಫಿಲೊಕಾಕಸ್‌ಗಿಂತಲೂ ಹೆಚ್ಚು ತೀವ್ರವಾದುದು ಅದರ ಸಾಮಾನ್ಯವಲ್ಲದ್ದು—ಸಾಲ್ಮೊನೆಲ್ಲ ಸೋಂಕು. ಇದು ಹರಡುವುದು ಆಹಾರದಿಂದಲೇ. ಸ್ಟ್ಯಾಫಿಲೊಕಾಕಸ್‌ನಂತಲ್ಲದೆ ಸಾಲ್ಮೊನೆಲ್ಲ ಅದಾಗಿಯೇ ಅಪಾಯಕಾರಿ. ಸರಿಯಾಗಿ ದಾಸ್ತಾನು ಮಾಡದೆ ಆಹಾರಪದಾರ್ಥಗಳ ಮೇಲೆ ಸೋಂಕಿಗೆ ಈಡಾದ ಹೆಗ್ಗಣ, ಇಲಿ, ನೊಣಗಳು ಮಲವಿಸರ್ಜಿಸುವುದರಿಂದ ಸಾಲ್ಮೊನೆಲ್ಲ

ಜಂತುಗಳು ಹರಡುತ್ತವೆ. ಎರಡು ಬಾರಿ ಬೇಯಿಸಿದ ಮಾಂಸ, ಮೀನು, ಹಾಲು, ಐಸ್‌ಕ್ರೀಮ್, ಕೆನೆ, ಮೊಸರು—ಇವು ಸಾಲ್ಮೊನೆಲ್ಲಕ್ಕೆ ಹೆಚ್ಚಾಗಿ ಗುರಿಯಾಗಬಲ್ಲವೆಂಬುದು ವೈದ್ಯರೊಬ್ಬರ ಎಚ್ಚರಿಕೆ. ಹೆಚ್ಚು ಜನರಿಗಾಗಿ ಅಡುಗೆ ಸಿದ್ಧಪಡಿಸಿ, ಬರಲಿರುವ ಅತಿಥಿಗಳಿಗಾಗಿ ಅವನ್ನು ತೆರೆದಿಟ್ಟಾಗ ಸಾಲ್ಮೊನೆಲ್ಲದಿಂದ ಆಹಾರ ವಿಷವಾಗುವುದು ಹೆಚ್ಚು.

ವಿಷಾಹಾರ ಸೇವಿಸಿದವರಿಗೆ ಜೀವಿರೋಧಕ ಮದ್ದು, ದ್ರವಾಹಾರದ ಜೊತೆಗೆ ಸಾಕಷ್ಟು ವಿಶ್ರಾಂತಿ ಅಗತ್ಯ. ಆರೋಗ್ಯವಂತರಾದ ವಯಸ್ಕರು ಸೋಂಕನ್ನು ನಿವಾರಿಸಿಕೊಳ್ಳಬಲ್ಲರು. ಆದರೆ ಶಿಶುಗಳು, ಮಕ್ಕಳು ಮತ್ತು ಇನ್ನಿತರ ಕಾರಣಗಳಿಂದ ಅಶಕ್ತರಾದವರನ್ನು ಆಸ್ಪತ್ರೆಗೆ ಸೇರಿಸುವುದು ಅನಿವಾರ್ಯ.

೧೯೮೦ರ ಸೆಪ್ಟೆಂಬರ್‌ನಲ್ಲಿ ಸಂಭವಿಸಿದ ಆಹಾರ ವಿಷಪೇರಿಕೆ ಇತ್ತೀಚಿನ ವರ್ಷಗಳಲ್ಲೇ ಬಹುದೊಡ್ಡದು. ಗುಜರಾತ್ ರಾಜ್ಯದ ಭಾವನಗರದಲ್ಲಿ ಆಲೂಗೆಡ್ಡೆ ಭಾಜಿ ಮತ್ತು ಬೂಂದಿ ತಿಂದ ಸುಮಾರು ೬೦೦ ಜನ ವಿಷಪೇರಿಕೆಗೆ ತುತ್ತಾದರು. ಆಸ್ಪತ್ರೆಗೆ ಸೇರಿಸಿದವರಲ್ಲಿ ಮಕ್ಕಳು ೧೫೦೦, ದೊಡ್ಡವರು ೬೦೦. ತಕ್ಷಣ ಚಿಕಿತ್ಸೆ ನೀಡಿದ್ದರಿಂದ ಒಬ್ಬರನ್ನು ಬಿಟ್ಟು ಉಳಿದವರನ್ನೆಲ್ಲ ಬದುಕಿಸುವುದು ಸಾಧ್ಯವಾಯಿತು.

ಪ್ರಾಣಾಂತಿಕ ಬ್ಯಾಕ್ಟೀರಿಯ: ವಿಬ್ರಿಯೋ ಪ್ಯಾರಾ ಹೆಮೊಲಿಟಿಕಸ್ ಎಂಬ ಇನ್ನೊಂದು ಬ್ಯಾಕ್ಟೀರಿಯ ಉಪ್ಪಿನ ನೀರಿನಲ್ಲಿರುತ್ತದೆ. ಏಡಿ, ಆಯಿಸ್ಟರ್, ಸಮುದ್ರನಳ್ಳಿ ಇವುಗಳನ್ನು ಬೇಯಿಸಿದಾಗ ಅದು ಅವರಲ್ಲಿ ಸೇರಿರುತ್ತದೆ. ಆದರೆ ವಿಬ್ರಿಯೋ ವಿಷದಿಂದ ಹೆಸರಿಸಬಹುದಾದಂಥ ಘಟನೆಗಳೇನೂ ಇಲ್ಲಿಯವರೆಗೂ ವರದಿಯಾಗಿಲ್ಲ. ಉಪ್ಪಿನ ನೀರಿಗೆ ಹೆಸರಾದ ಕಲ್ಕತ್ತ ಮುಂತಾದ ಮಹಾನಗರಗಳಲ್ಲಿ ಜೀರ್ಣನಾಳದ ಉರಿತದಂತಹ ತೀವ್ರವಾದ ರೋಗಗಳು ಉಂಟಾದ ಉದಾಹರಣೆಗಳಿವೆ. ನಗರಗಳಲ್ಲಿರುವ ಹಳ್ಳಕೊಳ್ಳಗಳಲ್ಲಿರುವ ಏಡಿ ಮತ್ತಿತರ ಪ್ರಾಣಿಗಳನ್ನು ತಿನ್ನುವುದರಿಂದ ಅವುಗಳಲ್ಲಿರುವ ವೈಬ್ರಿಯಸ್ ಪರಿಣಾಮ ಉಂಟುಮಾಡಬಲ್ಲವು. ಈ ಹಳ್ಳಗಳಲ್ಲಿ ಬೇಕಾದಷ್ಟು ವೈಬ್ರಿಯಸ್ ಇವೆ ಎಂಬುದನ್ನು ಮೂರು ವರ್ಷಗಳ ಹಿಂದೆ ಪರಿಣತರ ತಂಡ ಕಂಡು ಹಿಡಿಯಿತು. ಕಲ್ಕತ್ತದಲ್ಲಿ ಹೆಚ್ಚಾದ ಜೀರ್ಣನಾಳದ ಉರಿತ ಇದನ್ನು ದೃಢಪಡಿಸುತ್ತದೆ.

ಎಲ್ಲ ಬ್ಯಾಕ್ಟೀರಿಯಗಳ ಪೈಕಿ ಬೊಟ್ಯುಲಿಸಂ ಎನ್ನುವುದು ಅತ್ಯಂತ ಅಪಾಯ

ಕಾರಿ. ಇದಕ್ಕೆ ಗುರಿಯಾದವರಲ್ಲಿ ೨/೩ ಜನ ಸಾಯುತ್ತಾರೆ. ಸಾಮಾನ್ಯವಾಗಿ ಬೊಟ್ಯುಲಿಸಂ ಇರುವುದು ವಾತಾವರಣದಲ್ಲಿ. ಬೊಟ್ಯುಲಿಸಂ ಅವಾಗಿಯೇ ನಿರಪಾಯಕಾರಿ. ಪ್ರತಿಯೊಬ್ಬರೂ ಅವನ್ನು ಒಂದಲ್ಲ ಒಂದು ವಿಧದಲ್ಲಿ ಹಣ್ಣು, ಒಣ ತರಕಾರಿಗಳ ಮೂಲಕ ಸೇವಿಸುತ್ತಾರೆ. ಆದರೆ ಬೆಚ್ಚಗಿನ ಮತ್ತು ವಾಯು ರಹಿತ ವಾತಾವರಣವಲ್ಲಿ, ಉದಾಹರಣೆಗೆ ಸೀಲುಮಾಡಿದ ಟಿನ್ನುಗಳಲ್ಲಿ ಅವು ಅಪಾಯಕಾರಿ ವಿಷ ಉತ್ಪಾದಿಸಬಲ್ಲುವು. ಇದನ್ನು ಸೇವಿಸಿದ ೧೨ ರಿಂದ ೩೬ ಗಂಟೆಗಳೊಳಗಾಗಿ ಅವು ಕೇಂದ್ರ ನರಮಂಡಲದ ಮೇಲೆ ಪರಿಣಾಮವನ್ನುಂಟು ಮಾಡಬಲ್ಲುವು.

ಕ್ರಿಮಿನಾಶಕಗಳು ಮತ್ತು ರಾಸಾಯನಿಕ ಗೊಬ್ಬರಗಳು ಆಹಾರದ ವಿಷವೇರಿಕೆಗೆ ಕಾರಣವಾಗಬಲ್ಲುವು.

೧೯೭೯ರ ಮೇ ತಿಂಗಳು ಅಂತಾರಾಷ್ಟ್ರೀಯ ಮಕ್ಕಳ ವರ್ಷದಲ್ಲಿ ಮದರಾಸಿನ ಸ್ವಯಂಸೇವಾ ಸಂಘವೊಂದು ೨೦೦೦ ಮಕ್ಕಳಿಗೆ ಮೊಸರನ್ನವನ್ನು ಉಚಿತವಾಗಿ ವಿತರಣೆಮಾಡಿತು. ಇದರ ಪರಿಣಾಮ ೬೦೦ ಮಕ್ಕಳಿಗೆ ವಾಂತಿ ಮತ್ತು ಭೇದಿ. ಮೊಸರನ್ನಕ್ಕೆ ಹಾಕಲಾದ ಶುಂಠಿ ಮತ್ತು ಕರಿಬೇವುಗಳಲ್ಲಿ ಗ್ಯಾಮಾಕ್ಸೀನ್ ಇದ್ದುದರಿಂದ ಆಹಾರ ವಿಷವೇರಿಕೆ ಉಂಟಾಯಿತೆಂದು ತಿಳಿದು ಬಂತು.

ವಿವೇಚನೆ ಇಲ್ಲದೆ ಅತಿಯಾಗಿ ಕ್ರಿಮಿನಾಶಕಗಳನ್ನು ಬಳಸುವುದರಿಂದ ಅವು ನಮ್ಮ ಆಹಾರ ಪ್ರವೇಶಿಸಿ ಉಂಟಾಗಬಹುದಾದ ಅನಾಹುತಗಳ ಬಗ್ಗೆ ಪರಿಣಿತರು ಎಚ್ಚರಿಕೆ ನೀಡಿದ್ದಾರೆ. ಕಲ್ಕತ್ತ ಮಾರುಕಟ್ಟೆಯಲ್ಲಿ ಸಿದ್ಧವಾದ ೪೦೦ ಪ್ರತಿಚಯಗಳ ಪೈಕಿ ೯೫ರಲ್ಲಿ ಡಿ.ಡಿ.ಟಿ., ಗ್ಯಾಮಾಕ್ಸೀನ್, ಮ್ಯಾಲಾಥಿಯನ್‌ನ ಅಂಶ ಇರುವುದನ್ನು ೧೯೮೦ರ ಅಕ್ಟೋಬರ್ ತಿಂಗಳಿನಲ್ಲಿ ಕೇಂದ್ರ ಆಹಾರ ಪ್ರಯೋಗಾಲಯ ಮತ್ತು ಅಖಿಲಭಾರತ ಆರೋಗ್ಯ ಮತ್ತು ಸಾರ್ವಜನಿಕ ಆರೋಗ್ಯ ಇಲಾಖೆ ನಡೆಸಿದ ಅಧ್ಯಯನ ಹೊರಗೆಡಹಿತು.

ಜೋಳ ಮತ್ತು ಮೆಕ್ಕೆ ಜೋಳವನ್ನು ಆರ್ದ್ರ ವಾತಾವರಣದಲ್ಲಿಟ್ಟಿರುವುದರಿಂದ ಬೂಸ್ಟು ಬಂದು ಅವು ಅಪಾಯ ತಂದೊಡ್ಡಬಹುದಾಗಿದೆ. ಈ ರೀತಿ ಆರ್ದ್ರತೆಯಲ್ಲಿದ್ದ ಅಥವಾ ಬೂಸ್ಟು ಹಿಡಿದ ಆಹಾರ ಪದಾರ್ಥಗಳು ಜನರ ಗಮನಕ್ಕೆ ಬರದೇ ಹೋಗಬಹುದು. ಬೂಸ್ಟಿನಿಂದ ಬರುವ ಸೋಂಕುಗಳು ಭಾರತದಲ್ಲಿ ಸಾಮಾನ್ಯವಾಗಿದೆ. ಬೂಸ್ಟುಗಳಿಂದ ಬರುವ ರೋಗಗಳ ಪೈಕಿ ಆಸ್ಪೆರ್ಗಿಲಸ್ ಫ್ಲೇವಸ್ ಎಂಬುದು ಭಾರತದಲ್ಲಿ ಸಾಮಾನ್ಯವಾಗಿದೆ.

ಕೆಲವು ವರ್ಷಗಳ ಹಿಂದೆ ರಾಜಾಸ್ಥಾನದ ಪಂಚಮಹಲ್ ಜಿಲ್ಲೆಯ ಬನಸ್‌ವಾಡ ಹಳ್ಳಿಯ ಮತ್ತು ಗುಜರಾತಿನ ೬೦೦ಕ್ಕೂ ಹೆಚ್ಚಿನ ಜನ ಕಾಮಾಲೆಗೆ ತುತ್ತಾದರು. ಅವರೆಲ್ಲರ ಪಾದ ಮತ್ತು ಉದರ ಉಬ್ಬಿಕೊಂಡಿರುವುದು ಕಂಡುಬಂತು. ೧೦೦ಕ್ಕೂ ಹೆಚ್ಚು ಜನ ಸಾವಪ್ಪಿದರು. ಬೂಸ್ಟು ಬಂದಿರುವ ಜೋಳ ಸೇವಿಸಿದ್ದೇ ಇದಕ್ಕೆ ಕಾರಣವೆಂದು ಹೈದರಾಬಾದಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ನ್ಯೂಟ್ರಿಷನ್ ಸಂಸ್ಥೆ ಪತ್ತೆ ಮಾಡಿತು. ಆಹಾರ ಧಾನ್ಯಗಳನ್ನು ದಾಸ್ತಾನು ಮಾಡುವುದಕ್ಕೆ ಸಂಬಂಧಿಸಿದಂತೆ ಸರ್ಕಾರ ಕಠಿಣ ಕಾನೂನುಗಳನ್ನು ಜಾರಿಗೆ ತರಬೇಕು. ಮಲಿನವಾದ ಆಹಾರ ಧಾನ್ಯಗಳು ಮಾರಾಟವಾಗದಂತೆ ಕ್ರಮಕೈಗೊಳ್ಳುವುದೂ ಅಗತ್ಯ.

ಈ ಮಧ್ಯೆ ನೀವೇ ನಿಮ್ಮ ಮತ್ತು ನಿಮ್ಮ ಕುಟುಂಬವನ್ನು ಆಹಾರ ವಿಷವೇರಿಕೆಯಿಂದ ರಕ್ಷಿಸಿಕೊಳ್ಳಬಹುದಾಗಿದೆ. ಅಧಿಕಾರಯುಕ್ತರಾದವರೊಬ್ಬರು ಹೇಳುವಂತೆ ಅಡಿಗೆ ಮಾಡುವವರು ದಕ್ಷರಾಗಿದ್ದರೆ ಇಂಥ ಪ್ರಕರಣಗಳನ್ನು ತಡೆಗಟ್ಟಬಹುದು. ವೈದ್ಯರು ಮತ್ತು ಸಾರ್ವಜನಿಕ ಆರೋಗ್ಯಾಧಿಕಾರಿ ಪರಿಣತರು ನೀವೇನು ಮಾಡಬಹುದೆಂದು ಹೀಗೆ ಸಲಹೆ ನೀಡಿದ್ದಾರೆ:

೧. ಆಹಾರ ಪದಾರ್ಥಗಳು ಹೆಗ್ಗಣ, ಇಲಿ, ನೊಣ, ಧೂಳುಗಳು ಆವರಿಸದಂತಹ ಸ್ಥಳದಲ್ಲಿಡಿ.

೨. ಅಡಿಗೆ ಮಾಡುವ ಮುನ್ನ, ಅಡಿಗೆ ಸಿದ್ಧಪಡಿಸುವಾಗ ಮತ್ತು ಬಡಿಸುವ ಮುನ್ನ ಕೈ ತೊಳೆಯಿರಿ.

೩. ಕೈಗೆ ಹುಣ್ಣಾದವರು ಇಲ್ಲವೇ ಕೀವಾದವರು ಆಹಾರಪದಾರ್ಥಗಳನ್ನು ಮುಟ್ಟಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಿ.

೪. ಅಡಿಗೆ ಮಾಡಲು ಸ್ವಚ್ಛ ಮತ್ತು ತೊಳೆದ ಪಾತ್ರೆಗಳನ್ನು ಉಪಯೋಗಿಸಿ.

೫. ಬಡಿಸುವ ಮುನ್ನ ಹಾಲು ಅಥವಾ ಉಳಿದ ಆಹಾರ ಪದಾರ್ಥಗಳನ್ನು ಸಣ್ಣ ಸಣ್ಣ ಪಾತ್ರೆಗಳಿಗೆ ಸುರಿಯಬೇಡಿ. ಇದರಿಂದ ಪದಾರ್ಥಗಳು ಮಲಿನವಾಗುವುದನ್ನು ಅಷ್ಟರಮಟ್ಟಿಗೆ ತಡೆಗಟ್ಟಿದಂತಾಗುವುದು.

೬. ಕುಡಿಯುವ ಮುನ್ನ ಹಾಲನ್ನು ಚೆನ್ನಾಗಿ ಕುದಿಸಿರಿ. ಹಾಲು, ಹಾಲಿನಿಂದ ಸಿದ್ಧಪಡಿಸುವ ಪದಾರ್ಥಗಳು ಮತ್ತು ಮೊಟ್ಟೆಯನ್ನು ಪಾಶ್ಚರೀಕರಿಸಿರಿ.

೭. ಆಹಾರ ಪದಾರ್ಥಗಳನ್ನು ಚೆನ್ನಾಗಿ ಬೇಯಿಸಿ. ಪದಾರ್ಥಗಳನ್ನು


ಅರೆಬೇಯಿಸಿ ಅದರೊಳಗೆ ಬ್ಯಾಕ್ಟೀರಿಯ ಸೇರಲು ಅವಕಾಶ ಮಾಡಿಕೊಡಬೇಡಿ. ೬೦ಸಿ. ಡಿಗ್ರಿ ಉಷ್ಣತೆಗೆ ಕಾಯಿಸಿದ ಮಾತ್ರಕ್ಕೆ ಆಹಾರದಲ್ಲಿ ಬ್ಯಾಕ್ಟೀರಿಯ ನಾಶವಾಗುವುದಿಲ್ಲ ಎಂಬುದನ್ನು ಗಮನದಲ್ಲಿಡಿ.

೮. ಬೇಯಿಸಿದ ಆಹಾರವನ್ನು ಬೇಗ ಸೇವಿಸಿರಿ. ಉಳಿದುದನ್ನು ಫ್ರಿಜ್ಜಿನಲ್ಲಿಡಿ.

೯. ರಾಸಾಯನಿಕ ಗೊಬ್ಬರಗಳು, ಕೀಟನಾಶಕಗಳು ಇತ್ಯಾದಿ ಅಪಾಯಕಾರಿ ರಾಸಾಯನಿಕಗಳನ್ನು ಅಡುಗೆ ಮನೆಯಿಂದ ಸಾಕಷ್ಟು ದೂರವಿಡಿ.

೧೦. ಆಹಾರ ಧಾನ್ಯಗಳನ್ನು ತಂಪಾದ ಮತ್ತು ಒಣಸ್ಥಳಗಳಲ್ಲಿಡಿ. ಬೂಸ್ಟು ಬಂದ ಧಾನ್ಯಗಳನ್ನು ಬಳಸಬೇಡಿ.

ಜಿ. ಎಸ್. ಭಟ್ಟ



ನಮ್ಮ ಕಷ್ಟಕಾರ್ಪಣ್ಯಗಳನ್ನು ಹೋಗಲಾಡಿಸಿಕೊಳ್ಳಲು ಹೋರಾಡುವಾಗ ಎಲ್ಲ ಇತರರಿಗೂ ಅಂತಹ ಕಷ್ಟಕಾರ್ಪಣ್ಯಗಳಿರುತ್ತವೆಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು.

—ಅಬ್ರಾಹಂ ಲಿಂಕನ್

ಒಳ್ಳೆಯದನ್ನು ಮಾಡಲು ಜನರಿಗೆ ಕಲಿಸುವುದು, ಅನುಕೂಲ ಮಾಡಿಕೊಡುವುದು ಮತ್ತು ಕೆಡುಕನ್ನು ಮಾಡದಂತೆ ಪ್ರತಿಭಟಿಸುವುದು, ಸರಕಾರದ ಸರಿಯಾದ ಕರ್ತವ್ಯವಾಗಿರುವುದು.

—ಗ್ಲಾಡ್‌ಸ್ಟನ್

ವಂಚನೆಯ ಮೇಲೆ ಕೈಲಾಸ್‌ಗುಪ್ತರ ಹೋರಾಟ

ಮೀರತ್ ವಿಶ್ವವಿದ್ಯಾಲಯದಲ್ಲಿ ರಾಜಕೀಯ ವಿಜ್ಞಾನ ಅಧ್ಯಾಪಕರಾಗಿರುವ, ತುಸು ಕೂದಲು ನೆರೆತ ನಲವತ್ತೈದು ವರ್ಷ ಪ್ರಾಯದ ಕೈಲಾಸ್ ಚಂದ್ರಗುಪ್ತ– ೧೯೭೯ ಫೆಬ್ರವರಿ ೨೫ರ ಬೆಳಗ್ಗೆ ಚಿಂತಿಸುತ್ತಲೇ ಎದ್ದರು. ಅಂದು ಮೀರತ್ ಮತ್ತಿತರ ಕೆಲವು ವಿಶ್ವವಿದ್ಯಾಲಯಗಳಲ್ಲಿ ಪರೀಕ್ಷೆ ಪ್ರಾರಂಭವಾಗಲಿತ್ತು. ಪರೀಕ್ಷೆಯ ದಿನಗಳೆಂದರೆ ಸಂಕ್ಷೋಭೆಯ ವಾರಗಳು! ಪರೀಕ್ಷಾಧಿಕಾರಿಗಳನ್ನು ಬೆದರಿಸುತ್ತ, ಸ್ಪಷ್ಟವಾಗಿ ಕಾಣುವ ವಂಚನೆಯನ್ನು ಕೂಡ ಗಮನಿಸಬಾರದೆಂದು ಒತ್ತಾಯಿಸುತ್ತ, ಕಾಲೇಜಿನ ಆವರಣವನ್ನು ಪುಂಡ ಹುಡುಗರು ಆಕ್ರಮಿಸುವುದು ಸಾಮಾನ್ಯವಾಗಿತ್ತು.

ವಾಸ್ತವವಾಗಿ, ಈ ಪರೀಕ್ಷೆಗಳು ಅತಿ ಹೆಚ್ಚಿನ ಸೋಗಾಗುತ್ತಿರುವುದು ಗುಪ್ತರಿಗೆ ಆತಂಕ ಹುಟ್ಟಿಸಿತ್ತು. ಷಣ್ಮಾಸಿಕ ಶಿಕ್ಷಣಾವಧಿಯ (ಸೆಮೆಸ್ಟರ್) ಪ್ರಾರಂಭದ ಸಾಂಪ್ರದಾಯಿಕ ಸಭೆಯಲ್ಲಿ, ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಭಾಷಣ ಮಾಡುತ್ತ, ವಂಚನೆ–ವಿದ್ಯಾರ್ಥಿಗಳ 'ಜನ್ಮಸಿದ್ಧ ಹಕ್ಕು' ಎಂದು ಘೋಷಿಸಿದ. ಆಗ, ಸಭಾಸದರಲ್ಲಿದ್ದ ವಿದ್ಯಾರ್ಥಿಗಳು ಸಮ್ಮತಿ ಸೂಚಕವಾಗಿ ಕೇಕೆ ಹಾಕಿದರೆ, ಒಬ್ಬನೇ ಒಬ್ಬ ಸದಸ್ಯ ಪ್ರತಿಭಟಿಸಲೆಂದು ಏಳಲಿಲ್ಲ.

ಕೃಶಕಾಯರಲ್ಲದ ಮತ್ತು ಅಂಜುಬುರುಕರಲ್ಲದ ಅಧ್ಯಾಪಕರನ್ನು ಪರೀಕ್ಷಾಧಿಕಾರಿಗಳಾಗಿ ನೇಮಿಸುವಂತೆ ಕಾಲೇಜುಗಳ ಪ್ರಾಂಶುಪಾಲರನ್ನು ಮೀರತ್ತಿನ ಜಿಲ್ಲಾ ನ್ಯಾಯಾಧಿಪತಿಗಳಾದ ಆರ್. ಎಸ್. ಮಾಥುರ್ ಮತ್ತು ವಿಶ್ವವಿದ್ಯಾಲಯದ ಕುಲಪತಿಗಳಾದ ದೀಪ್‌ಚಂದ್ರಶರ್ಮಾ ವಿನಂತಿಸಿಕೊಂಡರು. ಈ ವಿಷಯಗಳ ಬಗ್ಗೆ ಸಹೋದ್ಯೋಗಿಗಳೊಡನೆ ವಿಚಾರವಿನಿಮಯಕ್ಕೆ ಕೈಲಾಸ್‌ಚಂದ್ರಗುಪ್ತರು ಯತ್ನಿಸಿದರೆ, ಹಲವರ ಪ್ರತಿಕ್ರಿಯೆ ನಿರಾಶಾದಾಯಕ ಮತ್ತು ತಿರಸ್ಕಾರಪೂರಿತವಾಗಿತ್ತು. "ಗುಂಪು ವಂಚನೆ ಎಲ್ಲೆಡೆಯೂ ನಡೆಯುತ್ತಿದೆ"–ಎಂದು ಒಬ್ಬ ಹೇಳಿದರೆ, ಇನ್ನೊಬ್ಬ ಈ ರೀತಿ ಉಪದೇಶ ಕೊಟ್ಟ– "ಇವರೊಡನೆ ಹೊಂದಿ ನಡೆಯಲು ನಾವು ಕಲಿಯಬೇಕು."

ಈ ರೀತಿಯ ಪಲಾಯನವಾದ ಗುಪ್ತರಿಗೆ ಅಸಹ್ಯವೆನಿಸುತ್ತಿತ್ತು. ಆಗ್ರಾದ

೧೯೮೧ ಅಕ್ಟೋಬರ ತಿಂಗಳ ರೀಡರ್ಸ್ ಡೈಜೆಸ್ಟಿನಲ್ಲಿ ಪ್ರಕಟವಾದ, ಅಶೋಕ್ ಮಹದೇವನ್ ಅವರ 'ಕೈಲಾಸ್ ಗುಪ್ತಾಸ್ ವಾರ್ ಆನ್ ಚೀಟಿಂಗ್' ಎಂಬ ಲೇಖನದ ಭಾಷಾನುವಾದ.

ಮುನ್ಷಿಯಾಗಿದ್ದ (ಕಾರಕೂನ) ಗುಪ್ತರ ತಂದೆ ಎಂದಿಗೂ ಸೋಲದ ನ್ಯಾಯಪರರಾಗಿದ್ದರು. ಇಂಥ ನಿಶ್ಚಿತ ಅಭಿಪ್ರಾಯಗಳ ಪ್ರಾಮುಖ್ಯ ಮತ್ತು ಅದರಂತೆ ನಡೆಯುವುದನ್ನು ತಂದೆಯಿಂದ ಗುಪ್ತರು ತಿಳಿದುಕೊಂಡರು. ಜಯಪ್ರಕಾಶ ನಾರಾಯಣರ ಚಳವಳದ ಪರವಾಗಿ ಜನರನ್ನು ಸಂಘಟಿಸಿದ ಇವರು, ತುರ್ತು ಪರಿಸ್ಥಿತಿಯನ್ನು ಘೋಷಿಸಿದಾಗ ಪರೀಕ್ಷೆಯ ೪೦೦ ಉತ್ತರ ಪುಸ್ತಕಗಳನ್ನು ತೆಗೆದುಕೊಂಡು ಭೂಗತರಾಗಿ ಒಂದೆರಡು ವಾರಗಳ ಕಾಲ ಪೋಲಿಸರನ್ನು ಸಾಕಷ್ಟು ಸತಾಯಿಸಿದರು. ಕೊನೆಗೆ ಪೋಲಿಸರು ಗುಪ್ತರ ಆಸ್ತಿಯನ್ನು ಆಕ್ರಮಿಸಿಕೊಂಡಾಗ, ನಿರ್ವಾಹವಿಲ್ಲದೆ ಶರಣಾಗಿ ಒಂದು ತಿಂಗಳ ಕಾಲ ಕಾರಾಗೃಹದಲ್ಲಿ ಇರಬೇಕಾಯಿತು.

ಪರೀಕ್ಷೆಯ ನೈತಿಕ ಮಟ್ಟ ಕುಸಿದದ್ದು ಗುಪ್ತರಿಗೆ ಹಲವು ವರ್ಷಗಳಿಂದ ತೊಂದರೆ ಕೊಡುತ್ತಿತ್ತು. ಪರೀಕ್ಷಾಕೊಠಡಿಗಳಲ್ಲಿ ರಾಜಾರೋಷವಾಗಿ ನಡೆಯುವ ವಂಚನೆಯನ್ನು ತಡೆಯುವ ಉಪಾಯ ಅವರಿಗೆ ಹೊಳೆಯಲಿಲ್ಲ. ಹೆಚ್ಚಿನ ವಿದ್ಯಾರ್ಥಿ ಮುಖಂಡರು ಶ್ರೀಮಂತ ಗ್ರಾಮೀಣ ಜಮೀನುದಾರರ ಮಕ್ಕಳಾಗಿದ್ದು, ವಿದ್ಯಾಲಯಗಳನ್ನು ರಾಜಕೀಯ ರಂಗಕ್ಕಿಳಿಯುವ 'ಜಿಗಿಹಲಗೆ'ಯಾಗಿ ಬಳಸುತ್ತಾರೆ. ಈ ಮುಖಂಡರಿಗೆ ರಾಜಕೀಯ ಪುಢಾರಿಗಳ ಪರೋಕ್ಷ ಪ್ರೋತ್ಸಾಹವಿರುವುದರಿಂದ, ಅಧಿಕಾರಿಗಳು ಅವರ ವಿರುದ್ಧ ಯಾವುದೆ ರೀತಿಯ ಕ್ರಮ ಕೈಗೊಳ್ಳುವ ಧೈರ್ಯ ಮಾಡಲಾರರು. ಪ್ರತಿಭಟಿಸಲು ಹೊರಟ ಪರೀಕ್ಷಾಧಿಕಾರಿಗಳು ಪೆಟ್ಟು ತಿಂದದ್ದು ಮಾತ್ರವಲ್ಲ. ಕೊಲೆಯಾದದ್ದೂ ಇದೆ.

ಕಟ್ಟುನಿಟ್ಟಿನ ಪರೀಕ್ಷಾಧಿಕಾರಿಯೆನಿಸಿದ ಕೈಲಾಸ್‌ಚಂದ್ರಗುಪ್ತರು ಕೂಡ ವಿದ್ಯಾರ್ಥಿಗಳ ಭಯೋತ್ಪಾದನೆಗೆ ಆಹುತಿಯಾಗಿದ್ದರು. ಒಮ್ಮೆ, ಪರೀಕ್ಷೆಯ ಹಿಂದಿನ ರಾತ್ರಿ ಮೂರು ಜನ ಕಿಡಿಗೇಡಿ ಹುಡುಗರು ಗುಪ್ತರನ್ನು ಅಡ್ಡಗಟ್ಟಿದರು. ಇಬ್ಬರು ಇವರ ಕೈಗಳನ್ನು ಹಿಂದಕ್ಕೆ ಕಟ್ಟಿ ಹಿಡಿದರೆ, ಮೂರನೇಯವನು 'ನಕಲ್ ಜೋಗಿ' ['ಅಲ್ಲಿ ವಂಚನೆ ಇದೆ'] ಎಂದುಸುರಲು ಆಜ್ಞೆ ಮಾಡಿದ. ಗುಪ್ತರು ತುಟಿ ಬಿಚ್ಚಲಿಲ್ಲ. ಆಗ ಒಬ್ಬಾತ ಚೂರಿ ಹಿರಿದು, ಗುಪ್ತರ ಎದೆಗೊತ್ತಿ 'ನಕಲ್ ಜೋಗಿ' ಎನ್ನಲು ಪುನಃ ಆಜ್ಞೆ ಮಾಡಿದ. ಹೇಳದೆ ಹೋದರೆ ಕೊಲ್ಲುವುದು ಖಾತ್ರಿ. ಮನಸ್ಸಿಲ್ಲದೆ ಹೋದರೂ ಕಿಡಿಗೇಡಿಗಳು ಹೇಳಿದಂತೆ ಗೊಣಗಿ ಪಾರಾದರು.

ವಿಶ್ವವಿದ್ಯಾಲಯದ ೫೩ ಕಾಲೇಜುಗಳಲ್ಲಿ ಪ್ರತಿಷ್ಠಿತವಾದ ಮೀರತ್ ಕಾಲೇಜಿನ ಮರಗಳಿಂದಾವೃತವಾದ ವಿಶಾಲ ಆವರಣದ ಮೂಲಕ ತ್ವರಿತವಾಗಿ

ವಾಗಿ, ಗುಪ್ತರು ಪರೀಕ್ಷಾ ಕೊಠಡಿಯ ಬಳಿ ಬಂದಾಗ ಗೊಂದಲ ಸಂಪೂರ್ಣವಾಗಿ ಹಬ್ಬಿತ್ತು. ವಿದ್ಯಾರ್ಥಿಗಳಲ್ಲಿದ್ದ ಅನೇಕ ಯುವಕರು ತಮ್ಮ ಗೆಳೆಯರಿಗೆ ಪಠ್ಯಪುಸ್ತಕಗಳನ್ನು ಹೊರಗಿನಿಂದ ರವಾನಿಸುತ್ತಿದ್ದರು. ತರಗತಿಗಳಲ್ಲಿ ವಿದ್ಯಾರ್ಥಿಗಳು ಒತ್ತೊತ್ತಾಗಿ ಕುಳಿತು ಪ್ರಶ್ನಪತ್ರಿಕೆಗಳನ್ನು ಗಟ್ಟಿಯಾಗಿ ಚರ್ಚಿಸುತ್ತ ಉತ್ತರ ಬರೆಯುತ್ತಿದ್ದರು!

ಹೋರಾಟದ ತಂತ್ರ : ಈ ವ್ಯವಸ್ಥೆಯನ್ನು ನೋಡುತ್ತಿರುವಂತೆ ಗುಪ್ತರ ಕ್ರೋಧ ಒಮ್ಮೆಲೇ ಏರತೊಡಗಿ, ಅಲ್ಲಿ ನಿಂತಿದ್ದ ಪರೀಕ್ಷಾಧಿಕಾರಿಯೊಬ್ಬರ ಬಳಿ ಧಾವಿಸಿ "ಅಲ್ಲ ಸ್ವಾಮಿ, ನೀವ್ಯಾಕೆ ಏನನ್ನಾದರೂ ಮಾಡಬಾರದು?"— ಎಂದು ಉದ್ವೇಗದಿಂದ ಕೇಳಿದರು. ಅಧ್ಯಾಪಕರು ಭುಜ ಹಾರಿಸುತ್ತ ಮುಖ ತಿರುಗಿಸಿದರು.

ಪಟ್ನದ ವಿಶ್ವವಿದ್ಯಾಲಯದ ಕಾಲೇಜುಗಳಲ್ಲಿ ವಂಚನೆ ಅತ್ಯಧಿಕ ಪ್ರಮಾಣದಲ್ಲಿ ನಡೆಯುತ್ತಿರುವುದು ಗುಪ್ತರಿಗೆ ಸಹೋದ್ಯೋಗಿಗಳಿಂದ ತಿಳಿಯಿತು. ಅವ್ಯವಸ್ಥೆ ಮಿತಿಮೀರಿದ ಪರಿಣಾಮವಾಗಿ ಮೂವರು ಪ್ರಾಂಶುಪಾಲರು ಪರೀಕ್ಷೆಗಳನ್ನು ಬಹಿಷ್ಕರಿಸಿದರು. ಸಾಮೂಹಿಕ ನಕಲಿನ ಕಾರಣಕ್ಕಾಗಿ ಪರೀಕ್ಷೆಗಳನ್ನು ಬಹಿಷ್ಕರಿಸಕೂಡದೆಂದು ಹೇಳಿದ ಉಪಕುಲಪತಿ ಶರ್ಮ ಅವರು, ಪರೀಕ್ಷೆಗಳನ್ನು ಪುನಃ ಪ್ರಾರಂಭಿಸಲು ಆಜ್ಞಾಪಿಸಿದರು.

ಕೈಲಾಸ್‌ಚಂದ್ರಗುಪ್ತರಿಗೆ ಇದು ಕೊನೆಯ ಹುಲ್ಲುಕಡ್ಡಿಯಾಗಿತ್ತು! ೧೭ ವರ್ಷಗಳ ಅಧ್ಯಾಪನ ವೃತ್ತಿಯಲ್ಲಿ ಎಂದೂ ಈ ರೀತಿಯ ಯಾತನೆ ಅನುಭವಿಸಿರಲಿಲ್ಲ. ಪರಿಸ್ಥಿತಿ ಅದೆಷ್ಟು ವಿಷಮವಾಗಿತ್ತೆಂದರೆ, ಯಾವುದೇ ರೀತಿಯ ಚುರುಕು ಕಾರ್ಯ ಕೈಗೊಳ್ಳದಿದ್ದರೆ ವಿಶ್ವವಿದ್ಯಾಲಯಗಳ ಪರೀಕ್ಷಾ ವ್ಯವಸ್ಥೆ ಎಂದಿಗೂ ಸರಿಪಡಿಸಲು ಅಸಾಧ್ಯವಾಗುವಷ್ಟು ಕೆಡುತ್ತದೆನ್ನುವ ತಥ್ಯ ಗುಪ್ತರಿಗೆ ಮನವರಿಕೆಯಾಯಿತು.

ಆದರೇನು ಮಾಡಲು ಸಾಧ್ಯ? ಸಂಗಡಿಗ ಅಧ್ಯಾಪಕ ಎಸ್. ಆರ್. ರಾಯ್ ಅವರೊಡನೆ ಸಾಕಷ್ಟು ವಿಚಾರವಿನಿಮಯ ನಡೆಸಿದ ಮೇಲೆ, ಗುಪ್ತರು ವಂಚನೆಯ ವಿರುದ್ಧ ನಡೆಸುವ ಹೋರಾಟದ ತಂತ್ರವನ್ನು ರೂಪಿಸಿದರು. ಅವರು ವಿದ್ಯಾರ್ಥಿಗಳ ಭಯೋತ್ಪಾದನೆಯ ವಿರುದ್ಧ ಬಳಸಲು ನಿಶ್ಚಯಿಸಿದ ಪ್ರಜಾಪ್ರಭುತ್ವದ ಎರಡು ಪರಮೋತ್ಕೃಷ್ಟ ಆಯುಧಗಳು ಇವು:—ಪತ್ರಿಕೆಗಳ ಪ್ರಚಾರ ಮತ್ತು ಒಟ್ಟುಗೂಡಿದ ಪ್ರಜೆಗಳ ಸಾಮರ್ಥ್ಯ.

ಇದಕ್ಕನುಗುಣವಾಗಿ ಕೈಲಾಸ್‌ಚಂದ್ರಗುಪ್ತರು ಮಾರತ್ತಿನ ಸುಮಾರು

ನೂರು ಮಂದಿ ಪ್ರಮುಖ ನಿವಾಸಿಗಳನ್ನು ಸಭೆ ಸೇರಿಸಿ, ಪರೀಕ್ಷೆಯಲ್ಲಿ ಜರಗುವ ವಂಚನೆಗಳ ಬಗ್ಗೆ ಮುಕ್ತವಾಗಿ ಚರ್ಚೆ ನಡೆಸಲು ಆಹ್ವಾನಿಸಿದರು. ಪರೀಕ್ಷೆಗಳಲ್ಲಿ ನಡೆಯುವ ಅಶ್ಲೀಲ ಕಾರ್ಯಗಳನ್ನು ವರದಿ ಮಾಡಬೇಕೆಂದು ದೆಹಲಿಯ ಪತ್ರಿಕೆಗಳ ಸಂಪಾದಕರನ್ನು ವಿನಂತಿಸಲು ರಾಯ್ ಮತ್ತು ಗುಪ್ತ ಅಲ್ಲಿಗೆ ಪ್ರಯಾಣಿಸಿದರು. ಈ ಇಬ್ಬರು ಅಧ್ಯಾಪಕರು ಹೇಳಿದ ವಿಷಯಗಳನ್ನು ಗಮನವಿಟ್ಟು ಕೇಳಿದ ಇಂಡಿಯನ್ ಎಕ್ಸ್‌ಪ್ರೆಸ್ಸಿನ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿರುವ ಅರುಣ್‌ಶೌರಿ ಮತ್ತು ಹಿಂದೂಸ್ತಾನ್ ಟೈಮ್ಸ್‌ನ ಸಂಪಾದಕ ಹಿರಣ್ಮಯ್ ಕಾರ್ಲೇಕರ್, ಕೂಡಲೆ ವರದಿಗಾರರನ್ನು ಮೀರತ್ತಿಗೆ ಕಳುಹಿಸುವ ಆಶ್ವಾಸನೆ ನೀಡಿದರು.

ನಂಬಲಸಾಧ್ಯವಾದ ದೃಶ್ಯಗಳು : ಫೆಬ್ರವರಿ ೨೩ ರಂದು ಸಾರ್ವಜನಿಕ ಸಭೆ ನಡೆಯುವ ಸಭಾಂಗಣಕ್ಕೆ ಹೋದಾಗ ಕೈಲಾಸ್‌ಚಂದ್ರಗುಪ್ತರಿಗೆ ಆಶ್ಚರ್ಯ ಕಾದಿತ್ತು! ಸಭಾಂಗಣ ಜನರಿಂದ ಗಿಜಿಗುಟ್ಟುತ್ತಿತ್ತು. ಮೀರತ್ತಿನ ೭೦ ಕ್ಕೂ ಹೆಚ್ಚು ಪ್ರಮುಖ ನಿವಾಸಿಗಳೆಲ್ಲ ಅಲ್ಲಿ ಉಪಸ್ಥಿತರಿದ್ದರು. ಉದ್ವೇಗದ ವಾದವಿವಾದಗಳ ತರುವಾಯ, ವಂಚನೆಗಳನ್ನು ಪತ್ತೆಹಚ್ಚಿ ಹತ್ತಿಕ್ಕಲೆಂದು ೭ ಜನ ಸದಸ್ಯರುಳ್ಳ ಸಮಿತಿಯೊಂದು ರಚಿತವಾಯಿತು. ಸಮಿತಿಯ ಕಾರ್ಯದರ್ಶಿಯಾಗಿ ಗುಪ್ತ ಮತ್ತು ಅಧ್ಯಕ್ಷರಾಗಿ-ದೊಡ್ಡ ಗಾಂಧಿವಾದಿಯಾದ ಮೀರತ್ತಿನ ಗೌರವಾನ್ವಿತ ವ್ಯಕ್ತಿ ಮಾಸ್ಟರ್ ಸುಂದರಲಾಲರು ಆರಿಸಲ್ಪಟ್ಟರು.

ಮೀರತ್ತಿನ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳಿಂದ ಜರಗುವ ವಂಚನಾ ಪ್ರಕರಣಗಳು ದೆಹಲಿಯ ಪತ್ರಿಕೆಗಳಲ್ಲಿ ಫೆಬ್ರವರಿ ೨೮ ರಿಂದ ಸತತವಾಗಿ ಪ್ರಕಟವಾಗತೊಡಗಿದುವು. ಕೆಲವು ಘಟನೆಗಳಂತೂ ಓದುಗರ ನಂಬುಗೆಯನ್ನು ಮೀರಿದಂತಿದ್ದುವು. ಅವುಗಳಲ್ಲಿ ಕೆಲವು: ಕಾಲೇಜೊಂದರಲ್ಲಿ ನಡೆಯುತ್ತಿದ್ದ ಅರ್ಥಶಾಸ್ತ್ರ ಪರೀಕ್ಷೆಗೆ ಮೂವರು ವಿದ್ಯಾರ್ಥಿಗಳು ಒಂದೆ ಡೆಸ್ಕಿನಲ್ಲಿ ಕುಳಿತಿದ್ದು, ವಿಷಯಗಳನ್ನು ತಿಳಿದ ಹುಡುಗ ತನ್ನ ಸುಂದರ ಅಕ್ಷರಗಳಿಂದ ಬರೆದುಕೊಡುತ್ತಿದ್ದ. ಮತ್ತೊಂದು ಕಾಲೇಜಿನಲ್ಲಿ, ಒಬ್ಬ ಹುಡುಗ ಪಠ್ಯಪುಸ್ತಕದ ಪುಟಗಳನ್ನ ಕತ್ತರಿಸಿ ಉತ್ತರಿಸುವ ಹಾಳೆಗೆ ಜೋಕ್ಕವಾಗಿ ಅಂಟಿಸಿದ. ಇದೇ ವಿಷಯಗಳನ್ನು ನೂಣಪ್ರತಿ ಮಾಡುವುದಕ್ಕಿಂತ ತಾನು ಹೆಚ್ಚು ಫಲಕಾರಿಯಾದ ಕ್ರಮವನ್ನನುಸರಿಸಿ ಬಿನ್ನಪ ಟಿಪ್ಪಣಿಯೊಂದನ್ನು ಹಾಳೆಯ ಕೆಳಗೆ ಬರೆದ!

ಸಾಮೂಹಿಕ ನಕಲು ಹೊಡೆಯುವಿಕೆಯ ಸತ್ಯಾಂಶಗಳು ಈ ಮೊದಲು, ವೇದನೆ ನೀಡುವ ವಿವರಗಳೊಂದಿಗೆ ಎಂದಿಗೂ ಪ್ರಕಟವಾಗಿರಲಿಲ್ಲ. ಪತ್ರಿಕೆಗಳಲ್ಲಿ

ಪ್ರಕಟವಾಗತೊಡಗಿದ ಮೇಲೆ ಪರಿಣಾಮ ಅಭೂತಪೂರ್ವ. ವರದಿಯನ್ನೋದಿ ಕೆರಳಿದ ವಾಚಕ ಬಳಗದಿಂದ ಶುದ್ಧ ಪತ್ರಗಳು ಪತ್ರಿಕೆಗಳ ಕಛೇರಿಗಳಿಗೆ ಪ್ರವಾಹದೋಪಾದಿಯಲ್ಲಿ ಬಂದುವು. ಮೀರತ್ ವಿಶ್ವವಿದ್ಯಾಲಯಕ್ಕೆ ನೀಡುವ ನೆರವನ್ನು ಅದ್ಯಾಕೆ ನಿಲ್ಲಿಸಬಾರದೆಂದು ಪ್ರಶ್ನಿಸಿದ ಸಂಕ್ಷಿಪ್ತ ತಂತಿಯೊಂದನ್ನು ಯು.ಜಿ.ಸಿ. ಅಧ್ಯಕ್ಷ ಸತೀಶ್‌ಚಂದ್ರರು ಉಪಕುಲಪತಿ ಶರ್ಮರಿಗೆ ಕಳುಹಿಸಿದರು.

ನಗರ ವಾಸಿಗಳಿಂದ ರಚಿತವಾದ ವಿಚಾರಣಾ ಸಮಿತಿ ತನ್ನ ಕಾರ್ಯವನ್ನು ಒಡನಾಗಿಯೇ ಪ್ರಾರಂಭಿಸಿತು. ತಂಡ ಪ್ರಥಮವಾಗಿ ಮೀರತ್ ಕಾಲೇಜಿನೊಳಗೆ ಪ್ರವೇಶಿಸಿದೊಡನೆಯೆ ಕೋಪೋದ್ರಿಕ್ತ ವಿದ್ಯಾರ್ಥಿ ಗುಂಪು ತಂಡದ ಸದಸ್ಯರನ್ನು ಆವರಿಸಿ, ತತ್‌ಕ್ಷಣವೆ ಸಮಿತಿಯನ್ನು ವಿಸರ್ಜಿಸಬೇಕೆಂದು ದಾಂಧಲೆ ಎಬ್ಬಿಸಿತು. ಆದರೆ ಎಲ್ಲ ಕಾಲೇಜುಗಳಲ್ಲಿ ಈ ಅಶಾಂತ ವಾತಾವರಣವಿರಲಿಲ್ಲ. ಸಮಿತಿಯ ಸದಸ್ಯರು ಮೀರತ್ತಿನ ಇನ್ನಿತರ ಕಾಲೇಜುಗಳಿಗೆ, ಹಾಪುರ್, ಬುಲಂದ್‌ಶಹರ್ ಮತ್ತು ಮುಜಾಫರ್‌ನಗರದಲ್ಲಿರುವ ಕಾಲೇಜುಗಳಿಗೆ ಭೇಟಿ ಇತ್ತಾಗ, ವಿದ್ಯಾರ್ಥಿ ಸಮುದಾಯ ಸಮಿತಿಯ ಸದಸ್ಯರನ್ನು ವೀರಯೋಧರಂತೆ ಸ್ವಾಗತಿಸಿತು. ಕಾಲೇಜಿನ ಪ್ರಾಂಶುಪಾಲರು ಮತ್ತು ಪ್ರಾಧ್ಯಾಪಕರು ಸಮಿತಿಯ ಪ್ರತಿ ಸದಸ್ಯರನ್ನು ವಿಚಾರಿಸಲು ಉತ್ಸುಕರಾಗಿದ್ದರು. ಕೊನೆಗೆ ಅವರನ್ನೆಲ್ಲ ವೇದಿಕೆಗೆ ಕರೆದೊಯ್ದು ವಿದ್ಯಾರ್ಥಿಗಳಿಗೆ ಪರಿಚಯಿಸಲಾಯಿತು.

ಉದ್ರೇಕದ ಪ್ರತಿಕ್ರಿಯೆ: ಪರೀಕ್ಷೆ ಮುಗಿದ ಮರುದಿನ (ಮಾರ್ಚ್ ೬ರಂದು) ಮೀರತ್ ವಿಶ್ವವಿದ್ಯಾಲಯದ ಪರೀಕ್ಷಾ ಸಮಿತಿ ಮೂರು ವಾರಗಳ ಹಿಂದಿನ ಘಟನೆಗಳನ್ನು ಪುನರವಲೋಕಿಸಿತು. ಇತ್ತೀಚೆಗೆ ಒಬ್ಬರು ಸದಸ್ಯರು ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿದರು. "ಸಾರಾಂಶವಾಗಿ, ಅಲ್ಲಿಯವರೆಗೆ ತಪ್ಪುಗಳು ಕ್ರಮಬದ್ಧವಾಗಿರುವಂತೆ, ಸಮಿತಿಯು ನೋಡಿಕೊಳ್ಳುತ್ತಿತ್ತು. ಆದರೆ ಸಾರ್ವಜನಿಕ ಒತ್ತಡ ಅತಿಯಾದಾಗ ನಾವು ಎಂದಿನಂತೆ ಕೆಲಸಕಾರ್ಯಗಳನ್ನು ಮಾಡಬೇಕಾಯಿತು."

ಹಾಗಿದ್ದರೂ ಕುಲಪತಿ ದಿನೇಶ್‌ಚಂದ್ರಶರ್ಮರು ಪರಿಸ್ಥಿತಿಯನ್ನು ತಹಬಂದಿಗೆ ತರಲು ಸಾಧ್ಯಪ್ರಯತ್ನಗಳನ್ನು ಮಾಡಿದರು. ಮೀರತ್ ವಿಶ್ವವಿದ್ಯಾಲಯದ ೧೩ ಕಾಲೇಜುಗಳು ಮಾತ್ರ ಸಾಮೂಹಿಕ ನಕಲನ್ನು ಅಧಿಕೃತವಾಗಿ ವರದಿ ಮಾಡಿರುವುದರಿಂದ, ಆ ಕೇಂದ್ರಗಳಲ್ಲಿ ಪರೀಕ್ಷೆ ರದ್ದುಗೊಳಿಸಬಹುದೆಂದು ಕುಲಪತಿಗಳು ಸೂಚಿಸಿದರು. ಸಮಿತಿಯ ಸದಸ್ಯರಿಗೆ ಇದು ಸಂಗತವೆನಿಸಲಿಲ್ಲ. ಬಿರುಸಾದ ಬೇರೆ ಕ್ರಮ ಕೈಗೊಳ್ಳಬೇಕೆಂದು ಅವರು ಇಚ್ಛಿಸಿದ್ದರು. ೧೦ ದಿನದ

ಒಳಗಾಗಿ ಎಲ್ಲ ಕಾಲೇಜುಗಳು ತಮ್ಮಲ್ಲಿ ಪರೀಕ್ಷೆ ನಡೆಯುತ್ತಿದ್ದಾಗ ಇದ್ದ ಸ್ಥಿತಿಯನ್ನು ಅಧಿಕೃತವಾಗಿ ತಿಳಿಸಬೇಕೆಂದು ಪ್ರಾಂಶುಪಾಲರಿಗೆ ಸೂಚನೆ ಕಳುಹಿಸಲು ಕುಲಪತಿಗಳನ್ನು ಸಮಿತಿಯ ಸದಸ್ಯರು ಒಪ್ಪಿಸಿದರು.

ವಂಚನೆಯ ವಿರುದ್ಧ ಹೋರಾಟಕ್ಕೆ ರಂಗ ಸಜ್ಜಾಗಿತ್ತು. ಆತನಕ ಮರೆಮಾಚಿದ್ದ ಸತ್ಯವನ್ನು ಪತ್ರಿಕೆಗಳಿಗೆ ತಿಳಿಸಬೇಕೆಂದು ಹೆದರಿಕೊಂಡಿದ್ದ ಪ್ರಾಂಶುಪಾಲರನ್ನು ಮತ್ತು ಅಧ್ಯಾಪಕರನ್ನು, ಗುಪ್ತ ಹಾಗೂ ಸಂಗಡಿಗರು ಒಡಂಬಡಿಸಿದರು. ೨೩ ಕಾಲೇಜುಗಳಲ್ಲಿ ಪರೀಕ್ಷೆಗಳನ್ನು ರದ್ದುಪಡಿಸಿ, ಸುಮಾರು ೫೦,೦೦೦-೬೩,೦೦೦ ದಷ್ಟು ಪರೀಕ್ಷಾರ್ಥಿಗಳು ಪುನಃ ಕುಳಿತುಕೊಳ್ಳಬೇಕೆಂದು ವಿಶ್ವವಿದ್ಯಾಲಯದ ಪರೀಕ್ಷಾ ಸಮಿತಿ ಮಾರ್ಚ್ ೧೮ ರಂದು ನಿರ್ಧರಿಸಿತು. ಗುಪ್ತ ಮತ್ತು ಸಂಗಡಿಗರು ಆನಂದತುಂದಿಲರಾಗಿದ್ದರು. ವಿದ್ಯಾರ್ಥಿಗಳನ್ನು ಸಮಾಧಾನಪಡಿಸುವ ಆ ದಿನಗಳು ಕಳೆದವೆನ್ನುವುದಕ್ಕೆ ಪೂರ್ವನಿದರ್ಶನವಿಲ್ಲದ ಈ ಕಾರ್ಯ ದೃಷ್ಟಾಂತವಾಯಿತು.

ದಿಙ್ಮೂಢರಾದ ವಿದ್ಯಾರ್ಥಿಗಳ ಪ್ರತಿಕ್ರಿಯೆ ಉಗ್ರವಾಗಿತ್ತು. ಮಾರ್ಚ್ ೧೯ ರಂದು ಉದ್ರೇಕಿತ ಗುಂಪೊಂದು ವಿಹಾರ್ ಕಾಲೇಜಿನ ಅಂಚೆ ಕಛೇರಿಯನ್ನು ಲೂಟಿ ಮಾಡಿದರೆ, ಇನ್ನೊಂದು ಗುಂಪು-ಪ್ರಾಂಶುಪಾಲರಾದ ರತನ್‌ಚಾಂದ್ ಮಿಟ್ಟಲ್ಲರ ಕಛೇರಿಯೊಳಗೆ ರಭಸದಿಂದ ನುಗ್ಗಿ, ಅವರಿಗೆ ತಪರಾಕಿ ಬಿಗಿದು, ರಾಜಿನಾಮೆ ಕೊಡುವಂತೆ ಬೊಬ್ಬಿರಿಯಿತು. ಪೋಲಿಸರೊಡನೆ ಉಗ್ರಕಾದಾಟ ನಡೆದ ಮೇಲೆ ಆರು ವಿದ್ಯಾರ್ಥಿಗಳನ್ನು ಬಂಧಿಸಲಾಯಿತು.

ಫೆಬ್ರವರಿ ತಿಂಗಳ ಪರೀಕ್ಷೆಯನ್ನು ರದ್ದುಗೊಳಿಸುವುದು, ಗುಪ್ತರ ಪ್ರಥಮ ಹೆಜ್ಜೆಯಾಗಿತ್ತು. ಮುಂದಿನ ಪರೀಕ್ಷೆಗಳನ್ನು ನಿಯಮಕ್ಕೆ ಅನುಗತವಾಗಿ ಕಟ್ಟುನಿಟ್ಟಿನಿಂದ ನಡೆಸಲು ಗುಪ್ತರು ನಿಶ್ಚಯಿಸಿದರು. ಆದರೆ, ಕೇವಲ ಅಧ್ಯಾಪಕರಿಂದ ಕಿಡಿಗೇಡಿ ಹುಡುಗರನ್ನು ಪರಿಶೋಧಿಸಲು ಅಸಾಧ್ಯ. ಇದಕ್ಕೆ ಪೋಲಿಸರ ಸಹಯೋಗ ಅವಶ್ಯಕ. ರಾಜ್ಯದ ರಾಜಕೀಯ ಮುಖಂಡರು ಅಪ್ಪಣೆಕೊಡದೆ ಪೋಲಿಸರು ಮಧ್ಯೆ ಪ್ರವೇಶಿಸಲಾರರು. ರಾಜಕಾರಣಿಗಳ ಆಶ್ರಯವಿರುವ ಕಿಡಿಗೇಡಿ ವಿದ್ಯಾರ್ಥಿ ಗುಂಪನ್ನು ತಡೆಹಿಡಿಯುವ ಕಾರ್ಯ ಸುಲಭದ್ದಲ್ಲವೆಂದು ಗುಪ್ತರು ಆಲೋಚಿಸಿದರು. ಈ ವಿದ್ಯಾರ್ಥಿಗಳು, ಪ್ರದರ್ಶನದಿಂದ ಹಿಡಿದು ವಿರೋಧಿಗಳನ್ನು ಮಟ್ಟಹಾಕುವವರೆಗಿನ ಕಾರ್ಯಗಳಿಗೆ ಉಪಯುಕ್ತವಾದುದರಿಂದ, ಎಲ್ಲ ರಾಜಕೀಯ ಪಕ್ಷಗಳು ಅವರನ್ನೆ ಓಲೈಸುತ್ತಿರುತ್ತವೆ. ಕಲ್ಲು ಹೃದಯದ ರಾಜಕಾರಣಿಗಳು ಕಾಲೇಜು ಪ್ರಾಧ್ಯಾಪಕರ ತರ್ಕವನ್ನು ಗಮನಿಸಿಯಾರೆ?

ಹೌದು, ಗಮನಿಸಿದರು! ಲಕ್ನೋದಲ್ಲಿದ್ದ ರಾಜ್ಯ ಶಿಕ್ಷಣ ಮಂತ್ರಿ ಶಿವಾನಂದ ನೌಟಿಯಾಲರು. ಮೀರತ್ ಕಾಲೇಜಿನಲ್ಲಿ ಬಾಧೆ ಕೊಡುತ್ತಿರುವವರನ್ನು ಬಂಧಿಸಲು ಆಜ್ಞೆ ಇತ್ತರು. ಗುಪ್ತರು ತಮ್ಮ ತಂತ್ರದ ಯಶಸ್ಸಿಯನ್ನು ಈ ರೀತಿ ಹೇಳುತ್ತಾರೆ—"ವಂಚನೆಯ ವಿರೋಧ ಚಳವಳಿಯು ಅದೆಷ್ಟು ಕಾವನ್ನುಂಟು ಮಾಡಿರುವುದೆಂದರೆ, ರಾಜಕಾರಣಿಗಳು ತಮ್ಮ ಆಶ್ರಿತರನ್ನು ಕಡೆಗಣಿಸಬೇಕು. ಇಲ್ಲವೆ, ಕೆರಳಿದ ಸಾರ್ವಜನಿಕರಿಂದ ವಿಮುಖವಾಗಬೇಕು." ಪರೀಕ್ಷೆಗಳು ಜುಲೈ ತಿಂಗಳಿಗೆ ಮುಂದೂಡುವುದು ಖಂಡಿತವಾದಾಗ, ಮೀರತ್ತಿನ ಪೋಲಿಸರು ಲಕ್ನೋದಿಂದ ಸ್ಪಷ್ಟ ಆಜ್ಞೆಯನ್ನು ಪಡೆದರು.

ಜುಲೈ ಒಂದರಂದು ಮೀರತ್ ಕಾಲೇಜು—ಸೇನಾ ಶಿಬಿರದಂತೆ ಕಾಣುತ್ತಿತ್ತು. ಕಾಲೇಜಿನ ಪ್ರಾಂಗಣದಲ್ಲಿ ಆಯುಧಪಾಣಿಗಳಾದ ಪೋಲಿಸರು ಕುದುರೆಯ ಬೆನ್ನಮೇಲೆ ಮತ್ತು ಜೀಪಿನಲ್ಲಿ ಸುತ್ತಾಡುತ್ತಿದ್ದರು. ಈ ರೀತಿಯ ವ್ಯವಸ್ಥೆ ಇತರ ಕಾಲೇಜುಗಳಲ್ಲೂ ಮಾಡಲಾಗಿತ್ತು. ವಿದ್ಯಾರ್ಥಿಗಳ ಪ್ರವೇಶ ಪತ್ರಗಳನ್ನು ಕೂಲಂಕಷವಾಗಿ ಪರೀಕ್ಷಿಸಲು ಮತ್ತು ದೇಹವನ್ನು ಶೋಧಿಸಲು, ಪರೀಕ್ಷಾಧಿಕಾರಿಗಳಿಗೆ ಪೋಲಿಸರು ಸಹಾಯ ಮಾಡಿದರು. ಇಷ್ಟೆಲ್ಲ ಮುನ್ನೆಚ್ಚರಿಕೆ ವಹಿಸಿದ್ದರೂ ಪುಂಡರು ಹೋರಾಟ ಮಾಡದಿರಲಿಲ್ಲ!

ಹಲವು ಕೇಂದ್ರಗಳಲ್ಲಿ, ಅವರು ಪ್ರಶ್ನೆ ಪತ್ರಿಕೆಗಳನ್ನು ಹರಿದುಹಾಕಿ, ಪರೀಕ್ಷಾ ಭವನದಿಂದ ಬಿರುಗಾಳಿಯಂತೆ ಹೊರಬಂದು ಕಿಟಕಿಗಳನ್ನು ಅಪ್ಪಳಿಸಿ ತಮ್ಮ ಆಕ್ರೋಶವನ್ನು ಅಭಿವ್ಯಕ್ತಿಸಿದರು. ಪೋಲಿಸರು ಪ್ರತಿಯಾಗಿ ಥಳಿಸಿದರು. ಹಲವು ವಿದ್ಯಾರ್ಥಿಗಳನ್ನು ಬಂಧಿಸಿ ಸಾರ್ವಜನಿಕವಾಗಿ ಚಚ್ಚಿದರು. ನಿರ್ದಯೆ ತಕ್ಕ ಪ್ರತಿಫಲ ಕೊಟ್ಟಿತು. ಮೀರತ್ ವಿಶ್ವವಿದ್ಯಾಲಯದಲ್ಲಿ ಹಲವು ಕಾಲಗಳಿಂದ ಮರೆಯಾಗಿದ್ದ ಶಾಂತಿ ಮತ್ತು ಶಿಸ್ತು ಜುಲೈ ೩ ರಂದು ಸ್ಥಾಪಿತವಾಯಿತು. ಎರಡು ವರ್ಷಗಳಿಂದ ಅದು ಹಾಗೆಯೇ ಉಳಿದಿದೆ.

ಸೂಚಿಸಿದ ಯುಕ್ತ ಕಾರ್ಯಕ್ರಮಗಳು: ಕೈಲಾಸ್ ಚಂದ್ರಗುಪ್ತರ ಚಳವಳಿಯು ಮೀರತ್ ವಿಶ್ವವಿದ್ಯಾನಿಲಯದಲ್ಲಿ ನಡೆಯುತ್ತಿದ್ದ ಸಾಮೂಹಿಕ ನಕಲನ್ನು ನಿಲ್ಲಿಸಲು ಶಕ್ತವಾದರೂ ಇತರ ವಿಶ್ವವಿದ್ಯಾನಿಲಯಗಳಲ್ಲಿ ಸನ್ನಿವೇಶಗಳು ಬದಲಾಗದೆ ಉಳಿದಿವೆ. ಕೆಳಗಿನ ಕೆಲವು ಯುಕ್ತಕ್ರಮಗಳನ್ನನುಸರಿಸಿದ್ದಾದರೆ, ಈ ಸಂಸ್ಥೆಗಳಲ್ಲೂ ಸಾಮೂಹಿಕ ವಂಚನೆಯನ್ನು ತೊಡೆದು ಹಾಕುವುದು ಅಸಂಭಾವ್ಯವಲ್ಲ.

೧. ಅಧಿಕಾರಿಗಳು ತಕ್ಕಕ್ರಮ ಕೈಗೊಳ್ಳಲು—ಅಧ್ಯಾಪಕರು ನಿರಾಸಕ್ತಿ

ಯನ್ನು ತ್ಯಜಿಸಿ, ಸಾರ್ವಜನಿಕರೊಡನೆ ಸಂಘಟಿತರಾಗಿ ಒತ್ತಾಯಿಸಬೇಕು.

೨. ತೊಂದರೆ ಕೊಡುವ ಪುಂಡರನ್ನು ಕಾಲೇಜಿನಿಂದ ದೂರವಿರಿಸಲು, ಕಟ್ಟುನಿಟ್ಟಿನ ಪ್ರವೇಶ ಧೋರಣೆ ಅತಿ ಅಗತ್ಯ.

೩. ಅಗತ್ಯವಿದ್ದಾಗ ಶಿಸ್ತು ಕಾಪಾಡಲು ಕಾಲೇಜಿನ ಅಧಿಕಾರಿಗಳಿಗೆ ಪೋಲಿಸರು ಸಹಾಯ ಮಾಡಬೇಕು.

೪. ವಿದ್ಯಾರ್ಥಿ ಸಂಘಗಳನ್ನು ನಿಷೇಧಿಸಬೇಕು. ಅಥವಾ ಗಂಭೀರರಾದ ಉತ್ತಮ ವಿದ್ಯಾರ್ಥಿಗಳ ವಿದ್ಯಾರ್ಥಿ ಸಂಘವನ್ನು ಸ್ಥಾಪಿಸಬೇಕು.

ಕೈಲಾಸ್‌ಚಂದ್ರಗುಪ್ತರು ತಮ್ಮ ಹೋರಾಟವನ್ನಿನ್ನೂ ಮುಂದುವರಿಸುತ್ತಿದ್ದಾರೆ. ಇದೀಗ ಅವರ ಹೋರಾಟ-ವಿಶ್ವವಿದ್ಯಾಲಯದ ಭ್ರಷ್ಟಾಚಾರ ಮತ್ತು ಆಡಳಿತದ ದುರುಪಯೋಗದ ವಿರುದ್ಧ ಹಿಂದಿನಂತೆ, ಸಮರದಲ್ಲಿ ಪತ್ರಿಕೆಗಳು ಮತ್ತು ಪೌರರು ಭಾಗಿಗಳಾಗುವಂತೆ ಗುಪ್ತರು ಶ್ರಮಿಸಿದ್ದಾರೆ. ಈ ಹೋರಾಟದ ಬಗ್ಗೆ ಗುಪ್ತರ ಅಭಿಪ್ರಾಯ ಹೀಗಿದೆ—"ಇದು ಸುಲಭವಾಗಿಲ್ಲ. ಜನರು ಮಾಡುವ ಕಾರ್ಯ ಮತ್ತು ಅವರಲ್ಲಿ ಅವರೆಷ್ಟು ಭಾಗಿಗಳಾಗಿದ್ದಾರೆನ್ನುವುದು ಹೇಗೆ ಪ್ರಾಮುಖ್ಯವೆಂದು ಗುಂಪು ನಕಲು ಹೊಡೆಯುವಿಕೆಯ ಮೇಲಿನ ವಿಜಯ ತೋರಿಸಿಕೊಟ್ಟಿದೆ."

ಎ. ಪಿ. ರಾಧಾಕೃಷ್ಣ



ವಿಶ್ವಕ್ಕೆ ಸ್ಫೂರ್ತಿ ಮತ್ತು ಬೆಳಕನ್ನು ನೀಡುವ ಸತ್ಯ ಸಿದ್ಧಾಂತವನ್ನು ಸಾರುವ ಶಕ್ತಿ ಬಂದಾಗಲೇ ಬಾಳು ಹಸನಾಗುವುದು.

—ರಮಣಮಹರ್ಷಿ

ಭಾರತೀಯ ಆಯುರ್ವೇದದ ಮೂಲಸ್ವರೂಪ ಮತ್ತು ಅದರ ವೈಜ್ಞಾನಿಕ ಆಧಾರ

ಮಂತ್ರಕಾಲ, ಬ್ರಾಹ್ಮಣಕಾಲ, ಸೂತ್ರಕಾಲ ಹಾಗೂ ರಾಮಾಯಣ ಮತ್ತು ಮಹಾಭಾರತ ಕಾಲ ಎಂದು ಭಾರತದ ಚರಿತ್ರೆಯ ಕಾಲವನ್ನು ವಿಭಾಗಿಸಲಾಗಿದೆ. ಕ್ರಿ.ಪೂ. ೧೫,೦೦೦ ದಿಂದ ೧೦,೦೦೦ ವರ್ಷದವರೆಗೆ ಮಂತ್ರಕಾಲ ಹಾಗೂ ಕ್ರಿ.ಪೂ.೫೦೦೦ ದಿಂದ ೧೫೦೦ ವರ್ಷಗಳವರೆಗೆ ಮಹಾಭಾರತದ ಕಾಲದ ಅಸ್ತಿತ್ವವನ್ನು ಪ್ರಾಚೀನ ಹಾಗೂ ಅರ್ವಾಚೀನ ಚರಿತ್ರಕಾರರು ಮಾನ್ಯಮಾಡಿದ್ದಾರೆ.

ಪ್ರಾಣಿಮಾತ್ರದ ಪ್ರಕೃತಿ-ವಿಕಾರಜ್ಞಾನ ಅಂದರೆ ಪ್ಯಾಥಾಲಜಿ ಹಾಗೂ ಶರೀರಕಾರ್ಯವಿಜ್ಞಾನ ಅಂದರೆ ಫಿಜಿಯಾಲಜಿಗಳ ಮೂಲಭೂತ ಸಿದ್ಧಾಂತಗಳ ತಾತ್ತ್ವಿಕ ನಿರೂಪಣೆ ಮಂತ್ರಕಾಲದಲ್ಲಿಯೇ ಸಂಪೂರ್ಣವಾಗಿ ಸಿದ್ಧವಾಗಿಬಿಟ್ಟಿತ್ತು ಎಂಬುದು ವೈದಿಕ ಹಾಗೂ ಸಂಸ್ಕೃತ ವಾಙ್ಮಯದ ಮನೋಯೋಗಪೂರ್ವಕ ಅಧ್ಯಯನದಿಂದ ತಿಳಿದುಬರುತ್ತದೆ. ಮಂತ್ರಕಾಲದಿಂದ ಇಂದಿನವರೆಗೆ ಚಿಕಿತ್ಸಾವಿಜ್ಞಾನದ ಬಗ್ಗೆ ಭಾರತದಲ್ಲಿ ಅಥವಾ ಭಾರತವಲ್ಲದೆ ಅನ್ಯದೇಶಗಳಲ್ಲಿ ಏನೆಲ್ಲ ಪ್ರವಚನಗಳಾಗಿವೆ, ಸಂಶೋಧನೆಗಳು ನಡೆದಿವೆ, ಸಿದ್ಧಾಂತಗಳು ಸ್ಥಿರೀಕರಿಸಲ್ಪಟ್ಟಿವೆ, ಅವೆಲ್ಲವೂ ಪ್ರಾಯಶಃ ಮೇಲೆ ಹೇಳಿರುವ ಸಿದ್ಧಾಂತಗಳೇ ಹೆಚ್ಚು ಹೆಚ್ಚು ಸ್ಪಷ್ಟೀಕರಣಗೊಳಿಸಲ್ಪಟ್ಟವಾಗಿವೆ, ಹಾಗೂ ಬರಲಿರುವ ಯುಗಗಳ ತನಕ, ಇವುಗಳ ಉತ್ತರೋತ್ತರ ರಹಸ್ಯೋದ್ಘಾಟನೆಯಲ್ಲಿಯೇ ವಿಶ್ವದ ಚಿಕಿತ್ಸಾವಿಧಾನದ ಉತ್ತಮೋತ್ತಮ ವೈಜ್ಞಾನಿಕ ಸಂಶೋಧನೆಗಳಲ್ಲಿ ಪರ್ಯವಸಾನಗೊಳ್ಳುತ್ತಿರುತ್ತವೆ. ಏಕೆಂದರೆ 'ಋಷಿ' ಎಂದು ಕರೆಸಿಕೊಳ್ಳುತ್ತಿದ್ದ ಮಾನವರಿಂದ ಈ ಸಿದ್ಧಾಂತಗಳು ಅವತರಿಸಿವೆ—ಋಷಿಗಳೆಂದರೆ ತ್ರಿಕಾಲಅವ್ಯಾಹತ ಜ್ಞಾನದಿಂದ ಕೂಡಿದವರು—'ಯೇಷಾಂ ತ್ರಿಕಾಲಮಮಲಂ ಜ್ಞಾನಮವ್ಯಾಹತಂ ಸದಾ.' ಇವರು 'ಆಪ್ತ'ರೆಂದು ಭಾವಿಸಲ್ಪಟ್ಟಿದ್ದರು—'ಆಪ್ತಾಃ ಖಲು ಸಾಕ್ಷಾತ್ ಕೃತಧರ್ಮಾಣಃ'—ಅಗ್ನಿವೇಶದ ಗುರು ಪುನರ್ವಸು-ಆತ್ರೇಯರು ಚಿಕಿತ್ಸಾ-ವಿಜ್ಞಾನದ ಇತಿಹಾಸದ 'ಆಪ್ತ'ರೆಂದು ಭಾವಿಸಲ್ಪಟ್ಟಿದ್ದಾರೆ—'ಪುರಾ ಪ್ರತ್ಯಕ್ಷಧರ್ಮಾಣಂ ಭಗವಂತಂ ಪುನರ್ವಸುಂ.'

೧೯೮೧ರ ಅಕ್ಟೋಬರ್ ಮಾಹೆಯ ನವನೀತ್‌ನಲ್ಲಿ ಪ್ರಕಟವಾಗಿರುವ ಆರ್. ಕಲಾಧರ ಭಟ್ ಅವರ 'ಭಾರತೀಯ ಆಯುರ್ವೇದ್ ಕಾ ಮೌಲಿಕ್ ಸ್ವರೂಪ್ ಔರ್ ಉಸ್‌ಕಾ ವೈಜ್ಞಾನಿಕ್ ಆಧಾರ್' ಎಂಬ ಲೇಖನದ ಅನುವಾದ.

ತ್ರಿದೋಷ ಸಿದ್ಧಾಂತ ವಾಸ್ತವವಾಗಿ ಅತೀಂದ್ರಿಯ ಸಮನ್ವಿತ ವ್ಯಕ್ತಿಯ ವಿಲಕ್ಷಣ ಸೃಷ್ಟಿ. ಮಂತ್ರಕಾಲದಲ್ಲಿ 'ರೋಗನಿದಾನ' ಶಾಸ್ತ್ರದ ಸರ್ವಸಮ್ಮತ ಸಿದ್ಧಾಂತ ಸ್ಥಿರಗೊಳಿಸಲ್ಪಟ್ಟಿತ್ತು. ಈಗ ಸಹಸ್ರಾರು ವರ್ಷಗಳು ಕಳೆದು ಹೋಗಿವೆ, ಹೊಸ ಹೊಸ ರೋಗಗಳು ಉತ್ಪನ್ನವಾಗುತ್ತಿವೆ, ಆಗುತ್ತಲೇ ಇರುತ್ತವೆ, ಆದರೆ ತಮ್ಮ ತ್ರಿದೋಷ-ವಿಜ್ಞಾನದ ಮೂಲಕ ಆ ಕಾಲದ ಪ್ರತ್ಯಕ್ಷ ಧರ್ಮಗಳಾದ ಋಷಿಗಳಿಗೆ ಈ ಎಲ್ಲ ಬಂದ ಹಾಗೂ ಬಾರದ ವಿಕಾರಗಳ, ತಿಳಿದ ಅಥವಾ ತಿಳಿಯದ ವ್ಯಾಧಿಗಳ ಪೂರ್ವಪರಿಚಯವೇ ಇರಲಿಲ್ಲವೇನೋ ಅನಿಸುತ್ತದೆ.

ಆಯುರ್ವೇದದಲ್ಲಿ ವಿಕಾರದ—ವ್ಯಾಧಿಯ—ಹೆಸರನ್ನು ವಿಶೇಷವಾಗಿ ತಿಳಿದುಕೊಳ್ಳುವ ಅವಶ್ಯಕತೆಯಿಲ್ಲ; ಏಕೆಂದರೆ ಎಲ್ಲ ವಿಕಾರಗಳ ಅಥದಿಂದ ಇತಿಯತನಕ ಹೆಸರಿನ ಪಟ್ಟಿಯನ್ನು ನಿರ್ಮಾಣ ಮಾಡಲು ಸಾಧ್ಯವಾಗುವುದಿಲ್ಲ—'ನಹಿ ಸರ್ವವಿಕಾರಾಣಾಂನಾಮತೋಽಸ್ತಿ ಧ್ರುವಾಸ್ಥಿತಿಃ'—ವಾತ, ಪಿತ್ತ, ಕಫ—ಈ ಮೂರು ದೋಷಗಳನ್ನು ದೃಷ್ಟಿಯಲ್ಲಿಟ್ಟುಕೊಂಡೇ ರೋಗೋತ್ಪತ್ತಿಯನ್ನು ಹೇಳಲಾಗಿದೆ. ದೋಷಗಳ ವಿಷಮತೆಯೇ ರೋಗ—ದೋಷ-ವಿಶೇಷದ ಚಿಕಿತ್ಸೆಯಲ್ಲಿಯೇ ರೋಗ-ವಿಶೇಷದ ಚಿಕಿತ್ಸೆ ಇದೆ.

ರಸ, ರಕ್ತ, ಮಾಂಸಾದಿ ಧಾತುಗಳ, ಮಲ-ಮೂತ್ರ ಸ್ವೇದಾದಿ ಮಲಗಳ, ಧಮನಿ, ನಾಡಿ, ರಸಾಯನಿ ಮುಂತಾದ ಅನೇಕ ವಿಧವಾದ ವಾಹಿನಿಗಳ, ಹೃದಯ, ಫುಪ್ಪುಸ, ಯಕೃತ್ ಮುಂತಾದ ಯಂತ್ರಗಳ, ಶರೀರದ ಸೂಕ್ಷ್ಮ ಅಂಗ ಹಾಗೂ ಉಪಾಂಗಗಳ ದ್ರವ್ಯಾಂತರ್ಗತವಾದ ಅನೇಕ ರೀತಿಯ ಗುರುಲಘು, ಶೀತೋಷ್ಣ, ಶ್ಲಕ್ಷ್ಣ-ಕರ್ಕಶ, ವಿಶದ-ಪಿಂಛಲ, ಸಾಂದ್ರದ್ರವ, ಸುಗಂಧ-ದುರ್ಗಂಧ, ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಇತ್ಯಾದಿ ಗುಣಗಳ, ನಿಮೇಷೋನ್ಮೇಷ, ಸಂಕೋಚ-ವಿಕಾಸ ಮುಂತಾದ ಶರೀರದ ಅನೇಕ ವಿಧವಾದ ಕ್ರಿಯೆಗಳ ಹಾಗೂ ಮನೋಗತ ಭಾವನೆಗಳ ವಿಕೃತಿ ಅವಿಕೃತಿಗಳು—ವಾತ, ಪಿತ್ತ, ಕಫ ಈ ಮೂರು ದೋಷಗಳ ಸಮತೆ ಅಥವಾ ವಿಷಮತೆಯನ್ನು ಅವಲಂಬಿಸಿರುತ್ತವೆ. ಈ ಸಂದರ್ಭದಲ್ಲಿ ಋಗ್ವೇದದ ಈ ಸೂತ್ರಾತ್ಮಕವಾದ ಮಂತ್ರ ಮನನೀಯವಾಗಿದೆ.

'ತ್ರಿಧಾತುಃ ಸರ್ಮವಹತಮ್' ಅಂದರೆ, 'ವಾತಪಿತ್ತಶ್ಲೇಷ್ಮ ಧಾತುತ್ರಯಸ್ಯ ಶಮನ ವಿಷಯಂ ಸುಖಂ ವಹತಮ್.'

ದೋಷಕ್ಕೂ ರೋಗಕ್ಕೂ ಬಹಳ ನಂಟು—ದೋಷವನ್ನು ವಿಷಮಗೊಳಿಸುವ

ಕಾರಣಗಳ ಬಗ್ಗೆ ಇಷ್ಟೊಂದು ಸೂಕ್ಷ್ಮವೂ, ಸಾರ್ವಭೌಮವೂ ಆದ ವೈಜ್ಞಾನಿಕ ವಿವೇಚನೆ ಎಂದೂ ಆಗಿಲ್ಲ. ಕಾಲ, ಅರ್ಥ ಹಾಗೂ ಕರ್ಮ ಇವುಗಳ—ಪ್ರತಿಯೊಂದರ-ಹೀನ, ಮಿಥ್ಯೆ ಹಾಗೂ ಅತಿಯೋಗಗಳೇ ದೋಷಗಳನ್ನು ವಿಷಮಗೊಳಿಸುವ, ರೋಗೋತ್ಪತ್ತಿ ಮಾಡುವ ಮುಖ್ಯ ಕಾರಣವೆಂದು ಭಾವಿಸಲಾಗಿದೆ. ಶೀತ, ಉಷ್ಣ, ಮಳೆಗಳನ್ನು 'ಕಾಲ'ವೆಂದೂ; ಇಂದ್ರಿಯಗಳ ವಿಷಯಗಳಾದ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳನ್ನು 'ಅರ್ಥ'ವೆಂದೂ; ಶಾರೀರಿಕ, ವಾಚಿಕ ಹಾಗೂ ಮಾನಸಿಕ ಪ್ರಯತ್ನಗಳನ್ನು 'ಕರ್ಮ'ವೆಂದೂ ಕರೆಯಲಾಗಿದೆ. ಶೀತಾದಿ ಕಾಲದಲ್ಲಿ ಶೀತಾದಿಯು ಅಲ್ಪತೆ, ವಿಪರ್ಯಯ ಹಾಗೂ ಅಧಿಕತೆಯನ್ನು ಕ್ರಮವಾಗಿ ಕಾಲದ ಹೀನ, ಮಿಥ್ಯೆ ಹಾಗೂ ಅತಿಯೋಗವೆನ್ನುತ್ತಾರೆ—ಇಂದ್ರಿಯಗಳ ಬಗ್ಗೆ ತಮ್ಮ ವಿಷಯಗಳಿಂತ ಅಲ್ಪ, ಅನುಚಿತ ಹಾಗೂ ಅಧಿಕ ಸಂಬಂಧವು ಅರ್ಥದ ಹೀನ, ಮಿಥ್ಯೆ ಹಾಗೂ ಅತಿಯೋಗವೆನ್ನುತ್ತಾರೆ—ಮಲಮೂತ್ರಾದಿಗಳನ್ನು ತಡೆಯುವುದು, ಊಟ ಮಾಡುವಾಗ ಮಿಥ್ಯೆ ಮಾತನಾಡುವುದು, ರಾಗದ್ವೇಷಾದಿ ಭಾವನೆಗಳನ್ನು ವ್ಯಕ್ತಪಡಿಸುವುದು ಕ್ರಮವಾಗಿ ಕಾಯಾ, ವಾಚಾ, ಮನಸಾ ಸಂಬಂಧಿಸಿದ ಕರ್ಮದ ಮಿಥ್ಯಾಯೋಗವೆನ್ನುತ್ತಾರೆ—ಇವುಗಳ ಮೂಲಕ ಆಚರಿಸಿದ ಪ್ರಯತ್ನಗಳ ಅತಿಪ್ರವೃತ್ತಿ ಅತಿಯೋಗ ಹಾಗೂ ಅಲ್ಪ ಪ್ರವೃತ್ತಿಯನ್ನು ಹೀನಯೋಗವೆಂದು ಕರೆಯಲಾಗಿದೆ.

ಉತ್ಪಾದಕ ಕಾರಣಗಳ ವಿಭಿನ್ನತೆಯ ಆಧಾರದಿಂದಾಗಿ ವ್ಯಾಧಿಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿದೆ. ಆಹಾರ-ವಿಹಾರಗಳಿಂದ ಉಂಟಾಗುವ ಶಾರೀರಿಕ ವ್ಯಾಧಿಗಳು; ಲೋಭ, ಈರ್ಷ್ಯೆ, ಕ್ರೋಧ ಮುಂತಾದವುಗಳಿಂದ ಮಾನಸಿಕ; ಅಭಿಘಾತ, ದಂಶನಾದಿಗಳಿಂದ ಆಗಂತುಕ ಹಾಗೂ ಜನ್ಮ-ಮರಣ-ಕ್ಷುಧಾದಿಗಳಿಂದುಂಟಾಗುವವನ್ನು ಸ್ವಾಭಾವಿಕ ವ್ಯಾಧಿಗಳೆಂದು ಕರೆಯಲಾಗಿದೆ. ವ್ಯಾಧಿಗಳನ್ನು ಹೀಗೆ ನಾಲ್ಕು ಭಾಗಗಳಾಗಿ ವಿಂಗಡಿಸಿರುವುದು ಅತ್ಯಂತ ಮೌಲಿಕವೂ ಹಾಗೂ ಅಂತಿಮವಾದುದು. ವ್ಯಾಧಿಗಳನ್ನು ಇಷ್ಟು ಸೂಕ್ಷ್ಮವಾಗಿ, ವ್ಯಾಪಕವಾಗಿ ವಿವೇಚನೆ ಮಾಡಿರುವುದು ಬೇರೆಡೆ ದೊರೆಯುವುದಿಲ್ಲ. ಶಾರೀರಿಕವಾದ ವ್ಯಾಧಿಗಳಲ್ಲದೆ, ಮಾನಸಿಕ ಹಾಗೂ ಸ್ವಾಭಾವಿಕ ವಿಕಾರಗಳನ್ನು ವಿಂಗಡಿಸಿ ಹೇಳಿರುವುದು ರೋಗ ಶಾಸ್ತ್ರದಲ್ಲಿ, ಆಯುರ್ವೇದದ ತನ್ನದೇ ಆದ ಮೂಲ ಸಂಶೋಧನೆಯಾಗಿದೆ. ಸ್ವಾಭಾವಿಕ ರೋಗಗಳ ವಿಷಯದಲ್ಲಿ ಆಧುನಿಕ ಚಿಕಿತ್ಸಾ ಪದ್ಧತಿಗಳು ಸಂಪೂರ್ಣವಾಗಿ ಅಪರಿಚಿತವಾಗಿವೆ; ಮಾನಸಿಕ ವಿಕಾರ

ಗಳು ಉಂಟಾಗುವ ಕಾರಣಗಳು ಹಾಗೂ ಅವುಗಳ ಚಿಕಿತ್ಸೆಗೆ ಸಂಬಂಧಿಸಿದಂತೆ ಮಾಡಿರುವ ಆಧುನಿಕ ಸಂಶೋಧನೆಗಳು ಇನ್ನು ಅಪೂರ್ಣವಾಗಿವೆ.

ಶರೀರವ ಚೈತನ್ಯದೊಂದಿಗಿರುವ ಸಂಬಂಧವನ್ನು 'ಜೀವನ' ಹಾಗೂ ಜೀವನದ ಸ್ಥಿತಿ ಪರ್ಯಂತ ಕಾಲವನ್ನು 'ಆಯುಸ್ಸು' ಎನ್ನುತ್ತಾರೆ. ಆದುದರಿಂದ ಆಯುಸ್ಸು ಸಹಜವಾಗಿ ಗತಿಶೀಲವಾಗಿದೆ 'ಏತೀತ್ಯಾಯುಃ' ಈ ಗತಿಶೀಲವಾದ ಅಸ್ಥಿರ ಆಯುಸ್ಸನ್ನು ಹೆಚ್ಚು ಹೆಚ್ಚು ಸ್ಥಿರಗೊಳಿಸಿ ಮನುಷ್ಯನು ತಾನು ಬಯಸಿದ ಪದಾರ್ಥಗಳನ್ನು ಯಥಾವತ್ತಾಗಿ ಹೇಗೆ ಭೋಗಿಸಬಹುದು ಎಂಬುದರ ಪ್ರಯೋಜನವನ್ನು ದೃಷ್ಟಿಯಲ್ಲಿಟ್ಟುಕೊಂಡೇ ಆಯುರ್ವೇದದ ಸೃಷ್ಟಿಯಾಗಿದೆ. ಆಯುರ್ವೇದದ ಅನ್ಯ ಕರ್ತವ್ಯ ವಿಕಾರ ಶಮನ ಮಾಡುವುದೇ ಅಲ್ಲ—ಆಯುರ್ವೇದ ವಿಕಾರ ಶಮನವನ್ನು ಏಕೆ ಬಯಸುತ್ತದೆಂದರೆ ಅದು ವ್ಯಾಧಿಗಳನ್ನು ಶಮನಮಾಡುವುದರ ಮೂಲಕ ಸಹಜವಾಗಿ ಪ್ರಾಪ್ತವಾಗಿರುವ ಜರಾ-ಮರಣ ರೂಪೀ ವ್ಯಾಧಿಗಳಿಂದ ಹೆಚ್ಚು ಹೆಚ್ಚು ರಕ್ಷಣೆ ಪಡೆಯುವ ಉಪಾಯಗಳನ್ನು ಮನುಷ್ಯನಿಗೆ ಬೋಧಿಸುತ್ತ, ಅವನಿಗೆ ತನ್ನ ಈ ಜೀವನದ ಪರಿಪೂರ್ಣ ವಿಕಾಸವಲ್ಲಿ ಹಾಗೂ ಜೀವನವಲ್ಲಿ ಇದೇ ವಿಕಾಸ-ಪರಂಪರೆಯನ್ನು ಗತಿಶೀಲವಾಗಿ ಜೀವಂತವಾಗಿಡುವುದರಲ್ಲಿ ಸಹಾಯಮಾಡಲಿ ಎಂಬ ಕಾರಣದಿಂದ. ಐತಿಹಾಸಿಕವಾದ ವಿಕಾಸದಲ್ಲಿಯೇ ಮಾನವ ಜನ್ಮದ ಫಲಶ್ರುತಿಯ ಉಪದೇಶವನ್ನು ಆಧುನಿಕ ತತ್ತ್ವಜ್ಞಾನಿ ನೀಡುತ್ತಲೇ ಇದ್ದಾನೆ. ಆದುದರಿಂದಲೇ ರೋಗ ಚಿಕಿತ್ಸೆಯ ಜೊತೆಜೊತೆಗೆ ರುಗ್ಣ ಚಿಕಿತ್ಸೆಯ ಮೇಲೆ, ಮಾನವನ ಅನ್ನಮಯ ಕೋಶದಿಂದ ಹಿಡಿದು ಆನಂದಮಯ ಕೋಶದ ವರೆಗಿನ ಆರೋಗ್ಯದ ಮೇಲೆ, ಆಯುರ್ವೇದ ಹೆಚ್ಚು ಒತ್ತನ್ನು ಕೊಟ್ಟಿದೆ.

ಆಯುರ್ವೇದವು ದೇಹ, ಇಂದ್ರಿಯಗಳು, ಮನಸ್ಸು ಹಾಗೂ ಆತ್ಮದ ಪ್ರಸನ್ನ ವೃತ್ತಿಯನ್ನೇ ಸ್ವಾಸ್ಥ್ಯ ವೃತ್ತಿ ಅಥವಾ ಆರೋಗ್ಯ ಪ್ರವೃತ್ತಿ ಎಂದು ಒಪ್ಪಿದೆ 'ಪ್ರಸನ್ನಾತ್ಮೇಂದ್ರಿಯಮನಾಸ್ಸ್ವಸ್ಥ ಇತ್ಯಭಿಧೀಯತೇ.' ಆರೋಗ್ಯದ ಪರಿಭಾಷೆಯಲ್ಲಿ, ಆತ್ಮ ಹಾಗೂ ಮನಸ್ಸಿನ 'ಪ್ರಸಾದ'ದ ಪರಿಗಣನೆ ರಜಸ್ಸುತಮಸ್ಸು ಮುಂತಾದ ಮನಸ್ಸಿನ ದೋಷಗಳ ವಿವೇಚನೆಯು ಕೇವಲ ಒಂದು ದಾರ್ಶನಿಕ ಕಲ್ಪನೆ ಮಾತ್ರವಲ್ಲ. ಇದು ಜೀವನದ ಆಧ್ಯಾತ್ಮಿಕತೆಯ, ವ್ಯಾವಹಾರಿಕ ಅದರ ಸರ್ವಾತ್ಮನಾ ಕಲ್ಯಾಣಮಯೀ ಸಂಶೋಧನೆಯಾಗಿದೆ. 'ಅಥಾತೋ ಜನಪದ ವಿಧ್ವಂಸನೀಯ ಯಾಧ್ಯಾಯಂ ವ್ಯಾಖ್ಯಾಸ್ಯಾಮಃ' ಎಂಬ ಈ ಸೂತ್ರದ ಮೂಲಕ ಸಾಂಕ್ರಾಮಿಕ ರೋಗಗಳ ಬಗ್ಗೆ ಆಯುರ್ವೇದವು ನೀಡುವ ವ್ಯಾಖ್ಯಾನದ

ವೈಜ್ಞಾನಿಕ ತತ್ತ್ವವನ್ನು ಸ್ವಸ್ಥಗತ ಮಾಡಿಕೊಳ್ಳಲು ವಿಶ್ವದ ಚಿಕಿತ್ಸಾ ಪದ್ಧತಿಗಳು ಇನ್ನೂ ಅಪಕ್ವಸ್ಥಿತಿಯಲ್ಲಿವೆ. ನೀರು, ಗಾಳಿ, ದೇಶ, ಕಾಲ ಮುಂತಾದುವುಗಳ ದುಷ್ಟಿಯಿಂದ ಸಾಂಕ್ರಾಮಿಕ ರೋಗಗಳು ಉತ್ಪನ್ನವಾಗುತ್ತವೆ. ಮಾನಸಿಕ ವಿಕೃತಿಯೇ ಈ ದುಷ್ಟಿಯ ಮೂಲ. ಕುಟುಂಬದ, ಸಮಾಜದ, ದೇಶದ, ರಾಷ್ಟ್ರದ ಸೂತ್ರಧಾರರು ಲೋಭ, ಈರ್ಷೆ, ದ್ವೇಷದ ಆಧಿಕ್ಯದಿಂದ ಆಕ್ರಾಂತರಾಗಿ ಲಂಚ, ಸಂಗ್ರಹ ವೃತ್ತಿಯಿಂದಾಗಿ ಸ್ವಾರ್ಥಪರಾಣರಾದಾಗ ಪ್ರಜೆಗಳೂ ಸಹ ಅವರನ್ನು ಅನುಕರಿಸುತ್ತಾರೆ. ಇಂಥ ಅನಾರೋಗ್ಯಕರವಾದ ಪ್ರವೃತ್ತಿಗಳಿಂದ ಪೀಡಿತರಾದ ವ್ಯಕ್ತಿಗಳು ಪರಸ್ಪರ ಹಿಂಸೆ ಹಾಗೂ ಯುದ್ಧ, ಹೊಡೆದಾಟ, ಕಲಹ ಮುಂತಾದವುಗಳಲ್ಲಿ ತೊಡಗುತ್ತಾರೆ. ಮನುಷ್ಯರ ಸಂಹಾರವಾಗುತ್ತದೆ, ವ್ಯಾಧಿಗಳು ಹರಡುತ್ತವೆ. ಭೌತಿಕ ಆರೋಗ್ಯ ಮಾನಸಿಕ ಆರೋಗ್ಯದೊಂದಿಗೆ ನಿಗೂಢ ಸಂಬಂಧವನ್ನು ಹೊಂದಿದೆ ಎಂಬುದೂ ಸಹ ಆಯುರ್ವೇದದ ಸಂಶೋಧನೆಯೇ ಈ ಅಭಿಪ್ರಾಯವನ್ನು ಆಧರಿಸಿಯೇ ಆಯುರ್ವೇದವು ದುಃಖಸಂಯೋಗವನ್ನು ವಿಕಾರವೆಂದು ಹಾಗೂ ಸುಖವನ್ನು ನಿರೋಗವೆಂದು ಹೇಳಿದೆ—'ಸುಖಸಂಜ್ಞಕ ಮಾರೋಗ್ಯಂ ವಿಕಾರೋದುಃಖಮೇವಚ.'

ರೋಗೋಪಚಾರದ ರೀತಿಗಳಲ್ಲಿಯೂ ಕೂಡ ಆಯುರ್ವೇದವು ತನ್ನದೇ ಆದ ಪ್ರಾಚೀನ ಆರ್ಷೇಯವಾದ ಸೂಕ್ಷ್ಮ ಹಾಗೂ ವ್ಯಾಪಕವಾದ ವಿಧಾನವನ್ನು ರೂಪಿಸಿಕೊಂಡಿದೆ. ಉತ್ಪನ್ನವಾದ ರೋಗನಿವಾರಣೆಯ ಯೋಜನೆಗಳನ್ನಂತೂ ಎಲ್ಲ ಚಿಕಿತ್ಸಾ ಶಾಸ್ತ್ರಗಳೂ ಮಾಡಿವೆ, ಆದರೆ ವಿಕಾರವು ಉತ್ಪನ್ನವಾಗದೇ ಇರುವಂತಹ ಯೋಜನೆ ಅಥವಾ ಉಪಾಯವನ್ನು ಆಯುರ್ವೇದವು. ಅದು ಅತಿ ಪ್ರಾಚೀನವಾದರೂ, ಎಲ್ಲ ಕಾಲಕ್ಕೂ ನೂತನವಾಗಿ, ಎಲ್ಲ ಪ್ರಾಣಿಗಳಿಗೂ ಅನುಕೂಲವಾಗಿರುವುದರಿಂದ ಅತ್ಯಂತ ಪ್ರಭಾವಶಾಲಿಯಾಗಿದೆ. ಈ ಯೋಜನೆಯ ಅಂತರ್ಯದಲ್ಲಿ 'ಆರೋಗ್ಯ ವೃತ್ತಿ'ಯ ಪ್ರವಚನ, ಆಧುನಿಕ ಚಿಕಿತ್ಸಕರಿಗೆ, ಅದರಲ್ಲೂ ನ್ಯಾಚುರೋಪತಿ ಸಂಪ್ರದಾಯದವರಿಗೆ ನಿಸ್ಸಂಶಯವಾಗಿ ಉಪಾದೇಯವಾದ ಹಾಗೂ ಮನನ ಯೋಗ್ಯವಾದ ವಿಷಯಗಳಿವೆ. ರೋಗಗಳೇ ಉಂಟಾಗದಿರುವಂತೆ ದಿನಚರ್ಯೆ, ಋತುಚರ್ಯೆ, ಸದ್ವೃತ್ತಿ ಹಾಗೂ ದೇಹ ಮತ್ತು ಮನಸ್ಸಿನ ವೇಗಗಳನ್ನು ಆದರಿಸಿ ಆಯುರ್ವೇದವು ನೀಡಿರುವ ಉಪದೇಶ, ಸ್ಥಿರಗೊಳಿಸಿರುವ ಸಿದ್ಧಾಂತಗಳನ್ನು ಯಾವುದೇ ಆದರ್ಶ ರಾಷ್ಟ್ರದ 'ಆರೋಗ್ಯ ವಾಹಕ ಯೋಜನೆ'ಗಳ ಮೂಲಭೂತ ವ್ಯಾವಹಾರಿಕ ವಿಧಾನಗಳನ್ನಾಗಿ ಮಾಡಬಹುದಾಗಿದೆ. ವಿಕಾರಗಳನ್ನು ಶಮನಮಾಡಲು ಆಯುರ್ವೇದದ ಔಷಧ ಶಾಸ್ತ್ರ

ಸ್ವಯಂಪೂರ್ಣವಾಗಿದೆ. ಔಷಧಿಗಳನ್ನು ಎರಡು ಭಾಗಗಳನ್ನಾಗಿ ವಿಂಗಡಿಸಿದ್ದಾರೆ—ಒಂದು ಸಂಶೋಧನಾತ್ಮಕ, ಇನ್ನೊಂದು ಶಮನಾತ್ಮಕ. ಶೋಧನ ವಿಭಾಗದಲ್ಲಿ ವಮನ, ವಿರೇಚನ, ಆಸ್ಥಾಪನ, ಅನುವಾಸನ, ಶಿರೋವಿರೇಚನಾತ್ಮಕ ಪಂಚಕರ್ಮದ ಭವ್ಯಸಿದ್ಧಾಂತವನ್ನು ರೂಪಿಸಿಕೊಳ್ಳಲಾಗಿದೆ. ಸ್ನೇಹನಸ್ವೇದನದ ನಂತರ ಆಚರಣೆಗೊಂಡ ಪಂಚಕರ್ಮದ ಈ ವಿಧಾನ ಎಷ್ಟು ಪ್ರಾಣಮಯವೆಂದರೆ ಆಯುರ್ವೇದದ ಅಂಗೋಪಾಂಗಗಳನ್ನು ಚೂರುಚೂರು ಮಾಡಿದ ಮೇಲೂ ಇದು ಉಸಿರಾಡುತ್ತಿರುತ್ತದೆ. ಔಷಧಿಗೆ ಸಂಬಂಧಿಸಿದ ದ್ರವ್ಯಗಳ ರಸ-ಗುಣ-ವೀರ್ಯ-ವಿಪಾಕ ಹಾಗೂ ಪ್ರಭಾವದ ವಿಷಯದಲ್ಲಿ ಆಯುರ್ವೇದದಲ್ಲಿ ಅಡಗಿರುವ ಅನುಸಂಧಾನಾತ್ಮಕವಾದ ಸಾಹಿತ್ಯ ವಿಪುಲವಾಗಿ ರಚಿತವಾಗಿದೆ. ದ್ರವ್ಯಾಂತರ್ಗತವಾದ ರಸ ಗುಣ ಮುಂತಾದವುಗಳ ವಿಸ್ತೃತವಾದ ವಿವರಣೆ ಆಯುರ್ವೇದದ ಅತ್ಯಂತ ಆಶ್ಚರ್ಯಜನಕವಾದ ಸಿದ್ಧಿಯಾಗಿದೆ. ಆ ಯುಗದಲ್ಲಿ ಸಂಜೀವಿನಿ, ವಿಶಲ್ಯಕರಿಣಿ, ಅಮೃತ ಮುಂತಾದ ಹೆಸರುಗಳಿಂದ ಪರಿಚಿತವಾದ ಔಷಧಿಗಳನ್ನು ಕಂಡುಹಿಡಿದಿದ್ದರು. ಶರೀರವನ್ನು ಸಡಿಲಗೊಳಿಸದೆಯೆ ಒಂದು ನಿರ್ದಿಷ್ಟ ಕಾಲದ ತನಕ ಕ್ಷುಧೋತ್ಪತ್ತಿಯನ್ನು ನಿರೋಧಿಸುವ ಔಷಧಿಯನ್ನು ಅಮೃತವೆಂದು ಕರೆಯಲಾಗುತ್ತಿತ್ತು—'ಕಶೇರೂಪಲಮೂಲಾನಿ ಇಕ್ಷುಮೂಲಂ ತಥಾ ವಿಷಮ್ ದೂರ್ವಾಕ್ಷೀರಘೃತೈರ್ಮಂಡಃ ಸಿದ್ಧೋಽಯಂ ಮಾಸಿಕಃ ಶರಮ್' ಒಂದು ಸಾವಿರವನೂರು ಔಷಧಿಗಳ ಸಂಶೋಧನೆಯು ಅವುಗಳ ಹೆಸರುಗಳೊಂದಿಗೆ ಋಗ್ವೇದದಲ್ಲಿ ಉಲ್ಲೇಖಿತವಾಗಿರುವುದು ಕಂಡುಬರುತ್ತದೆ–'ಶತಾಂತೇ ರಾಜನ್ ಭೀಷಜಾಃ ಸಹಸ್ರಮೂರ್ವೀ ಗಭೀರಾಸುಮತಿಸ್ತೇ ಅಸ್ತು.

ಒಂದು ಶರೀರದ ಜೀವಂತ ತತ್ವಗಳನ್ನು ಇನ್ನೊಂದು ಶರೀರದಲ್ಲಿ ಸಂಚರಿಸುವಂತೆ ಮಾಡಬಹುದಾದ ಪ್ರಕ್ರಿಯೆಯನ್ನು ಕಂಡುಹಿಡಿಯಲಾಗಿತ್ತು. ಶತಪಥ ಬ್ರಾಹ್ಮಣದಲ್ಲಿ—ಯಯಾತಿಯ ದೇಹಕ್ಕೆ ಒದಗಿದ್ದ ಮುಪ್ಪನ್ನು ಆವನ ಪುತ್ರ ಪುರುವಿನ ದೇಹದಲ್ಲಿ, ಪುರುವಿನ ಯೌವ್ವನ ಯಯಾತಿಯ ದೇಹದಲ್ಲಿ ಸಂಚರಿಸುವಂತೆ ಮಾಡಲಾಗಿದೆ. ಎಂಬ ಉಲ್ಲೇಖವಿದೆ. ಚ್ಯವನದ ಮೂಲಕ ಪುನ್ಹ ಯೌವನ ಪ್ರಾಪ್ತಿಯ ಚಿಕಿತ್ಸೆ ಸುಪ್ರಸಿದ್ಧವಾಗಿದೆ ಇದೇ ರೀತಿ ಮೃತ ದೇಹದ ಮೇಲೆ ಸಂಜೀವಿನೀ ಪ್ರಕ್ರಿಯೆಯ ಪ್ರಯೋಗ ಆಗಿ ಮೃತರನ್ನು ಬದುಕಿಸಿಕೊಳ್ಳುವಲ್ಲಿ ಸಫಲವಾಗುತ್ತಿತ್ತು.

ಕಾಯ-ಚಿಕಿತ್ಸೆಯ ಜೊತೆ ಜೊತೆಯಲ್ಲಿಯೇ ಶಲ್ಯ ಚಿಕಿತ್ಸೆಯೂ ಆ ಕಾಲದಲ್ಲಿ ವಿಕಾಸಗೊಂಡಿತು. ಸುಶ್ರುತಸಂಹಿತೆ ಈ ಸಂಪ್ರದಾಯದ ಅತ್ಯುತ್ತಮ ಗ್ರಂಥ.

ಶರೀರಶಾಸ್ತ್ರದ ಅಧ್ಯಯನ ವೈದ್ಯನಿಗೆ ಅನಿವಾರ್ಯವೆಂದು ಭಾವಿಸಲಾಗಿತ್ತು. ಶರೀರ ರಚನೆಯೊಂದಿಗೆ ಸಂಬಂಧ ಹೊಂದಿರುವ ತಲೆ, ಕರುಳು, ಗುದ, ಯಕೃತ್ತು, ಗುಲ್ಮ, ಜರಾಯು ಮುಂತಾದ ಆಂತರಿಕ ಅಂಗೋಪಾಂಗಗಳ ವರ್ಣನೆಯನ್ನು ಮಾಡಲಾಗಿದೆ. ಐತರೇಯ ಬ್ರಾಹ್ಮಣದಲ್ಲಿ ಪಶುಗಳ ಶರೀರದ ಸೂಕ್ಷ್ಮಾತಿಸೂಕ್ಷ್ಮವಾದ ಕರುಳು ಮುಂತಾದ ಅವಯವಗಳ ಯಥಾವತ್ತಾದ ವಿಭಜನೆ ಹಾಗೂ ವಿವೇಚನೆಯನ್ನು ಮಾಡುವ ಯಜ್ಞೀಯ ವಿದ್ವಾಂಸರ ಪ್ರಶಂಸೆಯನ್ನು ಮಾಡಲಾಗಿದೆ. ಕೃತಕವಾದ ಕಾಲು ಹಾಗೂ ಕಣ್ಣುಗಳನ್ನು ಜೋಡಿಸುವ ಪ್ರಕ್ರಿಯೆ ಅವರಿಗೆ ತಿಳಿದಿತ್ತು. ಪೂಷ್ಣನ ಶೀರ್ಣವಾದ ಹಲ್ಲುಗಳ ಚಿಕಿತ್ಸೆಯನ್ನು ಅಶ್ವಿಗಳು ಮಾಡಿದ್ದರು. ಶಿರಃಸಂಧಾನದ ವರ್ಣನೆ ಶತಪಥ ಬ್ರಾಹ್ಮಣದಲ್ಲಿ ದೊರೆಯುತ್ತದೆ. ಬಾಣಗಳಿಂದ ತುಂಡಾದ ಭೀಷ್ಮರ ಹೃದಯದ ಶಸ್ತ್ರೋಪಚಾರಕ್ಕಾಗಿ ಭಾರತದ ಸುಪ್ರಸಿದ್ಧ ಶಲ್ಯ ಚಿಕಿತ್ಸಕರನ್ನು ಆಮಂತ್ರಿಸಲಾಗಿತ್ತು. ನಾಸಾದಿ ಸಂಧಾನ ಕರ್ಮ ಸುಶ್ರುತಕಾಲದ ಅಪೂರ್ವ ಮೂಲ ಸಂಶೋಧನೆಯಾಗಿತ್ತು. ಪಾಶ್ಚಾತ್ಯದೇಶದ 'ಪ್ಲಾಸ್ಟಿಕ್ ಸರ್ಜರಿ' ವಾಸ್ತವವಾಗಿ ಸುಶ್ರುತನಿಂದ ಹೇಳಲ್ಪಟ್ಟ ಶಲ್ಯ ಚಿಕಿತ್ಸೆಯಲ್ಲಿನ ಸಂಶೋಧನೆಯ ಒಂದು ಅಂಗ ಮಾತ್ರವಾಗಿದೆ. ಆಯುರ್ವೇದದ ವಿಕಾಸಗೊಂಡ ಈ ಅಂಗವನ್ನು ಅದರ ಮೂಲ ಸ್ವರೂಪದಲ್ಲಿ ಉಪಸ್ಥಿತಗೊಳಿಸುವುದು, ಅದರಲ್ಲೂ ಈ ಯುಗದಲ್ಲಿ, ಅತ್ಯಂತ ಆವಶ್ಯಕವಾಗಿದೆ.

ಚಿಕಿತ್ಸಕ ಋಷಿಗಳು ಆಗಾಗ್ಗೆ ಒಟ್ಟುಗೂಡಿ ತಮ್ಮತಮ್ಮ ಸಂಶೋಧನಾತ್ಮಕ ಪ್ರಬಂಧಗಳನ್ನು ಓದುತ್ತಿದ್ದರು. ವಿಚಾರಗಳ ಪರಸ್ಪರ ವಿನಿಮಯದಿಂದ ಸಿದ್ಧಾಂತಗಳನ್ನು ಸ್ಥಿರಪಡಿಸಿ ಅನಂತರ ಅದರ ಬಗ್ಗೆ ಉತ್ತಮೋತ್ತಮ ಶಾಸ್ತ್ರಗ್ರಂಥವನ್ನು ಬರೆಯುವಂತೆ ಹೇಳಿ ಒಬ್ಬ ಯೋಗ್ಯ ವಿದ್ವಾಂಸನಿಗೆ ಅದನ್ನು ವಹಿಸಿಕೊಡುತ್ತಿದ್ದರು. 'ಸ್ವಂ ಸ್ವಂ ತಂತ್ರಂ ತತಸ್ತೇಽಪಿ ಚಕ್ರುಸ್ತಾನಿ ಕೃತಾನಿ ಚ| ಗುರೂನ್ ಸಂಶ್ರಾವಯಾಮಾಸುಃ ಸರ್ಷಿಸಂಘಾನ್ ಸುಮೇಧಸಃ—ತೈಃ ಪ್ರಶಸ್ತಾನಿ ತಾನ್ಯೇಷಾಂ ಪ್ರತಿಷ್ಠಾಂ ಭುವಿಲೇಭಿರೇ'. ಅಂದರೆ ಅಗ್ನಿವೇಶ ಹಾರೀತ ಮೊದಲಾದ ಶಿಷ್ಯರಿಗೆ ಆಯುರ್ವೇದ ತಂತ್ರಗಳನ್ನು ತಿಳಿಸಲಾಯಿತು. ಈ ಶಿಷ್ಯರು ಮತ್ತೆ ತಮ್ಮತಮ್ಮ ತಂತ್ರಗಳ ರಚನೆಗಳನ್ನು ಉತ್ತಮ ಮೇಧಾ ಶಕ್ತಿಯಿಂದ ಸಂಪನ್ನರಾದ ಋಷಿಗಳು ಮತ್ತು ಗುರುಮಹಾನುಭಾವರ ಸಮಕ್ಷಮದಲ್ಲಿ ಓದಿ ಹೇಳಿದರು. ಇವುಗಳಲ್ಲಿ ಅನುಮೋದಿಸಲ್ಪಟ್ಟ ಸ್ವೀಕರಿಸಿದ ಈ ತಂತ್ರಗಳು ವಿಶ್ವದಲ್ಲಿ ಮನ್ನಣೆ ಪಡೆದವು. ಈ ಭಾರತೀಯ ಗುರು ಶಿಷ್ಯ ಪರಂಪರೆ ಎಷ್ಟೊಂದು ಸುಸಂಸ್ಕೃತ ಹಾಗೂ ಪರಿಷ್ಕೃತವಾಗಿರಬೇಕು. ಆ ಯುಗದಲ್ಲಿ ವ್ಯರ್ಥವಾದ

ಅಥವಾ ಅನಾವಶ್ಯಕವಾದ ಪ್ರಬಂಧಗಳನ್ನು ಬರೆಯುತ್ತಿರಲಿಲ್ಲ. ಆಧುನಿಕ ಕಾಲವಂತೂ ಬಿಳಿಕಾಗದವನ್ನು ಮಸಿಯಿಂದ ಕಪ್ಪುಮಾಡುವ ಯುಗವಾಗಿ ಬಿಟ್ಟದೆ.

ಅಲೋಪಥಿಯು ಶರೀರದಲ್ಲಿರುವ ಕೀಟಾಣುಗಳ ಸಂಹಾರದ ಮೂಲಕ ರೋಗವನ್ನು ತಡೆಯುತ್ತದೆ. ಕೀಟಾಣುಗಳಲ್ಲಿರುವ ಶಕ್ತಿಯ ಪ್ರಮಾಣಕ್ಕನುಸಾರವಾಗಿ ಅದಕ್ಕಿಂತ ಹೆಚ್ಚಿನ ಬಲಶಾಲಿಯಾದ ಪ್ರಯೋಗದ ಮೂಲಕವೇ ರೋಗವನ್ನು ನಿವಾರಣೆ ಮಾಡಲು ಸಾಧ್ಯ. ಆದುದರಿಂದ ಈ ರೀತಿಯ ಚಿಕಿತ್ಸೆಯಿಂದ ಆ ರೋಗ (ಬಹುಮಟ್ಟಿಗೆ ರುಗ್ಣದ ಜೊತೆಯಲ್ಲಿಯೋ)ವೇನೋ ವಾಸಿಯಾಗುತ್ತದೆ. ಆದರೆ ಇತರ ವಿಕಾರಗಳನ್ನು ಉಂಟುಮಾಡುತ್ತದೆ. ಒಂದು ವಿಕಾರವನ್ನು ಶಮನಗೊಳಿಸಿ ಮತ್ತೊಂದು ವಿಕಾರವನ್ನು ಉತ್ಪತ್ತಿಮಾಡುವ ಪ್ರಯೋಗ ಎಂದಿಗೂ ಶುದ್ಧವಲ್ಲ—'ಪ್ರಯೋಗಃ ಶಮಯೇತ್ ವ್ಯಾಧಿಮೇಕಂ ಯೋಽನ್ಯಮುದೀರಯೇತ್—ನಾಽಸೌವಿಶುದ್ಧಃ, ಶುದ್ಧಸ್ತು ಶಮಯೇತ್ ಯೋ ನಕೋಪಯೇತ್'. ಅಲೋಪಥಿ ಸಂಪ್ರದಾಯದ ನೊಬೆಲ್ ಬಹುಮಾನವನ್ನು ಪಡೆದ ಪ್ರಸಿದ್ಧ ಶಲ್ಯ ಚಿಕಿತ್ಸಕ ಡಾ| ಕೆರೀಲ್‌ನ ಈ ಹೇಳಿಕೆ—'ನಾವು ವಾಸ್ತವವಾಗಿ ರೋಗದ ಮೇಲೆ ವಿಜಯವನ್ನು ಸ್ಥಾಪಿಸಿದೆವು, ಆದರೆ ನಾಡಿ ಸಮೂಹದ ಶಕ್ತಿಯನ್ನು ನಾಶಮಾಡುವ ಧಾತು ಕ್ಷೀಣತಾಜನ್ಯ ವಿಕಾರಗಳಿಂದ ನಾವು ಸೋತುಹೋದೆವು'—ಆಯುರ್ವೇದದ ಮೇಲಿನ ಸಿದ್ಧಾಂತವನ್ನು ಸಮರ್ಥಿಸುತ್ತದೆ. ತನ್ನ ತತ್ಕಾಲದ ಪ್ರಭಾವದ ಕಾರಣದಿಂದಾಗಿ ಸಮಸ್ತ ಲೋಕವನ್ನು ಸಮ್ಮೋಹನಗೊಳಿಸುತ್ತಿರುವ ಈ ಚಿಕಿತ್ಸಾಪದ್ಧತಿ ಮೊದಲಿಂದ ಕೊನೆಯವರೆಗೆ ವಿಷಪ್ರಧಾನವಾಗಿದೆ. ವಿಷವನ್ನು ಆಯುರ್ವೇದವು 'ಆಶುಕಾರಿ' ದ್ರವ್ಯವೆಂದು ಭಾವಿಸಿದೆ, ಆದುದರಿಂದ ವಿಷಪ್ರಧಾನವಾದ ಔಷಧಿಯು ತನ್ನ ಶೀಘ್ರ ಪ್ರಭಾವವನ್ನು ತೋರಿಸುತ್ತದೆಂಬುದರ ಆಶ್ಚರ್ಯಪಡಬೇಕಾದುದಿಲ್ಲ. ಆಯುರ್ವೇದಕ್ಕೆ ವಿಕಾರದ ಆಶು–ನಿವೃತ್ತಿ (ಶೀಘ್ರ ನಿವಾರಣೆ), ವ್ಯಾಧಿಯ ಒಂದು ನಿರ್ದಿಷ್ಟ ಅವಸ್ಥೆಯಲ್ಲಿ ಮಾತ್ರ ಇಷ್ಟವಾಗಿದೆ; ಇಲ್ಲದಿದ್ದರೆ ವಿಕಾರದ 'ಜಲೌಘವತ್' ಪುನರಾವೃತ್ತಿಯೇ ಆಯುರ್ವೇದಕ್ಕೆ ಸಮ್ಮತವಾದುದು 'ಕುರ್ಯಾನ್ನ ತೇಷು ತ್ವರಯಾ ದೇಹಾಗ್ನಿಬಲವಿದ್ ಕ್ರಿಯಾಮ್'–ಇದು ಆಯುರ್ವೇದದ ಚಿಕಿತ್ಸಾಸೂತ್ರ. ಈ ಸಿದ್ಧಾಂತಾನುಸಾರವಾಗಿಯೇ ಚಿಕಿತ್ಸೆಯನ್ನು ಕಲ್ಯಾಣಮಯಿಯನ್ನಾಗಿ ಮಾಡಲು ಸಾಧ್ಯವಾಗುವುದು. ವಿಷ ವಿಕಾರವನು ತಾತ್ಕಾಲಿಕವಾಗಿ ಶಮನ ಮಾಡುತ್ತದೆ, ಆದರೆ ವಿಷಪ್ರಧಾನವಾದ ಔಷಧಿಗಳನ್ನು ಸಮಾಜ ಅಥವಾ ರಾಷ್ಟ್ರದ ಚಿಕಿತ್ಸಾ ಯೋಜನೆಯ ಅಂಗವನ್ನಾಗಿ ಎಂದಿಗೂ ಮಾಡಲಾಗುವುದಿಲ್ಲ.

ಇವುಗಳ ಪರಿಣಾಮಗಳು ಬರಲಿರುವ ಯುಗಗಳಲ್ಲಿ ಕಾಣತೊಡಗುತ್ತವೆ. ಮನುಷ್ಯ ಉಪೇಕ್ಷಿತ ಜೀವಿ 'ಪಶ್ಯನ್ನಪಿನ ಪಶ್ಯತಿ'. ಮನಸ್ಸಿನ ಈ ಉಪೇಕ್ಷೆಗೆ ಕಾರಣ? ಈ ಉಪೇಕ್ಷಾರೂಪಿ ಮಾನಸ ವಿಚಾರದ ಸಂಶೋಧನೆಯನ್ನು ಮೇಲೆ ಹೇಳಿರುವ ಡಾಕ್ಟರಂಥ ಒಳ್ಳೆಯ ಸಹೃದಯ ಚಿಕಿತ್ಸಕರು ಮಾಡಿದ್ದಾರೆ. ಅನಂತರ ಅಲೋಪಥಿ 'ವಿಕಾಸ ಮತ'ವನ್ನು ಅನುಸರಿಸುತ್ತದೆ. ಅದಕ್ಕನುಸಾರವಾಗಿ, ಅದರ ಚಿಕಿತ್ಸಾ-ಶಾಸ್ತ್ರ-ಗತಸಿದ್ಧಾಂತ-ಉತ್ತರೋತ್ತರವಾಗಿ ಪರಿವರ್ತನೆ ಹೊಂದುತ್ತಲೇ ಇರುತ್ತದೆ. ಇಂದು ಉತ್ತಮ ಎಂದು ಭಾವಿಸಲಾದ ಪ್ರಯೋಗ, ಅದು ಅಪೂರ್ಣವೆಂದು ಸಿದ್ಧವಾದಮೇಲೆ, ಇನ್ನೊಂದು ಪ್ರಯೋಗದ ಆವಿಷ್ಕಾರವಾಯಿತು ಮಾನವ ಜೀವನ ಅದರ ಆ ಪ್ರಯೋಗಗಳ ಪರೀಕ್ಷೆಯ ಒಂದು ಕಾರುಣಿಕ ಕ್ಷೇತ್ರವಾಗಿದೆ. ಕಳೆದ ಸಹಸ್ರಾರು ವರ್ಷಗಳಿಂದ ಭಯಂಕರವಾದ ತೊಂದರೆಗಳನ್ನು ಎದುರಿಸುತ್ತಿದ್ದರೂ ಆಯುರ್ವೇದವು ಹಿಂದಿನಂತೆಯೇ ತನ್ನ ಮಂಗಲಮಯವಾದ ಬೆಳಕಿನ ಕಿರಣಗಳನ್ನು ಪ್ರಸಾರ ಮಾಡುತ್ತಲೇ ಇದೆ. ಏತಕ್ಕೆಂದರೆ ಇದರ ಸಿದ್ಧಾಂತಗಳು ನಿರ್ಭ್ರಾಂತ ಹಾಗೂ ಅಪರಿವರ್ತನವಾಗಿವೆ.

ಇಲ್ಲಿ ಕೊಟ್ಟಿರುವ ಆಯುರ್ವೇದದ ರೂಪರೇಖೆಯಿದೆ, ಅದು ಸಂಕ್ಷಿಪ್ತಾತಿ ಸಂಕ್ಷಿಪ್ತವಾಗಿದೆ. ಆಯುರ್ವೇದದ ಸಮರ್ಥ ವಿದ್ವಾಂಸನೆನಿಸಿದ ವಿದ್ಯಾರ್ಥಿ, ತನ್ನ ಪೂರ್ವಿಕರಾದ ಋಷಿಗಳಿಂದ ಪ್ರಾಣಿಮಾತ್ರದ ಕಲ್ಯಾಣಾರ್ಥವಾಗಿ ಸೃಷ್ಟಿಯಾದ ಈ ಅಮೃತಮಯವಾದ ಶಾಸ್ತ್ರ ಪುನಃಪುನಃ ಅನುಶೀಲನೆಯ ಮೂಲಕ ಅದರ ಅರ್ಥ-ಸಿದ್ಧಾಂತಗಳ ರಹಸ್ಯೋದ್ಘಾಟನೆಯ ಮೂಲಕ, ಔಷಧಿಗಳ ಸಂತತವಾದ ಅನುಸಂಧಾನಗಳ ಮೂಲಕ, ಆಧುನಿಕ ಅವೈಜ್ಞಾನಿಕ ಚಿಕಿತ್ಸಾ ಸಿದ್ಧಾಂತಗಳ ಬಲಿಯಲ್ಲಿ ಸಿಕ್ಕಿರುವ ಅಕಾಲಜೀರ್ಣತೆ ಹಾಗೂ ಮುಪ್ಪನ್ನು ಪಡೆಯುತ್ತಿರುವ ಪ್ರಪಂಚದ ಪ್ರಾಣಿಮಾತ್ರದ ಆರೋಗ್ಯರಕ್ಷಣೆಗಾಗಿ ಟೊಂಕ ಕಟ್ಟಿನಿಲ್ಲಲಿ.

ವಾ. ಬಿ. ಸಂ. ಚಂದ್ರಯ್ಯ

ಬಹು ಜನ್ಮದ ಪುಣ್ಯ ಕೊಟ್ಟು ಈ ಮಾನವ ಜನ್ಮದಲ್ಲಿ ಹುಟ್ಟಿ ಬಂದಿದ್ದೇವೆ. ಜ್ಞಾನ ಸುಜ್ಞಾನಗಳನ್ನು ಪಡೆದುಕೊಂಡು ಬಂದಿದ್ದೇವೆ. ಕೋಟ್ಯಾನುಕೋಟಿ ಜೀವನಗಳಲ್ಲಿ ನಾವು ಮಾಡಿದ ಹಿಂಸೆ, ಅತ್ಯಾಚಾರಗಳನ್ನು ಈ ಉಚ್ಚ ಮಾನವ ಜನ್ಮದಲ್ಲಿಯಾದರೂ ಬಿಟ್ಟುಕೊಟ್ಟು ಅತಿಮಾನವರಾಗಲು ಪ್ರಯತ್ನಿಸೋಣ.

—ಪರಮಹಂಸ

ಜೀವಚೈತನ್ಯ ಶೋಷಕಗಳು

ಪ್ರಪಂಚದಲ್ಲಿ ಕೋಟ್ಯಂತರ ಮಂದಿ ತಾವು ಕಷ್ಟಪಟ್ಟು ಸಂಪಾದಿಸಿದ ಆಹಾರದಲ್ಲಿ ಬಹುಭಾಗವನ್ನೂ ತಮ್ಮ ಜೀವಾಧಾರವಾದ ರಕ್ತವನ್ನೂ ತಮ್ಮ ಹೊಟ್ಟೆಯಲ್ಲಿ ಅತಿಕ್ರಮಿಗಳಾಗಿರುವ ಹುಳುಗಳಿಂದಾಗಿ ಕಳೆದುಕೊಳ್ಳುತ್ತಾರೆ. ಸಾಮಾನ್ಯವಾಗಿ ಸಣ್ಣ ಜಂತುಗಳಾಗಿಯೇ ಇರುವ ಈ ಹುಳುಗಳು ಮನುಷ್ಯರಲ್ಲಿ ಎಷ್ಟುಮಟ್ಟಿಗೆ ಜಡಜಾಪತ್ತು ನೋವುಗಳನ್ನು ಉಂಟುಮಾಡುತ್ತವೆಂಬುದು ಆಶ್ಚರ್ಯಕರ ವಿಷಯ. ಪ್ರಧಾನವಾಗಿ ಇವುಗಳ ಹಾವಳಿಗೆ ಈಡಾಗುವ ವ್ಯಕ್ತಿಗಳೆಂದರೆ ಮಕ್ಕಳು–ಅನೇಕ ವೇಳೆ ಬಡ ಹಾಗೂ ಹೊಟ್ಟೆಗಿಲ್ಲದ ಅವಿದ್ಯಾವಂತ ಸಂಸಾರಗಳ ಮಕ್ಕಳು. ಕ್ಷಿಪ್ರಸಾಂಕ್ರಾಮಿಕಗಳಾದ ಈ ಹುಳುಗಳು ವ್ಯಕ್ತಿಯಿಂದ ವ್ಯಕ್ತಿಗೆ ಹರಡುತ್ತ ಇಡೀ ಸಂಸಾರದಲ್ಲಿ, ಇಡೀ ಸಮಾಜದಲ್ಲಿ, ಕೆಲವು ವೇಳೆ ಒಂದು ರಾಷ್ಟ್ರದ, ಅಷ್ಟೇಕೆ, ಒಂದು ಖಂಡದ ವ್ಯಾಪಕಭಾಗಗಳಲ್ಲಿ ಕಂಡುಬರುತ್ತವೆ. ಆದರೆ ಈ ಹುಳುಗಳ ಹಾವಳಿ ಭಾರತದ ಗ್ರಾಮಾಂತರ ಪ್ರದೇಶಗಳಲ್ಲಿರುವಷ್ಟು ಬಹುಶಃ ಇನ್ನು ಯಾವ ದೇಶದಲ್ಲೂ ಇಲ್ಲ.

ಇಂಥ ಹುಳುಗಳಲ್ಲಿ ಮನುಷ್ಯನನ್ನು ಕಾಡುವಂಥವು ಮುಖ್ಯವಾಗಿ ನಾಲ್ಕು ಬಗೆಯವು. ಇವುಗಳಲ್ಲಿ ಎರಡು–ಜಂತುಹುಳು ಮತ್ತು ಕೊಕ್ಕೆಹುಳು. ಇವು ಕೆಲವು ಸಲ ಪ್ರಾಣಾಂತಕವಾಗಿಯೂ ಇರಬಹುದು. ಮೂರನೆಯದು ಸೂಜಿಹುಳು. ಸುಮ್ಮನೆ ತೀಟೆ ತೊಂದರೆಗಳನ್ನುಂಟುಮಾಡುವುದು. ನಾಲ್ಕನೆಯದು ಚಾಟಿಹುಳು. ವ್ಯಕ್ತಿಯ ಲವಲವಿಕೆಯನ್ನು ನಾಶಮಾಡುವಂಥದು. ಕೆಲವು ವೇಳೆ ಒಂದೇ ವ್ಯಕ್ತಿಯಲ್ಲಿ ಈ ಹುಳುಗಳ ಪೈಕಿ ಎರಡೋ ಮೂರೋ ಬಗೆಯ ಹುಳುಗಳು ಇರಬಹುದು. ಏಕೆಂದರೆ ಒಂದು ಬಗೆಯ ಹುಳು ವ್ಯಕ್ತಿಯನ್ನು ಆಕ್ರಮಣಮಾಡಿ ಅವನಲ್ಲಿ ನೆಲಸುವ ಅನುಕೂಲ ಸ್ಥಿತಿ ಇದೆ ಎಂದುದಾದರೆ ಅದೇ ಸ್ಥಿತಿ ಇನ್ನೊಂದು ತೆರನಾದ ಹುಳುವಿಗೂ ಅನುಕೂಲವಾದಂಥದ್ದೇ.

ಮನುಷ್ಯರಲ್ಲಿ ಅತಿ ಸಾಮಾನ್ಯವಾಗಿ ಕಂಡುಬರುವ ಹುಳುವೆಂದರೆ ಜಂತುಹುಳು. ಪ್ರಸಕ್ತಕಾಲದಲ್ಲಿ ಜಂತುಹುಳುಗಳಿರುವವರು ಪ್ರಪಂಚದಲ್ಲಿ ಸುಮಾರು ೮೦ ಕೋಟಿ ಮಂದಿ ಎಂದು ಅಂದಾಜಿದೆ. ಜಂತುಹುಳುಗಳು ನಿಜವಾಗಿ ಅಪಾಯಕಾರಿ ಹುಳುಗಳು. ಏಕೆಂದರೆ ಅವು ಕರುಳಿನಿಂದ ಬೇರೆ ಅಂಗಗಳಿಗೂ

೧೯೭೮ರ ಜೂನ್ ತಿಂಗಳ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾಗಿರುವ 'ಪ್ಯಾರಾಸೈಟ್ಸ್ ಆಫ್ ವೈಟಾಲಿಟಿ' ಎಂಬ ಲೇಖನದ ಅನುವಾದ.

ವಲಸೆ ಹೋಗಬಲ್ಲವು ಮತ್ತು ಅಂಗಗಳನ್ನು ಛಿದ್ರಮಾಡಬಲ್ಲವು ; ಕಿರಿ ರಕ್ತನಾಳಗಳನ್ನು ಪ್ರವೇಶಿಸಿ ಛಿದ್ರಿಸಿ ಅಗಾಧ ರಕ್ತಸ್ರಾವವನ್ನು ಉಂಟುಮಾಡಬಲ್ಲವು. ಇದಕ್ಕೆ ಒಂದು ನಿದರ್ಶನವನ್ನು ಉಲ್ಲೇಖಿಸಬಹುದು.

ಮುಂಬಯಿಯಲ್ಲಿ ಒಬ್ಬ ಐದು ವರ್ಷದ ಹುಡುಗ ಆಗಾಗ ವಮನ ಇಲ್ಲವೆ ಭೇದಿಗಳಿಂದ ನರಳುತ್ತಿದ್ದ. ವಯಸ್ಸಿಗೆ ತಕ್ಕ ತೂಕ ಬೆಳವಣಿಗೆಗಳು ಇರದಿದ್ದರೂ ಹೊಟ್ಟೆ ಮಾತ್ರ ಉಬ್ಬಿಕೊಂಡು ದೊಡ್ಡದಾಗಿತ್ತು. ಹುಡುಗ ಬಹುಬೇಗ ಬಳಲುತ್ತಿದ್ದ. ಒಂದೊಂದು ಸಲ ಅತಿಯಾಗಿ ಜ್ವರವೂ ಬರುತ್ತಿತ್ತು. ಒಂದು ದಿನ ವಿಪರೀತ ವಮನ ಮಾಡುತ್ತಿದ್ದುದರಿಂದ ಅವನನ್ನು ಆಸ್ಪತ್ರೆಗೆ ಸೇರಿಸಲಾಯಿತು. ಪರೀಕ್ಷೆಗಳನ್ನು ಮಾಡಿದಾಗ ಅವನ ಹೊಟ್ಟೆಯಲ್ಲಿ ಜಂತುಹುಳುಗಳು ಬಹುಸಂಖ್ಯೆಯಲ್ಲಿ ಇರಬೇಕೆಂದು ಎನ್ನಿಸಿತು. ಔಷಧಗಳನ್ನು ಕೊಟ್ಟು ಅವನ್ನು ಭೇದಿಮುಖಾಂತರ ಹೊರದೂಡುವುದಕ್ಕೆ ನೋಡಿದರು. ನಾಲ್ಕು ದಿನಗಳ ಔಷಧ ಪ್ರಯೋಗದಿಂದ ಸ್ವಲ್ಪ ಫಲ ಕಂಡುಬರುವುದಕ್ಕೆ ಪ್ರಾರಂಭವಾಯಿತು. ಆದರೆ ಐದನೆ ದಿನ ಆ ಬಾಲಕನಲ್ಲಿ ಪೆರಿಟೊನೈಟಿಸ್ (ಉದರದ ಅಂಗಗಳನ್ನು ಕವಿದಿರುವ ಪೊರೆಯ ಉರಿಊತ) ಉಂಟಾಯಿತು. ಇದಕ್ಕಾಗಿ ತುರ್ತು ಶಸ್ತ್ರಕ್ರಿಯೆಯನ್ನು ಮಾಡಬೇಕು. ಆದರೆ ಅದನ್ನು ಪ್ರಾರಂಭಿಸುವುದಕ್ಕೆ ಮುಂಚೆಯೇ ಹುಡುಗ ಮೃತನಾದ. ಶವಪರೀಕ್ಷೆಯಲ್ಲಿ ಹೊಟ್ಟೆಯನ್ನು ಕೊಯ್ದು ನೋಡಿದಾಗ ಅಲ್ಲಿ ೧೬೪ ಜಂತುಹುಳುಗಳು ಇದ್ದುದು ಪತ್ತೆ ಆಯಿತು. ಒಂದೊಂದೂ ಸುಮಾರು ೧೮ ಸೆಂ. ಮೀ. ಉದ್ದ. ಅವು ಹುಡುಗನ ಅಪೆಂಡಿಕ್ಸ್ ಎಂಬ ಅಂಗವನ್ನು ಛಿದ್ರಮಾಡಿದ್ದುದೂ ಅದೇ ತೀವ್ರ ವಿಷಮತೆಗೆ ಕಾರಣವಾಗಿ ಹುಡುಗ ಬಲಿಯಾದದ್ದೂ ತಿಳಿಯಿತು.

ಆದರೆ ಬಹುವಾಗಿ ರೋಗಿಗಳಿಗೆ ಜಂತುಹುಳು ಮಾರಕವಾಗುವುದಿಲ್ಲ. ಹೊಟ್ಟೆನೋವು, ನಿಶ್ಶಕ್ತಿ, ತಲೆನೋವು, ಚರ್ಮದಲ್ಲಿ ಕಡಿತ, ಗಂಧೆಗಳು, ಅಲ್ಪ ಜ್ವರ, ಕಾಲಪ್ರವೃತ್ತಿ ಸರಿಯಾಗಿ ಆಗದೆ ಮಲಬದ್ಧತೆ ಇಲ್ಲವೇ ಭೇದಿ ಆಗುವುದು ಈ ಮುಂತಾದ ತಕರಾರುಗಳು ಕಾಣಬರುವುದೇ ಸಾಮಾನ್ಯ. ಹುಳುಗಳು ದೇಹದೊಳಗೆ ಸೇರುವಾಗ ಅಗಾಧ ಪ್ರಮಾಣದಲ್ಲಿದ್ದರೆ ನ್ಯುಮೋನಿಯ ಬರಬಹುದು. ಹುಳುಗಳು ಆತಿಥೇಯರು ಸೇವಿಸಿದ ಆಹಾರದ ಪ್ರೋಟೀನುಗಳನ್ನು ಕಬಳಿಸಿಬಿಡುವುದರಿಂದ ಅವರ ಆರೋಗ್ಯ ಶಕ್ತಿಸಾಮರ್ಥ್ಯಗಳಿಗೆ ಏಟುಕೊಡುತ್ತವೆ. ಪ್ರಪಂಚದಾದ್ಯಂತ ಆಹಾರದ ಮೂಲಕ ಮನುಷ್ಯರಿಗೆ ನ್ಯಾಯವಾಗಿ ಸೇರಬೇಕಾಗಿರುವ ಪ್ರೋಟೀನಿನಲ್ಲಿ ಸುಮಾರು ೧೦ ಲಕ್ಷ ಕೆ.ಜಿ.ಗಳಷ್ಟು ಈ

ಹುಳುಗಳೇ ಹೀರಿಕೊಂಡುಬಿಡುತ್ತವೆ. ಪ್ರೋಟೀನಿನ ಇಂಥ ನಷ್ಟವನ್ನು ಭರಿಸಲಾರದ ಬೆಳೆಯುವ ಮಕ್ಕಳೇ ಈ ಹುಳುಗಳಿಗೆ ಪ್ರಧಾನ ಬಲಿಯಾಗಿರುವುದು ಗಮನೀಯ.

ಆರ್ದ್ರವಾಯಿಯೂ ಬೆಚ್ಚಗೂ ಇರುವ ಅನಾರೋಗ್ಯ ಪ್ರದೇಶಗಳಲ್ಲಿ ಜಂತುಹುಳುಗಳು ಪ್ರವರ್ಧಿಸುತ್ತವೆ. ದೇಹದೊಳಗೆ ಇರುವ ಹುಳುವಿನ ಮೊಟ್ಟೆಗಳು ಮಲದ ಮೂಲಕ ವಿಸರ್ಜಿತವಾಗುತ್ತವೆ. ತತ್ತಿಭರಿತವಾದ ಮಲದ ಸ್ಪರ್ಶದಿಂದ ಬೇರೆಯವರಿಗೆ ರೋಗ ಅಂಟುತ್ತದೆ. ಮಲವನ್ನು ಗೊಬ್ಬರವಾಗಿ ಉಪಯೋಗಿಸಿರುವ ಕೃಷಿಪ್ರದೇಶಗಳಲ್ಲಿ ಮತ್ತು ವಿಸರ್ಜನೆ ಆದ ಕಡೆಯೇ ಮಲ ಒಣಗಿಹೋಗಿರುವ ಸ್ಥಳಗಳಲ್ಲಿ ಬೇರೆಯುವರು, ಅವರಲ್ಲೂ ಮಕ್ಕಳು ಓಡಾಡುವಾಗ ಮತ್ತು ಕೆಲಸಮಾಡುತ್ತಿರುವಾಗ ಕೈಗಳಿಗೆ ಸೋಂಕುಹತ್ತಿ, ಚೆನ್ನಾಗಿ ತೊಳೆಯದ ಅದೇ ಕೈಗಳಿಂದ ಊಟಮಾಡಿದರೆ ಹುಳುಗಳು ಇವರ ದೇಹದ ಒಳಹೊಗುವ ಅವಕಾಶ ಸಿಕ್ಕುತ್ತದೆ. ಹೀಗಾಗಿ ಸಮಾಜದಲ್ಲಿ ಇದು ಒಂದು ವಿಷವರ್ತುಲದಂಥ ಪಿಡುಗಾಗಿದೆ.

ಜಂತುಹುಳುವಿನ ಸೋಂಕಿನಂತೆಯೇ ಕೊಕ್ಕೆಹುಳುವಿನ ಸೋಂಕು ಬಲು ಸುಲಭವಾಗಿ ಒಬ್ಬರಿಂದ ಒಬ್ಬರಿಗೆ ಅಂಟುತ್ತದೆ. ಸೇವಿಸಿದ ಆಹಾರದ ಪ್ರೋಟೀನ್ ಅನ್ನು ಮಾತ್ರ ಜಂತುಹುಳು ಲಪಟಾಯಿಸಿದರೆ ಕೊಕ್ಕೆಹುಳು ವ್ಯಕ್ತಿಯ ರಕ್ತವನ್ನೇ ಹೀರುತ್ತದೆ. ಪ್ರಪಂಚದಲ್ಲೆಲ್ಲ ಕೊಕ್ಕೆಹುಳುಗಳಿಂದ ಹೀಗೆ ಹೀರಲ್ಪಡುವ ಮನುಷ್ಯರಕ್ತ ದಿನಂಪ್ರತಿ ೭೦ ಲಕ್ಷ ಲೀಟರುಗಳಷ್ಟು ಎಂದು ಅಂದಾಜಿದೆ.

೧೬ ವರ್ಷ ವಯಸ್ಸಿನ ಪರಶುರಾಮ ಪಾಟೀಲ್ ಇತ್ತೀಚೆಗೆ ಕೊಕ್ಕೆಹುಳುವಿನ ಹಾವಳಿಗೆ ತುತ್ತಾದ ಒಬ್ಬ ವ್ಯಕ್ತಿ. ಸದಾ ಬಳಲಿಯೇ ಇರುತ್ತಿದ್ದ. ಇವ ಪಾಠಗಳ ಹೊರೆಯನ್ನು ತಡೆಯಲಾರದೆ ಶಾಲೆಯಲ್ಲಿ ನಿದ್ದೆಮಾಡಿಬಿಡುತ್ತಿದ್ದ. ಅವನ ಮುಖ ಬಿಳಿಚಿಕೊಂಡಿತ್ತಲ್ಲದೆ ಆಗಾಗ ದಮ್ಮಿಸಿಕೊಳ್ಳುತ್ತಿತ್ತು. ಪಾದಗಳೂ ಊದಿರುತ್ತಿದ್ದವು. ಕೃಷಿಕೆಲಸದಲ್ಲಿ ತೊಡಗಿದಾಗ ಒಂದು ದಿನ ಅವನು ಮೂರ್ಛೆಹೋದ. ಅವನನ್ನು ಮುಂಬಯಿಯಲ್ಲಿ ಆಸ್ಪತ್ರೆಗೆ ಕೊಂಡು ತೋರಿಸಿದರು. ಅವನಿಗೆ ಅಧಿಕವಾದ ಕೊಕ್ಕೆಹುಳುಗಳ ಸೋಂಕಿನಿಂದ ಈ ರೋಗ ಉಂಟಾಗಿರುವುದು ತಿಳಿಯಿತು. ವಿಷಯ ತಾರುಣ್ಯದಲ್ಲಿ ತಿಳಿದುಬಂದದ್ದರಿಂದ ಮತ್ತು ಕೂಡಲೇ ಚಿಕಿತ್ಸೆಯನ್ನು ಮಾಡಿದ್ದರಿಂದ ಒಂದು ತಿಂಗಳಲ್ಲಿ ಪರಶುರಾಮ ಚೆನ್ನಾಗಿ ಗುಣಹೊಂದಿ ಶಾಲೆಗೆ ಹಾಜರಾದ ಮತ್ತು ತನ್ನ ಕೃಷಿ ಕೆಲಸಗಳಿಗೂ ಗಮನ ಕೊಡಲು ಸಮರ್ಥನಾದ.

ಪ್ರಪಂಚದಲ್ಲೆಲ್ಲ ಸುಮಾರು ೭೦ ಕೋಟಿ ಜನರಲ್ಲಿ ಕೊಕ್ಕೆಹುಳುಗಳು ಇರುವುವೆಂದೂ ಸುಮಾರು ೨೦ ಕೋಟಿ ರೋಗಿಗಳು ಭಾರತದಲ್ಲೆ ಇರುವರೆಂದೂ ಇವರಲ್ಲಿ ಬಹುಪಾಲು ಮಕ್ಕಳೇ ಎಂದೂ ತಿಳಿದಿದೆ. ಕೊಕ್ಕೆಹುಳುಗಳು ಹೆಚ್ಚಾಗಿಯೇ ಇರುವ ಅಂದರೆ ಸುಮಾರು ೧೦೦ ಹುಳುಗಳು—ಒಂದು ಮಗು ಅದರಿಂದಾಗಿ ೩ ತಿಂಗಳುಗಳ ಅವಧಿಯಲ್ಲಿ ಸುಮಾರು ಒಂದೂವರೆ ಲೀಟರ್‌ಗಳಷ್ಟು ರಕ್ತನಷ್ಟಕ್ಕೆ ಒಳಗಾಗುತ್ತದೆ. ಬೆಳೆಯುತ್ತಿರುವ ಸಣ್ಣ ಮಗುವಿನ ವಿಷಯದಲ್ಲಿ ಇದು ಅಗಾಧ ನಷ್ಟವೇ ಸರಿ. ಇಂಥ ಅಧಿಕ ಸೋಂಕಿನಿಂದ ರಕ್ತಕೊರತೆ, ರಕ್ತಸಂಚಯನಕ್ಕೆ ಅಗತ್ಯವಾದ ಕಬ್ಬಿಣದ ನಷ್ಟ, ಇವು ಕಾಣಬರುತ್ತವೆ. ಚಿಕಿತ್ಸಿಸದೆ ಹಾಗೆಯೇ ಬಿಟ್ಟರೆ ಇವು ಮಾರಕಸ್ಥಿತಿಗಳೇ ಸರಿ.

ಜಂತುಹುಳುಗಳಂತೆಯೇ ಕೊಕ್ಕೆಹುಳುಗಳೂ ಬೆಚ್ಚಗಿರುವ ಆರ್ದ್ರಪ್ರದೇಶಗಳಲ್ಲಿ ಪ್ರವರ್ಧಿಸುತ್ತವೆ. ಹುಳುವಿನ ಮೊಟ್ಟೆಗಳಿಂದ ಉಗಮಿಸಿದ ಮರಿಗಳು ಕೈ ಅಥವಾ ಕಾಲುಗಳ ಚರ್ಮದ ಮೂಲಕ—ಬಹುಶಃ ಅಲ್ಲಿ ಗಾಯವಾಗಿರುವ ಸ್ಥಳದ ಮೂಲಕ—ದೇಹದ ಒಳಹೊಗುತ್ತವೆ. ಆಹಾರಪಾನೀಯಗಳ ಮೂಲಕವೂ ಇವು ದೇಹದ ಒಳಹೊಗಬಹುದು. ರಕ್ತವನ್ನು ಸೇರಿ ಇವು ಹೃದಯ, ಶ್ವಾಸಕೋಶ, ಶ್ವಾಸನಾಳ ಇವುಗಳ ಮೂಲಕ ಗಂಟಲಿಗೆ ಬಂದು ನುಂಗಲ್ಪಟ್ಟು ಜಠರ ಮತ್ತು ಕರುಳನ್ನು ಪ್ರವೇಶಿಸುತ್ತವೆ. ಇಲ್ಲಿ ಅವು ಕರುಳು ಭಿತ್ತಿಯನ್ನು ಕಚ್ಚಿಕೊಂಡು ರಕ್ತ ಹಾಗೂ ದೇಹದ್ರವಗಳನ್ನು ಹೀರಲು ತೊಡಗುತ್ತವೆ. ಸುಮಾರು ೧ ಸೆಂ. ಮೀ. ನಷ್ಟು ಇರುವ ಈ ಹುಳುಗಳು ೨-೫ ವರ್ಷಗಳು ಬದುಕಿರಬಲ್ಲವು ಮತ್ತು ಸತತವಾಗಿ ಮೊಟ್ಟೆಗಳನ್ನು ಇಡುವುವು. ಮೊಟ್ಟೆಗಳು ಮಲದ ಮೂಲಕ ವಿಸರ್ಜಿತವಾಗಿ ಜೀವನ ಚಕ್ರವನ್ನು ಪುನಃ ಪ್ರಾರಂಭಿಸುವುವು.

ಮನೆಹೊರಗಡೆ ಓಡಾಡುವಾಗ ಪಾದರಕ್ಷೆಗಳನ್ನು ಬಳಸಿದರೆ ಕೊಕ್ಕೆಹುಳುವಿನ ಸೋಂಕು ಹತ್ತುವ ಸಂಭವವನ್ನು ಅಗಾಧವಾಗಿ ಕಡಿಮೆ ಮಾಡಬಹುದು. ಝಾನ್ಸಿ ಮತ್ತು ಮಧ್ಯಪ್ರದೇಶದ ಇತರ ಜಿಲ್ಲೆಗಳಲ್ಲೂ ಕಾನ್‌ಪುರದಲ್ಲೂ ಜರಗಿಸಿರುವ ಸರ್ವೇಕ್ಷಣಗಳಿಂದ ಮಾಮೂಲಾಗಿ ಪಾದರಕ್ಷೆಗಳನ್ನು ಬಳಸುವ ಜನರಲ್ಲಿ ಕೊಕ್ಕೆಹುಳುವಿನ ಸೋಂಕು ಇರುವುದು ಪಾದರಕ್ಷೆಗಳಿಲ್ಲದೆ ತಿರುಗುವವರಿಗಿಂತ ಬಹು ಕಡಿಮೆ ಎಂದು ತಿಳಿದುಬಂದಿದೆ.

ರಾಮು ೨೮ ವರ್ಷ ವಯಸ್ಸಿನ ಶ್ರಮಜೀವಿ. ಹೈದರಾಬಾದಿನವ. ಮುಂಬಯಿಯಲ್ಲಿ ತನ್ನ ಸಂಸಾರದೊಡನೆ ಇದ್ದಾನೆ. ಅವನಿಗೆ ರಾತ್ರಿ ನಿದ್ರೆ ಸರಿಯಾಗಿ

ಬರವು. ಭೀಕರ ಕನಸುಗಳು. ಬೆಳಗ್ಗೆ ಎದ್ದಾಗಲೇ ಬಳಲಿಕೆ ಹಾಗೂ ಕೆರಳಿದ ಮನಸ್ಸು. ಅವನ ಹೆಂಡತಿ, ಮಗಳು, ಸಹೋದರ ಇವರಿಗೂ ಹೀಗೆಯೇ. ಅವರು ದಿನದಲ್ಲಿ ಬಹುಕಾಲ ತಮ್ಮ ಆಸನವನ್ನು ಕೆರೆದುಕೊಳ್ಳುತ್ತ ಅಲ್ಲಿಲ್ಲ ಗಾಯ ಮಾಡಿಕೊಳ್ಳುತ್ತಾರೆ. ಇವಕ್ಕೆ ಕಾರಣ ಅವರ ಕರುಳಿನಲ್ಲಿ ಸೂಜಿಹುಳು ಇರುವುದು. ತುಂಡು ದಾರಗಳಂತೆ ಕಾಣಬರುವುದರಿಂದ ಇವಕ್ಕೆ ದಾರದಹುಳು ಎಂದೂ ಹೆಸರಿದೆ. ಇದೂ ಪ್ರಪಂಚಪರ್ಯಂತ ಸೋಂಕು ಉಂಟುಮಾಡಿರುವಹುಳು–ಒಟ್ಟು ಇಪ್ಪತ್ತೆಂಟೂವರೆಕೋಟಿ ಜನ ಈ ಸೋಂಕಿನಿಂದ ಬಾಧಿತರಾಗಿದ್ದಾರೆಂದು ತಿಳಿದಿದೆ. ಭಾರತದಲ್ಲಿ ಇದರ ಸೋಂಕು ಬಹುಸಾಮಾನ್ಯವಾಗಿಯೇ ಇದೆ. ಹುಳುಗಳು ದೊಡ್ಡ ಕರುಳಿನಲ್ಲಿ ವಾಸಿಸುತ್ತವೆ. ಸಾಮಾನ್ಯವಾಗಿ ರಾತ್ರಿಹೊತ್ತು ಕರುಳಿನ ಅಂತ್ಯಕ್ಕೆ ಹರಿದುಬಂದು ಆಸನದ ಎಡೆಯಲ್ಲಿ ಮೊಟ್ಟೆಗಳನ್ನು ಇಡುತ್ತವೆ. ಈ ಕಾಲದಲ್ಲಿ ಆ ಸ್ಥಳದಲ್ಲಿ ಬಹು ನವೆ ಆಗುವುದರಿಂದ ಕೆರೆದುಕೊಳ್ಳುವುದು ಅನಿವಾರ್ಯವೆನ್ನಿಸುತ್ತದೆ. ಆಗ ಬೆರಳುಗಳಿಗೆ ಹತ್ತಿದ ಮೊಟ್ಟೆಗಳು ಬೇರೆ ಪದಾರ್ಥಗಳನ್ನು ಸಂಪರ್ಕಿಸಿದಾಗ ಅವಕ್ಕೆ ಹತ್ತಿಕೊಳ್ಳುತ್ತವೆ; ಹೀಗೆ ಇಲ್ಲವೆ ನೇರವಾಗಿ ಬೆರಳುಗಳಿಂದ ಬಾಯಿಗೆ ವರ್ಗವಾಗಿ, ಜಂತುಹುಳುಗಳಂತೆಯೇ, ದೇಹದ ಒಳಹೊಗುತ್ತವೆ. ಇಲ್ಲೂ ಪ್ರಧಾನವಾಗಿ ಮಕ್ಕಳೇ ಬಲಿ.

ಚಾಟಿಹುಳು ಇನ್ನೊಂದು ಬಗೆ. ಇದರ ಸೋಂಕು ಸಾಮಾನ್ಯವಾಗಿ ಒಂದು ಸೌಮ್ಯ ಪೀಡೆಮಾತ್ರ ಆಗಿರುವ ಸ್ಥಿತಿ. ಆದರೆ ಸಣ್ಣಮಕ್ಕಳ ಬೆಳವಣಿಗೆಗೆ ಅಡ್ಡಿ ಮಾಡುವಂಥದು. ಸೋಂಕು ಅಧಿಕವಾಗಿದ್ದರೆ ಹೊಟ್ಟೆನೋವು, ಭೇದಿ, ಮೈತೂಕ ಇಳಿಯುವುದು ಮುಂತಾದ ತೊಂದರೆಗಳೂ ಉಂಟಾಗುತ್ತವೆ. ಇದರ ಸೋಂಕು ಹಬ್ಬುವುದೂ ಇತರ ಹುಳುಗಳಲ್ಲಿಯಂತೆಯೇ. ಸಾಂಕ್ರಾಮಿಕತೆಯ ವಿಷಯವಾಗಿ ಅಲ್ಲಿ ಕಂಡುಬರುವಂಥ ವಿಷಮ ಚಕ್ರ ಇಲ್ಲಿಯೂ ಇದೆ.

ಹುಳುಗಳ ಇಂಥ ವಿಷಮ ಚಕ್ರವನ್ನು ಭೇದಿಸಲು ಇರುವ ದಾರಿ ಒಂದೇ: ಮಲವಸ್ತುವಿನ ವಿಲೇವಾರಿಯನ್ನು ಸರಿಯಾದ ರೀತಿಯಲ್ಲಿ ಮಾಡುವುದು. ಲಭ್ಯವಿರುವ ಎಲ್ಲಾ ಶಿಕ್ಷಣ ಕ್ರಮಗಳನ್ನೂ ಈ ವಿಷಯಪ್ರಚಾರಣೆಗಾಗಿ ಬಳಸಬೇಕಾದುದು ಅಗತ್ಯ. ಮಲದ ವಿಲೇವಾರಿಗೆ ತಕ್ಕ ಅನುಕೂಲಗಳಿಲ್ಲದಿರುವ ಸ್ಥಳಗಳಲ್ಲಿ ಗುಂಡಿಯಲ್ಲಿ ಮಲವಿಸರ್ಜನೆ ಮಾಡಿ ಅದನ್ನು ಮಣ್ಣುಹಾಕಿ ಹೂತುಬಿಡಬೇಕು ಮತ್ತು ಮಕ್ಕಳು (ದೊಡ್ಡವರೂ) ಆಹಾರಜನ್ಯ ಪ್ರಾಣಿಸಸ್ಯಗಳೂ ಆ ಸ್ಥಳವನ್ನು ಸಂಪರ್ಕಿಸದಂತೆ ದೂರವೇ ಇರಬೇಕು. ರೈತರು ಮನುಷ್ಯರ ಮಲವನ್ನು ಗೊಬ್ಬರವಾಗಿ ಬಳಸಿದರೆ ಇಂಥ ತೊಂದರೆ ಇದೆ ಎನ್ನುವುದನ್ನು

ಅವರ ಮನಸಗಾಣಿಸಿ ಅವರು ಬೇರೆ ಬಗೆಯ ಗೊಬ್ಬರಗಳನ್ನು ಬಳಸುವಂತೆ ಮಾಡಬೇಕು. ಎಲ್ಲಾ ಮನೆಗಳಲ್ಲೂ ಹಣ್ಣು ತರಕಾರಿಗಳನ್ನು ಬಳಸುವ ಮುನ್ನ ಅವುಗಳನ್ನು ಚೆನ್ನಾಗಿ ತೊಳೆದು ಬಳಸಬೇಕು. ಮಕ್ಕಳು ಮಲವಿಸರ್ಜನೆ ಮಾಡಿದ ಮೇಲೆ ಮತ್ತು ಊಟ ಮಾಡುವುದಕ್ಕೆ ಮುಂಚೆ ತಪ್ಪದೆ ತಮ್ಮ ಕೈಗಳನ್ನು ತೊಳೆದುಕೊಳ್ಳುವಂತೆ ಎಚ್ಚರಿಸಬೇಕು.

ಇನ್ನೊಂದು ಅಗತ್ಯವಾದ ಕ್ರಮವೆಂದರೆ ಹೊಟ್ಟೆಯಲ್ಲಿ ಜಂತುಗಳು ಇರುವವರು ಈಗ ಲಭ್ಯವಿರುವ ಅಗ್ಗ ಹಾಗೂ ಸುರಕ್ಷಿತ ಔಷಧಗಳನ್ನು ತೆಗೆದುಕೊಂಡು ಕ್ರಿಮಿರಹಿತರಾಗತಕ್ಕದ್ದು. ಇವುಗಳನ್ನು ವೈದ್ಯರ ಸಲಹೆಯಂತೆ ತೆಗೆದುಕೊಳ್ಳುವುದು ಉತ್ತಮ. ಔಷಧ ಅಂಗಡಿಗಳಲ್ಲಾದರೂ ವಿಚಾರಿಸಿ ತೆಗೆದುಕೊಳ್ಳುವುದು ಯುಕ್ತ. ಪೈಪರಸಿನ್ ಸಂಯುಕ್ತಗಳು (ಆಂಟಿಪಾರ್) ಪೈರಾಂಟೆಲ್ ಪಾಮೋಯೇಟ್ (ಕೊಂಬ್ಯಾಂಟ್ರಿನ್). ಟೆಟ್ರಮಿಸೋಲ್, ಮೆಬೆಂಡಜೋಲ್ ಮುಂತಾದುವು ಇಂಥ ಕೆಲವು ಔಷಧಿಗಳು. ವರ್ಷದಲ್ಲಿ ೨–೩ ಸಾರಿ ಇವುಗಳನ್ನು ಸೇವಿಸಿ ಸಾಮರ್ಥ್ಯಹರಣ ಮಾಡುವ ಮತ್ತು ಜೀವಕ್ಕೇ ಅಪಾಯ ತರಬಹುದಾದಂಥ ಜಂತುಗಳ ಹಾವಳಿಯಿಂದ ಬಹು ಸಂಸಾರಗಳು ಮುಕ್ತವಾಗಬಹುದು.

ಡಾ॥ ಎಸ್. ರಾಮರಾವ್



ಮಹತ್ವಾಕಾಂಕ್ಷೆ ಕೆಟ್ಟದಲ್ಲ. ಮಹತ್ವಾಕಾಂಕ್ಷೆಯೂ ದೈವದೊಡನೆ ಹೋರಾಡಲು ಮಾನವನಿಗೆ ಸ್ಫೂರ್ತಿಯನ್ನು ನೀಡುತ್ತದೆ.

—ವರ್ಜಿಲ್

ನಷ್ಟವಾಗುತ್ತಿರುವ ವನ್ಯಜೀವಿ ಸಂಪತ್ತು

ಕೋಟ್ಯಂತರ ವರ್ಷಗಳಿಂದ ಜೀವಿಗಳು ಜಗತ್ತಿನಲ್ಲಿ ಬದುಕಿವೆ. ಭೂಮಿಯ ಆಯುಃ ಪ್ರಮಾಣವನ್ನು ೨೪ ಗಂಟೆಗಳೆಂದು ಪರಿಗಣಿಸುವುದಾದರೆ ಜಗತ್ತಿನ ಜೀವನ ನಾಟಕದಲ್ಲಿ ಮನುಷ್ಯನ ಪ್ರವೇಶವಾಗಿ ಕೇವಲ ಐದು ಮಿನಿಟುಗಳು ಮಾತ್ರ ಉರುಳಿವೆ. ಆದ್ದರಿಂದ ಭೂಮಿಯ ಮೇಲೆ ಬದುಕಲು ಮನುಷ್ಯನಿಗಿಂತಲೂ ಹೆಚ್ಚಲ್ಲದಿದ್ದರೂ ಸಮಾನ ಹಕ್ಕು ಎಲ್ಲ ಜೀವಿಗಳಿಗೂ ಇರಬೇಕಲ್ಲವೇ? ವನ್ಯಜೀವಿ ಎಂಬ ಪದ ಕನ್ನಡ ಭಾಷೆಯಲ್ಲಿ ಅನ್ವರ್ಥವಾಗಬಹುದಾದರೂ ಕಾಡುಗಳೇ ಕಣ್ಮರೆಯಾಗುತ್ತಿರುವಾಗ, ವನ್ಯಜೀವಿಗಳೆಂದು ಭಾವಿಸುವುದು ಆಭಾಸವಾಗಬಹುದು. ವಾಸ್ತವವಾಗಿ ಇದು ನಮಗೆ ಆಂಗ್ಲಭಾಷೆಯ ವೈಲ್ಡ್ ಲೈಫ್ ಎಂಬ ಪದದಿಂದ ಬಂದುದು. ವೈಲ್ಡ್ ಎಂದರೆ ಒರಟ ಎಂಬ ಅರ್ಥ ಬರುತ್ತದೆ. ಹಾಗಾದರೆ ಕಾಡಿನಲ್ಲಿ ಬದುಕುವ ಜೀವಿಗಳೆಲ್ಲವೂ ಒರಟು ಜೀವಿಗಳೇ? ಸ್ವಾರ್ಥಜೀವಿಯಾದ ಮನುಷ್ಯನ ದೃಷ್ಟಿಯಲ್ಲಿ ಮಾತ್ರ ಈ ನಾಮಕರಣ ನ್ಯಾಯವಾಗಿ ಕಾಣಬಹುದು. ಅಂದರೆ ತಾನು ಮತ್ತು ತಾನು ಸಾಕಿದ ಜೀವಿಗಳು ಮಾತ್ರ ಸಾಧು ಜೀವಿಗಳು. ಉಳಿದವೆಲ್ಲವೂ ಒರಟು ಜೀವಿಗಳು. ಈ ರೀತಿಯ ಪಕ್ಷಪಾತ ಘೋಷಣೆಗೆ ಕಾರಣವೇನು? ಹಾಗೆಂದು ಪರಿಗಣಿಸಲು ಮನುಷ್ಯನಿಗೆ ಅಧಿಕಾರ ಕೊಟ್ಟವರಾರು?

ವನ್ಯಜೀವಿ ಸಂಪತ್ತು, ಪ್ರಕೃತಿಮಾತೆ ಭೂಮಿಗೆ ಕೊಟ್ಟ ಉತ್ಕೃಷ್ಟ ಕೊಡುಗೆ, ಸೂರೆಗೈಯ್ಯಲು ಒದಗಿಸಿದ ಸಾಧನ ಸಂಪತ್ತಲ್ಲ, ಮಾನವನ ಆನಂದಾತಿಶಯಕ್ಕೆ ಬಳಸುವ ಸಾಧನವಲ್ಲ. ಈ ಜೀವಿಗಳ ವಿಕಾಸದ ತೊಟ್ಟಿಲಿನಿಂದ ಮನುಷ್ಯ ಜನಿಸಿ ಬಂದಿದ್ದಾನೆ. ಅದೇ ಜೀವಿಗಳ ಸಮುದಾಯ ಪರಿಸರ ಮನುಷ್ಯನನ್ನು ಪೋಷಿಸಿದೆ, ಪೋಷಿಸುತ್ತಿದೆ ಮತ್ತು ರಕ್ಷಿಸುತ್ತಿದೆ. ಪ್ರಕೃತ ಸಂದರ್ಭದಲ್ಲಿ ತಾನು ಪ್ರಬಲ ಜೀವಿಯಾದ ಮಾತ್ರಕ್ಕೆ, ತನ್ನ ಬುದ್ಧಿಚತುರತೆಯಿಂದ ಜಗತ್ತನ್ನು ಆಳುತ್ತಿದ್ದ ಮಾತ್ರಕ್ಕೆ, ಉಳಿದ ಪ್ರಕೃತಿಯ ಸಂಪತ್ತನ್ನು ತನ್ನ ಸುಖಕ್ಕಾಗಿ ಬಳಸುವ, ಸೂರೆಗೊಳ್ಳುವ, ನಾಶಪಡಿಸುವ ಅಧಿಕಾರವಿಲ್ಲ. ಅವನ್ನು ಸಂರಕ್ಷಿಸಬೇಕು, ಬೆಳೆಸಬೇಕು. ಆದರೆ ಮನುಷ್ಯನ ಸ್ವಾರ್ಥ ಹಾಗೂ ದುರಾಸೆಗಳು ಆತನ ಅನಿಯಮಿತ ಯೋಜನಾಕ್ರಮ, ದೂರದೃಷ್ಟಿಯ ಕೊರತೆ ಈ ಸಂಪತ್ತಿನ ವಿನಾಶಕ್ಕೆ ಕಾರಣವಾಗಿವೆ. ಅವುಗಳನ್ನು ಉಳಿಸಿ ಬೆಳೆಸಿದರೆ ಅವು ಮನುಷ್ಯನ ಇನ್ನೂ ಹೆಚ್ಚಿನ ಸಾಧನೆಗಳಿಗೆ ಪೂರಕವಾಗಬಹುದು. ಜೀವಜಗತ್ತಿನಲ್ಲಿ

ಉಂಟಾಗಿರುವ ಉತ್ಪಾತ, ಮನುಷ್ಯನ ಜೀವನದ ಮೇಲೆ ಮಹತ್ಪರಿಣಾಮ ಬೀರಬಹುದು.

ಇಂದು ಜಗತ್ತಿನಲ್ಲಿ ಸಂಭವಿಸುತ್ತಿರುವ ಹಾನಿಗಳೆಲ್ಲಕ್ಕೂ ಮನುಷ್ಯನೇ ಕಾರಣ. ಅವನ ದುರಾಸೆಯ ದೋಷ ಈ ಎಲ್ಲಕ್ಕೂ ಮೂಲ ಕಾರಣ: ಆಸ್ಫೋಟಿಸುತ್ತಿರುವ ಜನಸಂಖ್ಯೆ, ಮೇರೆ ಮೀರಿ ಏರುತ್ತಿರುವ ಆಹಾರದ ಕೊರತೆ, ವಿಶ್ರಾಂತಿಧಾಮದ ಅಭಾವ ಮತ್ತು ಆಹಾರವನ್ನು ಉತ್ಪಾದಿಸಲು ಸೌದೆಯಾಗಿ ಬಳಸುತ್ತಿರುವ ಕಾಡಿನ ಮರಗಿಡಗಳ ನಾಶ.

ಗಂಭೀರತೆಗೆ, ನಿಸರ್ಗ ಸೌಂದರ್ಯಕ್ಕೆ, ಆಗರವಾಗಿದ್ದ, ಶಾಂತಿಯ ಬೀಡುಗಳಾಗಿದ್ದ, ಸತ್ಯಾನ್ವೇಷಕರ ತಪಸ್ಸಿಗೆ ಆಶ್ರಯವಾಗಿದ್ದ ಕಾಡುಗಳು ಮರೆಯಾಗುತ್ತಿವೆ. ಕಾಡುಜೀವಿಗಳ ಆವಾಸಸ್ಥಾನಗಳನ್ನು ಕಡಿದು ಪ್ರತಿ ಘಳಿಗೆಗೊಂದರಂತೆ ಜನಿಸುತ್ತಿರುವ ಮಾನವ ಸಂತತಿಯು ಹೊಟ್ಟೆತುಂಬಲು, ದೇಹ ಮುಚ್ಚಲು, ವಿಶ್ರಾಂತಿ ಧಾಮಗಳನ್ನು ಕಟ್ಟಲು ತೊಡಗಿದ್ದೇವೆ. ಕಾಡಿನಲ್ಲಿ ಗಂಭೀರವಾಗಿ ಜೀವಿಸಿದ್ದ ಜೀವಿಗಳು ನೆಲೆ ತಪ್ಪಿದ ಪರದೇಶಿಗಳಾಗಿವೆ. ಆಹಾರ ಆಶ್ರಯಗಳನ್ನರಸಿ ಮನುಷ್ಯನ ಬೀಡಿನತ್ತ ಬರುತ್ತಿವೆ. ಹುಲಿ ಚಿರತೆಗಳು ಸಾಕಿದ ದನಕರುಗಳನ್ನು ತಿಂದಾಗ ದೋಷದಿಂದ ನಿಡಿದೇಳುವ: ಆನೆ, ಕಾಡುಕೋಣ, ಕಾಡುಹಂದಿಗಳು ಕಬ್ಬಿನ ತೋಟಕ್ಕೆ ನುಗ್ಗಿ, ಹಾವಳಿ ಮಾಡಿದಾಗ ಸಿಟ್ಟಿಗೇಳುವ, ಸಿಟ್ಟಿನ ಭರದಲ್ಲಿ ಅವನ್ನು ಕೊಲ್ಲಲು ಮುಂದಾಗುವ ಮನುಷ್ಯ ತುಸು ತಡೆದು, ತಾಳ್ಮೆಯಿಂದ ಪರಿಶೀಲಿಸುವ ಪ್ರಯತ್ನ ಮಾಡಬೇಕಾಗಿದೆ. ಇದು ಏಕೆ ಹೀಗೆ? ಹುಲಿ ಚಿರತೆಗಳ ಆವಾಸಸ್ಥಾನವನ್ನು ನಾಶಮಾಡಿದ್ದೇವೆ. ಅವುಗಳ ಆಹಾರ ಜೀವಿಗಳಾದ ಚಿಗರೆ, ಹರಿಣ, ಜಿಂಕೆ, ಕಾಡುಕೋಣ, ಕಾಡು ಹಂದಿಗಳು ಮಾನವನ ರಕ್ಷಣೆಯ ಮದದಿಂದ ಕೊಬ್ಬಿದ ಸಾಕುಪ್ರಾಣಿಗಳೊಡನೆ ಸೆಣಸಲಾರದೆ ಸ್ಪರ್ಧೆಯಲ್ಲಿ ಸೋತು ಅಳಿದು ಮರೆಯಾಗುತ್ತಿವೆ. ಅವುಗಳ ಜೀವನಾಧಾರ ಆಹಾರವಾದ ಹುಲ್ಲನ್ನು ನಮ್ಮ ಸಾಕು ಪ್ರಾಣಿಗಳು ತಿಂದು ಕೊಬ್ಬಿ ಬೆಳೆಯುತ್ತಿವೆ. ಅವಕ್ಕೆ ನಮ್ಮ ಬಲಿದ ಬಲವಾದ ರಕ್ಷಣೆಯಿದೆ. ಇವುಗಳೊಡನೆ ಸ್ಪರ್ಧಿಸಲಾರದೆ ಕಾಡುಪ್ರಾಣಿಗಳು ಹಸಿದು, ಕಂಗೆಟ್ಟು, ಕಣ್ಮರೆಯಾಗುತ್ತಿವೆ. ಹೀಗಾದಾಗ ಆಹಾರವನ್ನರಸುತ್ತ ಬಂದ ಹುಲಿ ಅಥವಾ ಚಿರತೆ, ಸಹಜ ಆಹಾರ ಮರೆಯಾದಾಗ ಪರ್ಯಾಯ ಆಹಾರವನ್ನು ಹುಡುಕುತ್ತ ಬಂದು ಸಾಕುಪ್ರಾಣಿಗಳನ್ನು ಕೊಂದುತಿಂದಾಗ ಸಿಟ್ಟಾಗುವುದು ತರವೇ? ಹಾಗಾಗಲು ಕಾರಣ ಸೃಷ್ಟಿಸಿದವರು ನಾವೇ. ನಮ್ಮ ತಪ್ಪಿಗೆ ನಾವು ಮಾತ್ರವೇ

ಹೊಣೆಯಾಗಬೇಕು. ನಾಗರೀಕ ಹಕ್ಕು, ಕಾನೂನಿನ ಬೆಂಬಲ ಇಲ್ಲದ, ಕೊಳಚೆ
ಪ್ರದೇಶದ ಗುಡಿಸಲುಗಳನ್ನೇ ಕಿತ್ತಾಗ, ಒಕ್ಕೊರಲಿನಿಂದ ಕೂಗುತ್ತೇವೆ, ಮೂಲ
ಭೂತಹಕ್ಕುಗಳ ಮಾತನಾಡುತ್ತೇವೆ. ಮಾನವೀಯತೆಯ ಆದರ್ಶ ಸೃಷ್ಟಿಸು
ತ್ತೇವೆ. ಈ ಕೊಳಚೆ ವಾಸಿಗಳು ಮಾನವರೆಂದೇ? ವನ್ಯಜೀವಿಗಳ ಆವಾಸಸ್ಥಾನ
ವಾದ ಕಾಡುಗಳನ್ನು ಕಡಿಯುವಾಗ ಅವುಗಳ ಆಹಾರವನ್ನು ಸೂರೆಗೊಳ್ಳು
ವಾಗ, ಮೂಲಭೂತ ಹಕ್ಕುಗಳ ಪ್ರಶ್ನೆ ಏಳುವುದಿಲ್ಲ. ಮಾನವೀಯತೆ ಇದರಲ್ಲಿ
ಪ್ರವೇಶಿಸುವುದಿಲ್ಲ. ಆದ್ದರಿಂದ ಈ ಜೀವಿಗಳು ಇಂದು ಮಾನವನೊಡನೆ ಸ್ಪರ್ಧಿಸ
ಲಾರದೆ ಮನುಷ್ಯನ ಸಾಕುಪ್ರಾಣಿಗಳೊಡನೆ ಸೆಣಸಲಾರದೆ ತಮ್ಮ ಉಳಿವಿಗಾಗಿ
ಹೋರಾಡುತ್ತಿವೆ. ಇದು ವಿಫಲ ಯತ್ನ. ಸೋಲು ಕಟ್ಟಿಟ್ಟ ಸ್ಪರ್ಧೆ.

ನಮ್ಮ ತಪ್ಪನ್ನು ಅರಿತುಕೊಂಡಿದ್ದೇವೆ. ಅವನ್ನು ಸಂರಕ್ಷಿಸಬೇಕಾದುದರ
ಮಹತ್ವವನ್ನು ಗ್ರಹಿಸಿದ್ದೇವೆ, ಎನ್ನುತ್ತಿದ್ದೇವೆ. ನಿಜವಾಗಿಯೂ ಗ್ರಹಿಸಿದ್ದೇ
ವೇನು? ಇಂದಿನ ಪರಿಸ್ಥಿತಿಯಲ್ಲಿ ಮನುಷ್ಯ ಸ್ವಲ್ಪ ಆತ್ಮಸಂಶೋಧನೆ ನಡೆಸು
ವುದು ಅಗತ್ಯ. ಮಾತನಾಡುವ, ಆಸ್ತಿಯನ್ನು ಹೊಂದುವ, ಇಚ್ಛಿಸಿದ ಧರ್ಮ
ವನ್ನು ಆಚರಿಸುವ ವಿಷಯದಲ್ಲಿ ಮೂಲಭೂತ ಹಕ್ಕುಗಳ ಬಗ್ಗೆ ಮಾತನಾಡು
ತ್ತೇವೆ, ಚರ್ಚಿಸುತ್ತೇವೆ. ಅದಕ್ಕಾಗಿ ಹೋರಾಡಲೂ ಸಿದ್ಧರಾಗಿದ್ದೇವೆ. ಆದರೆ
ನಮ್ಮ ಪೂರ್ವಜರು, ನಮಗಿಂತ ಜಗತ್ತಿನಲ್ಲಿ ಮೊದಲು ಕಾಣಿಸಿಕೊಂಡ ಈ
ಜೀವಿಗಳ ಮೂಲಭೂತ ಹಕ್ಕುಗಳನ್ನು ಗುರುತಿಸುವಾಗ ಹಿಂಜರಿಯುತ್ತೇವೆ.
ಒಂದು ಕಾಲಕ್ಕೆ ಕಾಡಿನಲ್ಲಿ ಮೆರೆದುಮೊರೆದ ಈ ಜೀವಿಗಳಿಗೆ ಪ್ರಾಣಿಸಂಗ್ರಹಾ
ಲಯಗಳನ್ನಾಗಲಿ, ಸಫಾರಿ ರಮ್ಯತಾಣಗಳನ್ನಾಗಲಿ. ಪ್ರಾಣಿಧಾಮಗಳನ್ನಾಗಲಿ
ಏರ್ಪಡಿಸುವುದರಿಂದ ಅವುಗಳಿಗೆ ರಕ್ಷಣೆ ಅಥವಾ ಸ್ವಾತಂತ್ರ್ಯವನ್ನು ದೊರಕಿಸಿ
ಕೊಟ್ಟಂತಾಗುವುದಿಲ್ಲ. ವನ್ಯಜೀವಿಗಳೆಂಬುದು ಭೂಮಿಯ ಮೇಲಿನ ಸಂಪನ್ಮೂಲ.
ಅದಿಲ್ಲದೆ ಜಗತ್ತಿನ ಜೀವನವೇ ಅಸ್ತವ್ಯಸ್ತವಾಗಬಹುದೆಂಬುದನ್ನು ಅರಿತುಕೊಳ್ಳ
ಬೇಕು.

ಕಾಡಿನ ರಮ್ಯ ಜೀವನ, ಅದರ ಸೊಗಸು, ಈಗ ಕೇವಲ ಪುಸ್ತಕಗಳ ವಿವರಣೆ
ಯಲ್ಲಿ ದೊರಕುವ ವಸ್ತುವಾಗಿದೆ. ಅದನ್ನು ಓದಿದಾಗ ಅಂತಹುದೊಂದು ಇತ್ತೆ
ಎಂದು ಆಶ್ಚರ್ಯಪಡುವ ಸ್ಥಿತಿಗೆ ಬಂದಿದ್ದೇವೆ. ಇದೇ ಜಗತ್ತಿನಲ್ಲಿ ಹಂಪೆ
ವ್ಯಾಪಾರ-ವ್ಯವಹಾರಗಳ ಕೇಂದ್ರವಾಗಿತ್ತಂತೆ. ಮುತ್ತು-ರತ್ನ, ವಜ್ರವೈಢೂರ್ಯ
ಗಳನ್ನು ರಾಶಿಹಾಕಿಕೊಂಡು ಮಾರುತ್ತಿದ್ದರಂತೆ. ವಿಜಯನಗರ ಸಾಮ್ರಾಜ್ಯ
ತನ್ನ ಏಳಿಗೆಯ ತುಟ್ಟತುದಿಯಲ್ಲಿದ್ದ ಕಾಲಕ್ಕೆ, ಹಾಗೆಂದು ಇತಿಹಾಸ ವಿವರಿಸು

ತ್ರವೆ. ಆದರೆ ಇಂದು ಹಾಳುಬಿದ್ದ ಹಂಪೆಯಲ್ಲಿ ಕಾಣಬರುವುದೇನು? ಕೇವಲ ಮುರಿದ ಗೋಡೆಗಳು, ಮುರುಕು ಮಂಟಪಗಳು, ಶಿಥಿಲಗೊಂಡ ಕಲ್ಲುಕಟ್ಟಡಗಳು, ಸುಸ್ಥಿತಿಯಿಂದ ವಿರೂಪಾಕ್ಷ ದೇವಾಲಯವೊಂದು ಸುರಕ್ಷಿತವಾಗಿ ಉಳಿದಿದೆ. ಅಲ್ಲಿಗೆ ಇಂದು ಭೇಟಿಕೊಡುವ ವಿಹಾರಿಗೆ, ಅಂದಿನದನ್ನು ಊಹಿಸಿಕೊಳ್ಳುವ, ಮನೋಬಲವಾಗಲಿ ಮನೋಧರ್ಮ ಇರುವುದೇ? ಕಂಡುದನ್ನೇ ನಂಬಲಾಗದ ಈ ದಿನಗಳಲ್ಲಿ ಇದ್ದುದನ್ನು ಊಹಿಸಿರಿ ಎಂದರೆ ನಗೆಪಾಟಲಾಗಬಹುದಾದ ಸಂಭವವೇ ಹೆಚ್ಚು. ವನ್ಯಜೀವನದ ಪಾಡು ಇಂದು ಅದೇ ಸ್ಥಿತಿಯಲ್ಲಿದೆ. ಹಂಪೆಯ ವಿಜಯನಗರವೂ ಮಾನವನ ಇತಿಹಾಸಕ್ಕೆ ಸಂಬಂಧಿಸಿದುದು. ಆದರೆ ವನ್ಯಜೀವಿಗಳ ವಿಚಾರ ಪ್ರಪಂಚದಲ್ಲಿನ ಜೀವಿಗಳ ಜೀವನಕ್ಕೆ ಸಂಬಂಧಿಸಿದ ವಿಷಯ. ಇದು ತಲೆಕೆಡಿಸಿಕೊಳ್ಳಬೇಕಾದ ಸಮಸ್ಯೆಯೇ ಅಲ್ಲ ಎಂಬುದು ಬಹುತೇಕ ಸಾಮಾನ್ಯ ಜನರ ಧೋರಣೆ. ಇಂದು ಈ ವಿಷಯಕ್ಕಾಗಿ ಮತದಾನ ನಡೆದುದಾದರೆ, ಯಾರೂ ವನ್ಯಜೀವಿ ಸಂರಕ್ಷಣೆಯ ಉಮೇದುವಾರನಿಗೆ ಮತ ನೀಡುವ ತಪ್ಪು ಮಾಡಲಾರರು.

ಭಾರತ-ಆಫ್ರಿಕಾ ಖಂಡಗಳ ಕಾಡುಗಳಲ್ಲಿ ಸುತ್ತಾಡಿ ಅದರ ರಮ್ಯತೆಯನ್ನು, ವನ್ಯಜೀವನದ ಸೊಬಗನ್ನು, ವನ್ಯಮೃಗಗಳ ಸೌಂದರ್ಯವನ್ನು ಆನಂದಿಸಿದ, ವಿಹರಿಸಿದ ರುಡ್ಯಾರ್ಡ್ ಕಿಪ್ಲಿಂಗ್ ಇಂದು ಬಂದನಾದರೆ ನಾನಾವುದೊ ಪರಕೀಯ ಗ್ರಹಕ್ಕೆ ಬಂದಿರುವೆನೆಂದು ತಬ್ಬಿಬ್ಬಾಗಬಹುದು. ವಿಕಾಸವಾದದ ಜನಕನೆಂದು ಜಗತ್ಪ್ರಸಿದ್ಧನಾದ ಚಾರ್ಲ್ಸ್ ಡಾರ್ವಿನ್ ವಿಕಾಸದ ಇರವನ್ನು ಕಂಡುದು ತನ್ನ ಪ್ರಪಂಚ ಪರ್ಯಟನೆಯ ಕಾಲದಲ್ಲಿ. ವನ್ಯಜೀವಿಗಳ ಜೀವನ ಕ್ರಮವನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ವಿಶ್ಲೇಷಿಸಿ, ಅವುಗಳ ಜೀವನ ಧರ್ಮದಲ್ಲಿ ವಿಕಾಸದ ಮಾರ್ಗವನ್ನು ಕಂಡ ಬೀಗಲ್ ಹಡಗಿನ ಪ್ರಕೃತಿ ವಿಜ್ಞಾನಿಯಾಗಿ ಸುತ್ತಾಡಿದ ಕಾಲಕ್ಕೆ, ದಕ್ಷಿಣ ಅಮೆರಿಕಾ ಖಂಡದ ಪಶ್ಚಿಮ ತೀರದಿಂದ ಎಂಟುನೂರು ಮೈಲಿಗಳ ದೂರದಲ್ಲಿ ಫೆಸಿಫಿಕ್ ಮಹಾಸಾಗರದಲ್ಲಿರುವ ಗೆಲಪಾಗೋಸ್ ದ್ವೀಪಸ್ತೋಮವು ವಿಕಾಸವಾದ ಹುಟ್ಟಿಬೆಳೆಯಲು ಕಾರಣವಾದ ತೊಟ್ಟಿಲು. ಅಲ್ಲಿಯ ಜೀವನಕ್ರಮ, ಆತನನ್ನು ಆಕರ್ಷಿಸಿತು, ಆತನ ಮನಸ್ಸನ್ನು ಸೂರೆಗೊಂಡಿತು. ಆತನ ಅಂತಶ್ಚಕ್ಷುಗಳನ್ನು ತೆರೆಸಿತು. ಕೇವಲ ಒಂದೂವರೆ ಶತಮಾನದ ಹಿಂದೆ ಆತ ಕಂಡ ಪ್ರಕೃತಿ ವಿಲಾಸದ ತುಣುಕೊಂದನ್ನು ಪರಿಶೀಲಿಸಿ, ಗೆಂಪೆಗೋಸ್ ದ್ವೀಪಗಳ ಜೀವನ ರಮ್ಯವಾದುದು, ಸೌಮ್ಯರೂಪದ್ದು. ಕಾಡಿನಲ್ಲಿ ಕಂಡು ಬರುತ್ತಿದ್ದ ಗಂಭೀರತೆ, ಜೀವಿಗಳ, ಚಟುವಟಿಕೆಯ ಸದ್ದು-

ಗದ್ದಲ, ಅರಳಿದ ಬಣ್ಣಬಣ್ಣದ ಹೂಗಳು, ಅವು ಹರಡಿದ್ದ ಸೌರಭ, ಹೂವುಗಳ ನಡುವೆ ಹಾರಾಡುತ್ತಿದ್ದ ಅಂದಚೆಂದದ ಚಿಟ್ಟೆ ಪತಂಗಗಳು, ಬಣ್ಣಬಣ್ಣದ ಎಲೆ-ಕಾಂಡಗಳ ಮರಗಿಡಗಳು, ಅವನ್ನು ಸುತ್ತಿ ಬೆಳೆದ ಬಳ್ಳಿಗಳು, ಬಣ್ಣಬಣ್ಣದ ಕೊಡತಿ ನೊಣಗಳು, ಅತಿಕ್ರಮಿಸಿ ಬಂದ ಇವರನ್ನು ಮುತ್ತಿಕಾಡಿದ ನೊಣ-ಸೊಳ್ಳೆಗಳು, ಜಿಗಿದು ಹಾರುತ್ತಿದ್ದ ಮಿಡತೆಗಳು, ರೆಕ್ಕೆಗಳನ್ನುಜ್ಜಿ ಮರಕೊಯ್ಯುವ ಶಬ್ದ ಮಾಡಿ ವನ್ಯಜೀವನದ ಸಂಗೀತಗೋಷ್ಠಿಗೆ ಶ್ರುತಿಯ ಹಿನ್ನೆಲೆ ನೀಡುತ್ತಿದ್ದಂತಿದ್ದ ಕ್ರಿಕೆಟ್ ಕೀಟ್, ತಲೆಯೆತ್ತಿ ಸಾಗುತ್ತಿದ್ದ ಮೃಗಗಳು, ಸೌಮ್ಯತೆಯಿಂದ ಹಾರುತ್ತಿದ್ದ ಹಕ್ಕಿಗಳು, ಈ ವಿಜಾತೀಯ ಜಗತ್ತಿನಲ್ಲಿ ಬೆಳೆಯುವ ಮುಂಡಕಳ್ಳಿಯನ್ನು ಮುಕ್ಕಿ ಹೊದರು ಮೆಳೆಗಳ ನಡುವೆ ಸರಿದಾಡುವ ದೈತ್ಯ ಆಮೆಗಳು, ಕಡಲ ಮೊರೆತವನ್ನೂ ಲೆಕ್ಕಿಸದೆ, ಕಡಲ ಕಳೆಗಳನ್ನೇ ತಿಂದು, ಬಂಡೆಗಳ ಬಳಿ ಸುತ್ತಾಡುವ ಮಾರುದ್ದದ ಇಗುವಾನಹಲ್ಲಿ, ಇದು ಕಲೆಗಾರನೊಬ್ಬ ಬರೆದ ಬಣ್ಣದ ಚಿತ್ರವಲ್ಲ, ಆಕಸ್ಮಿಕ ಸಂಘಟನೆಯಲ್ಲ, ಯೋಚಿಸಿ, ರೂಪಿಸಿ, ರೂಢಿಸಿದ ಸಾಮರಸ್ಯ, ಪ್ರಕೃತಿ ಸೃಷ್ಟಿ, ನಿಸರ್ಗ ಸೌಂದರ್ಯ.


ಕಡಲಯಾನ ಹೊರಟ ನಾವಿಕರು ತಾವು ಕಾಣುತ್ತಿದ್ದ ತಿಮಿಂಗಿಲಗಳ ಹಿಂಡುಗಳ ವಿವರಣೆಯನ್ನು ಕೊಟ್ಟಿದ್ದಾರೆ. ಆನೆ ನೆಲದ ಮೇಲಿನ ಘನ ಗಂಭೀರ ಗಜರಾಜನಾಗುವುದಾದರೆ, ತಿಮಿಂಗಿಲ ಸಾಗರಗಳ ಸಾಮ್ರಾಟ. ನೂರಾರು ಅಡಿ ಉದ್ದ, ಹಲವಾರು ಟನ್ ತೂಗುವ ಬೃಹತ್ ದೇಹದ ಪ್ರಾಣಿ. ಗಂಭೀರವಾಗಿ ಈಜಿ, ಮುಳುಗಿ, ಕಡಲ ಕಳೆ ತೇಲುಜೀವಿಗಳನ್ನು ಮಾತ್ರವೇ ತಿಂದುಂಡು ಬದುಕುವ ನಿರಾತಂಕ ಜೀವಿ. ಅದು ಕೊಬ್ಬಿನ ಉಗ್ರಾಣ. ಅದರತ್ತ ಮಾನವನ ದುರಾಸೆಯ ದೃಷ್ಟಿ ಹರಿಯಿತು. ಕೋಟ್ಯಾಂತರ ಸಂಖ್ಯೆಯಲ್ಲಿದ್ದ ಅವು ಇಂದು ನೂರಾರಾಗಿ ಅಳಿವಿನ ಹಾದಿ ಹಿಡಿದಿವೆ. ಅವುಗಳ ಬೇಟೆ ನಿರಂತರವಾಗಿ ನಿರಾತಂಕವಾಗಿ ಸಾಗಿದೆ. ಅಂತರರಾಷ್ಟ್ರೀಯ ಸಂಸ್ಥೆಯ ನೀತಿನಿಯಮಗಳನ್ನು ಮೀರಿ ವಿವಿಧ ರಾಷ್ಟ್ರಗಳು, ಬಲಿಷ್ಟ ರಾಷ್ಟ್ರಗಳ ತಿಮಿ ಬೇಟೆಗಾರರು ತಮ್ಮ ಬೇಟೆಯನ್ನು ನಿರ್ಭಯವಾಗಿ ಮುಂದುವರಿಸಿದ್ದಾರೆ. ಇದರ ಜೊತೆಗೆ ಬೃಹದ್ ಹಡಗುಗಳ ಓಡಾಟ, ಆಕಸ್ಮಿಕಗಳಿಂದ ಕಡಲಿಗೆ ಚೆಲ್ಲಿದ ಕಲ್ಲೆಣ್ಣೆ, ವಿವಿಧ ಯಂತ್ರಾಗಾರಗಳಿಂದ ಹರಿದು ಬಂದು ಕಡಲು ಸೇರುವ ಪಾಷಾಣ ರಸಾಯನಗಳಿಂದಾಗಿ ಉಂಟಾದ ಜಲಮಾಲಿನ್ಯವೂ ಜಲಚರಗಳ ಮಾರಣ ಹೋಮಕ್ಕೆ ಆಜ್ಯ ಹುಯ್ಯುತ್ತಿದೆ. ಚೆಂದದ ಹುಲಿ, ಚಿರತೆಗಳ, ಆನೆದಂತ, ರುಂಡ ಮುಂಡಗಳಿಂದ ಅಂದದ ಅಲಂಕಾರಕ ವಸ್ತುಗಳನ್ನು ನಿರ್ಮಿಸಿ ಪ್ರದರ್ಶಿಸುವ ದುರಾಸೆ

ಮಾನವನದು. ಅದಕ್ಕಾಗಿ ಅವು ಅವನ ಗುಂಡಿಗೆ ಬಲಿ. ಅವುಗಳ ಹದಮಾಡಿದ ಚರ್ಮದ ಪಾದರಕ್ಷೆಗಳು, ಸೋಫಾದ ಮುಸುಕುಗಳು, ಶ್ರೀಮಂತ ಮಹಿಳೆಯರ ಜಂಬದ ಚೀಲಗಳು, ಫ್ಯಾಶನ್‌ಯುಗದ ಯುವಕರ ಸೊಂಟಪಟ್ಟಿಗಳು ಇನ್ನೂ ಮುಂತಾದವು! ಇದಕ್ಕೆ ಬಲಿಯಾಗುವುದು ಹಾವುಗಳೂ ಕೂಡ. ಜೊತೆಗೆ ಶ್ರೀಮಂತರ, ರಾಜ-ಮಹಾರಾಜರ ಮೋಜಿಗೆಂದು ಕಳೆದ ಶತಮಾನಗಳಲ್ಲಿ ಕೊಂದ ಕಾಡುಪ್ರಾಣಿಗಳೆಷ್ಟೊ. ಖಡ್ಗಮೃಗದ ಕೊಂಬಿಗೆ, ಕಾಡುಪಾಪದ ಕಣ್ಣಿಗೆ ಇರುವುದೆಂದು ಹೇಳಲಾದ ಕಾಮಲೋಲುಪ ಗುಣಕ್ಕಾಗಿ ಇವುಗಳ ಮರಣಹೋಮ. ಮನುಷ್ಯನ ದುರಾಸೆಗೆ ಇತಿಮಿತಿಯೇ ಇಲ್ಲ. ಚಿನ್ನದ ಮೊಟ್ಟೆ ಇಡುವ ಕೋಳಿಯ ಕಥೆ ನೆನಪು ಮಾಡಿಕೊಳ್ಳಿ. ರಕ್ಷಿಸಿ ಬೆಳೆಸಿದರೆ ಸಹಸ್ರಾರು ವರ್ಷಗಳು ಮಾನವ ಸಂತತಿಯನ್ನು ಸಾಕಬಹುದಾದ, ಸಂತಸದಲ್ಲಿ ಮುಳುಗಿಸಬಹುದಾದ ಈ ಶ್ರೀಮಂತ ಸಂಪತ್ತನ್ನು ಇಂದೇ ಬರಿದುಮಾಡಲು ಹೊರಟಂತಿದೆ. ಒಂದೇ ರಾತ್ರಿಯಲ್ಲಿ ಶ್ರೀಮಂತರಾಗುವ ಯೋಜನೆ. ಈ ಜೀವಿಗಳ ಸಮಾಧಿಯ ಮೇಲೆ ಮಾನವ ನಾಗರೀಕತೆಯ ಕಳಶ ಕಟ್ಟುವ ಕೆಟ್ಟಾಸೆ. ಉತ್ಸಾಹಭರದಲ್ಲಿ ಮುಂದಾಲೋಚನೆ ಮರೆತಂತಿದೆ. ಎಲ್ಲದರ ಹಿಂಬದಿಯಲ್ಲಿಯೂ ರಾಜಕೀಯದ ಕುತಂತ್ರ, ಸ್ವಾರ್ಥಲಾಲಸೆ, ಮನುಷ್ಯನ ಕೀಳರಿಮೆ. ಶ್ರೀಮಂತರ, ವಿಜ್ಞಾನಿಗಳ ನೀತಿಭೋದನೆ ಅಸತ್ಯ, ಕೇಳುವುದು ಸಲ್ಲ. ಹೀಗಾದರೆ ವನ್ಯಜೀವಿಗಳ ಜೀವನ ದುರ್ಭರ, ನಾಶಸನ್ನಿಹಿತ. ಇದರೊಂದಿಗೆ ಮಾನವನ ನಾಶವೂ ಖಂಡಿತ. ಎಚ್ಚರಿಕೆಯ ಗಂಟೆ ಮೊಳಗುತ್ತಿದೆ. ನಿಸರ್ಗದೇವಿಯ ದೇಗುಲದಲ್ಲಿ ಕೇಳಿಸಿಕೊಳ್ಳಲಾರದ ಕಿವುಡರಾಗಿದ್ದೇವೇನು? ಹಸುರು ಹೊನ್ನಿನ ಉಡುಗೆಯುಟ್ಟು, ಚಿತ್ರವಿಚಿತ್ರ, ರಂಗುರಂಗಿನ ಪ್ರಾಣಿ ಆಭರಣಗಳಿಂದ ಕಣ್ಮನಗಳನ್ನು ತಣಿಸುತ್ತಿದ್ದ ಪ್ರಕೃತಿಮಾತೆಯನ್ನು ನಿರಾಭರಣಗೊಳಿಸುವ, ತಮ್ಮ ತಾಯಿಯ ಘನ ಗಂಭೀರ ಮುಖದಲ್ಲಿ ನುಸುಳಿ ಮೂಡುತ್ತಿರುವ ನಿರಾಶೆ, ನೋವುಗಳ ಸುಳಿವನ್ನು ಅರಿಯಲಾರದ ಮೂಢರಾಗುತ್ತಿದ್ದೇವೇನು? ಆಕೆಯ ಸುರೂಪ ದೇಹದ ಮೇಲೆ ಕಾಣಿಸಿಕೊಳ್ಳುತ್ತಿರುವ ವಿಕೃತ ರೂಪಛಾಯೆಯನ್ನು ಕಾಣಲಾಗದ ಕುರುಡರಾಗುತ್ತಿದ್ದೇವೇನು? ಜೀವಜಗತ್ತಿನಲ್ಲಿಯೇ ಉತ್ಕೃಷ್ಟ ಪ್ರಾಣಿ, ವಿಕಾಸದ ಶೃಂಗವೇರಿದ ಜೀವಿ ಮಾನವ. ಅವನ ಪ್ರಮುಖ ಲಕ್ಷಣ ವಿವೇಕ. ಅದನ್ನು ಕಳೆದುಕೊಂಡು ಅವಿವೇಕಿಗಳಾಗುತ್ತಿದ್ದೇವೇನು?

ಜಗತ್ತಿನ ಮಾನವರೇ ಸರ್ವನಾಶವಾಗುವ ಮುನ್ನ ಎಚ್ಚರಗೊಳ್ಳಬೇಕು. ನಶಿಸಿಹೋಗುತ್ತಿರುವ ವನ್ಯಜೀವಿಗಳನ್ನು ಉಳಿಸಿ ಪೋಷಿಸಬೇಕು. ಉಪನಿಷತ್ತಿನ

ಉಕ್ತಿಗಳನ್ನು ನೆನಪು ಮಾಡಿಕೊಳ್ಳಬೇಕು. ಅದು ಧರ್ಮದ ವಿಷಯದಲ್ಲಿ ಹೇಳಿದೆ. 'ಧರ್ಮೋ ರಕ್ಷತಿ ರಕ್ಷಿತಃ' ಧರ್ಮ ತನ್ನನ್ನು ರಕ್ಷಿಸುವವರನ್ನು ರಕ್ಷಿಸುತ್ತದೆ ಎಂದು ಇದರ ಅರ್ಥ. ವನ್ಯಜೀವಿ ಸಂರಕ್ಷಣೆ ನಮ್ಮ ಧರ್ಮವಾಗಲಿ, ಅವನ್ನು ರಕ್ಷಿಸಿ. ಅವು ನಿಜವಾಗಿ, ಖಂಡಿತವಾಗಿ ನಮ್ಮನ್ನು ರಕ್ಷಿಸುತ್ತವೆ. ನಮ್ಮ ಏಳಿಗೆಗೆ ಪೂರಕವಾಗುತ್ತವೆ.

ಡಾ|| ಹಾ. ಬ. ದೇವರಾಜಸರ್ಕಾರ್



ಹಿಂಸೆಯಿಂದ ಶಾಂತಿ ಸಿಗಲಾರದು. ಅದು ಆ ಉದ್ದೇಶವನ್ನೇ ವಿಫಲಗೊಳಿಸುವುದು. ಅಶಾಂತಿ ನೆಲೆಸಿದಾಗ ಪರಸ್ಪರ ಹೃದಯ ಪರಿವರ್ತನೆಗೆ ಪ್ರಯತ್ನಿಸುವುದರಿಂದ ಸಮಸ್ಯೆ ಬಗೆ ಹರಿಯಬಹುದು. ಒಂದು ಸಭ್ಯ ಮಾತು. ಕೃಪಾದೃಷ್ಟಿ, ಸಹೃದಯತೆಯಿಂದ ಕೂಡಿದ ನಗು. ಇವುಗಳಿಂದ ಬೇಕಾದ ಸಮಸ್ಯೆಯನ್ನಾದರೂ ನಾವು ಎದುರಿಸಿ ಶಾಂತಿ ಸ್ಥಾಪಿಸಬಹುದು. ಹಿಂಸೆಯಿಂದ ಸಮಸ್ಯೆಯನ್ನು ನಾಶ ಮಾಡಿಯೇ ಶಾಂತಿಗಳಿಸಬೇಕೆಂದೇನಿಲ್ಲ.

—ಹಜರತ್

ಪ್ರೇಮ ಮೃತ್ಯುಗಳೆರಡೂ ಭಗವಂತನ ಲೀಲೆಯ ಕೌತುಕಗಳೆಲ್ಲರಡಾಗಿವೆ. ಒಂದು ಬದುಕನ್ನು ಹರ್ಷಗೊಳಿಸಿ ಆಕರ್ಷಣೆ ನೀಡಿದರೆ ಇನ್ನೊಂದು ಆನಂದವನ್ನೆಲ್ಲವನ್ನು ರುದ್ರಭೂಮಿಯನ್ನಾಗಿ ಮಾರ್ಪಡಿಸುವ ಶಕ್ತಿ ಉಳ್ಳದ್ದು.

—ಶ್ರೀ ಅರವಿಂದ

ಪುಸ್ತಕ ವಿಮರ್ಶೆ

ಸಾಹಿತ್ಯ ವಿಹಾರ— ಲೇಖಕರು: ಡಾ॥ ಬೆಟಗೇರಿ ಕೃಷ್ಣಶರ್ಮ; ಪ್ರಕಾಶಕರು: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೮; ಪುಟಗಳು: ೨೨೨, ಬೆಲೆ ೪ ರೂ.

ಇದು ಕನ್ನಡ ಸಾಹಿತ್ಯ ಪರಿಷತ್ತು ಹಮ್ಮಿಕೊಂಡಿರುವ ಬೆಳ್ಳಿ ಬಟ್ಟೆ ಬಳ್ಳಿಯ ಒಂಭತ್ತನೆಯ ಕುಡಿ. ಸುಪ್ರಸಿದ್ಧ ಸಾಹಿತಿ ಡಾ॥ ಬೆಟಗೇರಿ ಕೃಷ್ಣಶರ್ಮರು ಆಗಾಗ ಬರೆದ ೨೨ ಲೇಖನಗಳ ಸಂಕಲನ. ಇವುಗಳನ್ನು ನಾಲ್ಕು ವಿಹಾರಗಳನ್ನಾಗಿ ವಿಂಗಡಿಸಲಾಗಿದೆ. ಮೊದಲನೆಯ ವಿಹಾರದಲ್ಲಿ ೧) ಕನ್ನಡಿಗರ ಅಡಿಗೆ-ಊಟ, ೨) ನಮ್ಮ ಕವಿಗಳು ಕಂಡ ಕುಸುಮಕುಲ, ೩) ಕನಕದಾಸರು ಚಿತ್ರಿಸಿದ ಜನಜೀವನ, ೪) ಕನ್ನಡದಲ್ಲಿ ರಾಷ್ಟ್ರೀಯ ವಾಙ್ಮಯ ಎಂಬ ನಾಲ್ಕು ಲೇಖನಗಳಿವೆ. 'ಕನ್ನಡಿಗರ ಅಡಿಗೆ-ಊಟ'ವೆಂಬ ಲೇಖನ ಹದಿನಾರು ಪುಟಗಳಷ್ಟು ವಿಸ್ತಾರವಾಗಿದೆ. ಕನ್ನಡ ಕಾವ್ಯಗಳಲ್ಲಿ ಒಡಮೂಡಿಬಂದ ಅದರಲ್ಲಿಯೂ ಮಂಗರಸನ ಸೂಪಶಾಸ್ತ್ರದ ಆಧಾರದ ಮೇಲೆ ಹಲವಾರು ಭಕ್ಷ್ಯ ಭೋಜನಗಳ ವಿವರಗಳನ್ನು ರಸವತ್ತಾಗಿ ವಿವರಿಸಿದ್ದಾರೆ. 'ಜಿಲೇಬಿ' ಹದಿನಾರನೆಯ ಶತಮಾನದಲ್ಲಿಯೇ ಕನ್ನಡಿಗರಿಗೆ ಪರಿಚಿತವಾಗಿತ್ತೆಂದು ತಿಳಿದುಬರುತ್ತದೆ. ಕನ್ನಡಿಗರ ರಸಿಕತನ, ಅಭಿರುಚಿಗಳ ಒಂದು ಸುಂದರವಾದ ಚಿತ್ರವನ್ನು ಇಲ್ಲಿ ಕಾಣಬಹುದು. ಹಾಗೆಯೇ 'ನಮ್ಮ ಕವಿಗಳು ಕಂಡ ಕುಸುಮಕುಲ'ವೆಂಬ ಲೇಖನ ತುಂಬಾ ಸೊಗಸಾಗಿದೆ. ಸುಮಾರು ಇಪ್ಪತ್ತಾರು ವಿವಿಧ ಬಗೆಯ ಕುಸುಮಗಳ ವರ್ಣನೆಯಿದೆ. 'ಕನಕದಾಸರು ಚಿತ್ರಿಸಿದ ಜನಜೀವನ'ವೆಂಬ ಲೇಖನವಂತೂ ಕನಕದಾಸರ ಸಮಗ್ರ ಕೃತಿಗಳ ಸ್ಥೂಲ ವಿವರಣೆಯಾಗಿದೆ. ಅಭ್ಯಾಸಪೂರ್ಣವಾಗಿದೆ. ಕನಕದಾಸರ ಅತ್ಯಂತ ಮಹತ್ವದ ಕೃತಿ 'ಮೋಹನ ತರಂಗಿಣಿ'ಯು ಕನ್ನಡ ಜನಜೀವನದ ಸಂದರ್ಶನವೇ ಆಗಿದೆಯೆಂಬ ನಿರ್ಣಯಕ್ಕೆ ಬಂದಿದ್ದಾರೆ. ಈ ಕೃತಿಯಲ್ಲಿ ರಾಶಿರಾಶಿಯಾಗಿ ಜನಜೀವನದ ಚಿತ್ರಗಳಿವೆ. ನಮ್ಮ ವೈಭವಗಳನ್ನು ಹಿಗ್ಗಿಸುತ್ತವೆಯೆಂದು ಆಧಾರ ಪ್ರಮಾಣಗಳಿಂದ ವಿವರಿಸಿ 'ಮೋಹನ ತರಂಗಿಣಿ' ಕೃತಿಯ ಬಗೆಗೆ ಕುತೂಹಲ ಕೆರಳಿಸಿದ್ದಾರೆ. ಮೂಲ ಕೃತಿಯನ್ನು ಓದುವ ಜಿಜ್ಞಾಸೆ ಮೂಡಿಸಿದ್ದಾರೆ. ಕನ್ನಡದಲ್ಲಿ ರಾಷ್ಟ್ರೀಯ ವಾಙ್ಮಯ ಕುರಿತಾದ ಸುದೀರ್ಘ ಲೇಖನದಲ್ಲಿ ಕನ್ನಡದಲ್ಲಿ ರಾಷ್ಟ್ರೀಯ ವಾಙ್ಮಯ ಬೆಳೆದು ಬಂದ ರೀತಿಯನ್ನು ಸೋದಾಹರಣವಾಗಿ ವಿವೇಚಿಸಲಾಗಿದೆ. ಆದರೂ ಇಲ್ಲಿ ಒಂದು ಜನಾಂಗವು ಬೆಳೆಯಿಸಿದ ಸಾಹಿತ್ಯ ವಿವೇಚನೆ ಇದೆಯೆ ಹೊರತು,

ಇನ್ನಿತರ ಬಗೆಗೆ ಉಲ್ಲೇಖ ಇರದಿರುವುದು ಸಖೇದಾಶ್ಚರ್ಯವನ್ನುಂಟುಮಾಡುತ್ತಿವೆ. ಇದೊಂದು ದೊಡ್ಡ ಕೊರತೆ, ಕೊರತಲು.

ಎರಡನೆಯ ವಿಹಾರದಲ್ಲಿ ಕವಿದರ್ಶನ ಶೀರ್ಷಿಕೆಯಲ್ಲಿ ಮೊದಲನೆಯದು ಕವಿ ಕುಮಾರವ್ಯಾಸನ ಕಾಲ ಚರಿತ್ರೆಯನ್ನು ಕುರಿತಾಗಿದೆ. ಗದುಗಿನ ವೀರನಾರಾಯಣನ ಉಪಾಸಕನಾದ ಕುಮಾರವ್ಯಾಸ ಮಹಾಭಾರತವನ್ನು ರಚಿಸಿ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಚಿರಂತನ ಸ್ಥಾನ ಪಡೆದಿರುವುದು ಐತಿಹಾಸಿಕ ಸತ್ಯ. ಆದರೆ ಆತನ ಕಾಲ ನಿರ್ಣಯದ ಬಗೆಗೆ ಕೆಲವು ಮಾತುಗಳು ಬಂದಿವೆ. ಹಾಗೆಯೆ ಈತನ ಮತದ ಬಗೆಗೆ ಚರ್ಚಿಸಲಾಗಿದೆ. ನಿರ್ಣಯಾತ್ಮಕ ಸಿದ್ಧಾಂತ ಮಾತ್ರ ರೂಪುಗೊಂಡಿಲ್ಲ. ಪುರಂದರದಾಸ ಮತ್ತು ಕನಕದಾಸರ ಕೃತಿಗಳ ತುಲನಾತ್ಮಕ ಸಮೀಕ್ಷೆ ಮಾತ್ರ ಸೊಗಸಾಗಿದೆ. ಜಗನ್ನಾಥ ದಾಸರ ಪರಿಚಯ ಸಮಗ್ರತೆಯದಾಗಿದೆ. ಕನ್ನಡ ವಿದ್ಯಾರ್ಥಿಗಳು ಈ ಲೇಖನವನ್ನು ಅವಶ್ಯವಾಗಿ ಪರಿಶೀಲಿಸಬೇಕು ಜಗನ್ನಾಥದಾಸರ ಜೀವನ ವ್ಯಕ್ತಿತ್ವ ದರ್ಶನದ ಸ್ಫುಟವಾದ ಚಿತ್ರ ಓದುಗರ ಕಣ್ಮುಂದೆ ನಿಲ್ಲುವಂತಿದೆ. ಹಾಗೆಯೇ ಪಂಡಿತ ಮ. ಪ್ರ. ಪೂಜಾರರ ಬಗೆಗಿನ ಲೇಖನ ಹೇಳಿಕೊಳ್ಳುವಂತಿಲ್ಲ. ಆದರೆ ಗಳಗನಾಥರ ಕೃತಿಗಳು (ಸಂಖ್ಯಾನಿರ್ಣಯ) ಎಂಬುದು ಅಭ್ಯಾಸಪೂರ್ಣವಾಗಿದೆ, ಸಂಶೋಧನಾತ್ಮಕವಾಗಿದೆ.

ಜಾನಪದ ಸಾಹಿತ್ಯ ಸಾಮ್ರಾಟರಾದ ಡಾ|| ಜೆಟಗೇರಿಯವರು 'ಜಾನಪದ ನಾಟಕ ನಡೆದು ಬಂದದಾರಿ'ಯಲ್ಲಿ ತಮ್ಮ ಖಚಿತವಾದ ಜ್ಞಾನವನ್ನು ಸೂರೆಗೊಂಡಿದ್ದಾರೆ. ನಮ್ಮ ಜನಪದ ರಂಗಭೂಮಿ, ದೊಡ್ಡಾಟಗಳು, ಜಾನಪದ ನಾಟ್ಯಗೀತಗಳು, ಜಾನಪದ ಶಿಶು ಸಾಹಿತ್ಯ ಮತ್ತು ಲಾವಣಿಗಳು ಮೊದಲಾದ ವಿದ್ವತ್ಪೂರ್ಣ ಅನುಭವ ಪೂರ್ಣ ಲೇಖನಗಳು ಜಾನಪದ ಸಾಹಿತ್ಯ ವಿಮರ್ಶಾ ಕ್ಷೇತ್ರದಲ್ಲಿ ಬೆಲೆಯುಳ್ಳ ಕೊಡುಗೆಗಳಾಗಿವೆ. ನಾಲ್ಕನೆಯ ವಿಹಾರದಲ್ಲಿ ಸಾಂಸ್ಕೃತಿ ಸಂಚಯ ಮಾಡಿಸಿದ್ದಾರೆ. ಕನ್ನಡಿಗರ ದಿವ್ಯ, ಭವ್ಯ, ಉಜ್ವಲ, ಸಾಂಸ್ಕೃತಿಕ ಪರಂಪರೆಯ ಚೇತೋಹಾರಿ ರೋಮಾಂಚಕ ಪರಿಚಯವನ್ನು 'ಜಾನಪದ ಸಾಂಸ್ಕೃತಿ' ಲೇಖನ ಒದಗಿಸುತ್ತದೆ. ಶಿವಶರಣ ದಾಸರ ನೀತಿ ವಚನಗಳಿಂದ, ಜಾನಪದ ಗಾದೆಯ ಮಾತುಗಳಿಂದ ತುಂಬಿನಿಂತ ಗಂಗೆಯಂತೆ ಪಾವನವಾದ ಜಾನಪದ ಸಂಸ್ಕೃತಿಯನ್ನು ಪರಿಚಯಿಸುವ ರೀತಿ ಬಹು ಸೊಗಸಾಗಿದೆ. ಹಬ್ಬ ಹುಣ್ಣಿಮೆಗಳ ಸಡಗರ ಸಂಭ್ರಮ–ಆಚಾರ ವಿಚಾರಗಳ ವಿಚಾರವನ್ನು ಕಾರ ಹುಣ್ಣಿಮೆ, ಗುಡಿಯ ಹುಣ್ಣಿಮೆಗಳ ಮೂಲಕ ವಿಶದೀಕರಿಸಲಾಗಿದೆ, ಕೊನೆ

ಯಲ್ಲಿಯ ಭಾರತೀಯ ತತ್ತ್ವವಿದುಷಿಯರು ಎಂಬ ಲೇಖನವು ಇನ್ನಿಷ್ಟು ವಿಸ್ತಾರವಾಗಿ ಮೂಡಿಬರಲು ಸಾಧ್ಯವಿತ್ತು ಗಾರ್ಗಿ ಮತ್ತು ಮೈತ್ರೇಯಿ ಸಂಭಾಷಣೆಯ ಸನ್ನಿವೇಶ ಪರಿಚಯದೊಂದಿಗೆ ಮುಕ್ತಾಯಗೊಂಡಿದೆ. ಜೈನ ಧರ್ಮದಲ್ಲಿ ಮಹತ್ವದ ಪಾತ್ರವನ್ನಾಡುವ ಪಂಚಾಣು ವ್ರತಗಳನ್ನು ಕುರಿತ ಲೇಖನವೂ ಅಷ್ಟೇ, ಒಟ್ಟಿನಲ್ಲಿ ಆ ಕಾಲದಲ್ಲಿ ಬರೆದ ಬಿಡಿ ಲೇಖನಗಳನ್ನು ಗ್ರಂಥ ರೂಪದಲ್ಲಿ ತರುವಾಗ ಮತ್ತೆ ಲೇಖನಗಳನ್ನು ಪರಿಶೀಲಿಸಬಹುದಿತ್ತು. ಕೆಲವು ಲೇಖನಗಳನ್ನು ಹಿಗ್ಗಿಸಬಹುದಿತ್ತು. ಲೇಖಕರ ಅನಾರೋಗ್ಯದ ಮೂಲಕ ಇದೆಲ್ಲವೂ ಸಾಧ್ಯವಾಗದೆ ಹೋಗಿದೆ. ಕನ್ನಡ ಸಾಹಿತ್ಯದ ವಿದ್ಯಾರ್ಥಿಗಳಿಗೆ ಇದೊಂದು ಬೆಲೆಯುಳ್ಳ ಕೃತಿ ಎಂಬುದರಲ್ಲಿ ಯಾವ ಸಂದೇಹವಿಲ್ಲ. ಕನ್ನಡ ಸಾಹಿತ್ಯ ಪರಿಷತ್ತಿನವರು ಬಹು ಸುಲಭವಾದ ಬೆಲೆಯಲ್ಲಿ ೨೩೨ ಪುಟಗಳ ಈ ಕೃತಿಯನ್ನು ಕನ್ನಡಿಗರ ಕೈಗೆ ಕೊಟ್ಟಿರುವುದು ಶ್ಲಾಘನೀಯ. ಮುಖಪುಟವು ಅಂದವಾಗಿದೆ.

ಎಸ್. ಎಸ್. ಭೂಸರಡ್ಡಿ

*　　*　　*　　*

ಕಾಡಿನ ಹೂವುಗಳು—(ಕವನಸಂಕಲನ) ಲೇಖಕರು: ಶಿವಮೂರ್ತಿ: ಪ್ರಕಾಶಕರು: ಗುರುಸಿದ್ಧ ಪ್ರಕಾಶನ, ಮುಂಗಾಪುರ, ಬಳ್ಳಾರಿ ಜಿಲ್ಲೆ; ಪುಟ: ೬೭; ಬೆಲೆ: ೫ ರೂ. ಮೊದಲ ಮುದ್ರಣ: ನವೆಂಬರ್ ೧೯೮೦.

೪೦ ಕವಿತೆಗಳೂ 'ಗುರುಸಿದ್ಧ' ಎಂಬ ಅಂಕಿತದಲ್ಲಿ ಬರೆದ ೨೭ ವಚನಗಳೂ ಇರುವ ಸಂಕಲನ. ೧೯೫೪ರಿಂದ ಈಚೆಗಿನ ೨೫–೩೦ ವರ್ಷಗಳ ಕಾಲದಲ್ಲಿ ಆಗಾಗ ಬರೆಯಲಾದ ಈ ಪದ್ಯಗಳಲ್ಲಿ ವಸ್ತುವೈವಿಧ್ಯ ಇದೆ. ನಿಸರ್ಗ, ಪಕ್ಷಿ-ಪ್ರಾಣಿಗಳು, ಬದುಕಿನ ಆಗುಹೋಗುಗಳು; ಅದೇಕೆ, ಕವಿಯ ಜೀವನದ ಕೆಲವಂಶಗಳೂ (ನೋಡಿ: ಒಬ್ಬ ಡಾಕ್ಟರ್ ಮತ್ತೊಬ್ಬನು ಉಪಾಧ್ಯಾಯ ಹಿರಿಯ ಮಕ್ಕಳು: ಒಬ್ಬ ವಿಶ್ವಸಂಸ್ಥೆಯಲ್ಲಿ ಕಿರಿಯ ಕನ್ನಡಾಂಬೆ ಸೇವಕ—ಇ.ಪು. ೬೭) ಇಲ್ಲಿ ನಿರೂಪಿತವಾಗಿವೆ. ನಾಡು-ನುಡಿಗಳನ್ನು ಕುರಿತ ಕವನಗಳೂ ಪ್ರಾರ್ಥನಾ ಪದ್ಯಗಳೂ ಈ ಸಂಗ್ರಹದಲ್ಲಿವೆ. ಈ ದೃಷ್ಟಿಯಿಂದ ಸಂಕಲನಕ್ಕಿಟ್ಟ ಶೀರ್ಷಿಕೆ ಯುಕ್ತವೇ ಆಗಿದೆ. ಆದರೆ, ನವೋದಯ ಕಾವ್ಯದ ಪ್ರಭಾವಕ್ಕೊಳಗಾಗಿರುವಂತೆ ಕಾಣುವ 'ಮರನಿಂತಿತ್ತು', 'ಚರಮಗೀತೆ', 'ಗುರುದೇವ ನಡಿಗೆ' ಮತ್ತು ಕೆಲವು ವಚನಗಳನ್ನು ಬಿಟ್ಟರೆ ಉಳಿದ ಹೆಚ್ಚಿನ ಕವನಗಳು ಇನ್ನೊಮ್ಮೆ ಓದುವಂತೆ ಇಲ್ಲ.

ಲೇಖಕರು ವಿಶ್ವಸಂಸ್ಥೆಯಲ್ಲಿ ನೌಕರಿಯಲ್ಲಿರುವವರು; ವಿವಿಧ ದೇಶಗಳನ್ನು ಸುತ್ತಾಡಿದವರು; ಸದ್ಯ ಈಜಿಪ್ಟ್ ದೇಶದ ಕೈರೋದಲ್ಲಿ ಇರುವವರು. ಕರ್ಣಾಟಕ ದೊಳಗಿರುವ ಕೆಲವು ಕನ್ನಡಿಗರೇ ಕ್ರಮೇಣ ಕನ್ನಡವನ್ನು ಮರೆಯುತ್ತಿರುವ ಈ ಕಾಲದಲ್ಲಿ, ಅನೇಕ ವರ್ಷಗಳಿಂದ ಭಾರತದ ಹೊರಗಿದ್ದೂ ಕನ್ನಡ ಬರವಣಿಗೆಯ ಬಗ್ಗೆ ಲೇಖಕರಿಗಿರುವ ಒಲವು ಹಾಗೂ ಕನ್ನಡ ಭಾಷೆ-ಸಾಹಿತ್ಯಗಳ ಬಗೆಗಿರುವ ಅಭಿಮಾನ ನಿಜವಾಗಿಯೂ ಮೆಚ್ಚುವಂತಹದು.

* * * *

ನಾವಿಕನಿಲ್ಲದ ನೌಕೆ (ಕಾದಂಬರಿ)—ಲೇಖಕರು: ವಿಜಯಶ್ರೀ; ಪ್ರಕಾಶಕರು: ಭಾರತೀ ಪ್ರಕಾಶನ, ಸರಸ್ವತಿಪುರಂ, ಮೈಸೂರು ೫೭೦೦೦೯; ಪುಟ: viii+೨೨೪; ಬೆಲೆ: ೮ ರೂ.; ಮೊದಲನೆಯ ಮುದ್ರಣ ೧೯೮೦.

ಚಲನಚಿತ್ರ ನಟಿಯೊಬ್ಬಳ ಬದುಕನ್ನು ಮೂರು ಘಟ್ಟಗಳಲ್ಲಿ ಚಿತ್ರಿಸಿರುವ ಕಾದಂಬರಿ. ಅಮೃತಾಳಿಗೆ ಬಾಲ್ಯದಿಂದಲೇ ಸಂಗೀತ-ನೃತ್ಯ-ಅಭಿನಯಗಳಲ್ಲಿ ಆಸಕ್ತಿ. ಕಾಲೇಜ್ ವಿದ್ಯಾರ್ಥಿನಿಯಾಗಿರುವಾಗ ಇಂಗ್ಲಿಷ್ ಅಧ್ಯಾಪಕ ಆನಂದನ ಸೂಕ್ತ ಮಾರ್ಗದರ್ಶನ ಹಾಗೂ ಪ್ರೋತ್ಸಾಹ. ಅಷ್ಟೇ ಅಲ್ಲದೆ ಅವನ ಪ್ರೀತಿಯ ಸಿಂಚನ ಕೂಡ. ರಜೆಯಲ್ಲಿ ಆಕಸ್ಮಿಕವಾಗಿ ಚಲನಚಿತ್ರ ನಿರ್ದೇಶಕ ಕಪಿಲ್ ರಾಯ್ ಅವರ ಪರಿಚಯಲಾಭ. ಸಿನಿಮಾದಲ್ಲಿ ನಟಿಸುವ ಸದವಕಾಶ....ಆಮ್ರ ಪಾಲಿ ಎಂಬ ಹೊಸ ಹೆಸರನಿಂದ ಪ್ರಸಿದ್ಧಿ ಪಡೆಯತೊಡಗಿದ ಅಮೃತಾ ಆನಂದನ ಪ್ರೇಮದಿಂದ ವಂಚಿತಳಾಗುತ್ತಾಳೆ. ಆದರೆ ನಾಯಕನಟ ಸಿದ್ಧಾರ್ಥನ ಸ್ನೇಹ ಅವಳ ಬಾಳಿನಲ್ಲಿ ಹೊಸ ಆಸೆಗಳನ್ನು ಚಿಗುರಿಸುತ್ತದೆ. ಬದುಕಿನ ಎರಡನೆಯ ಘಟ್ಟ ಪ್ರಾರಂಭವಾಗುತ್ತದೆ. ಅಮೃತಾ-ಸಿದ್ಧಾರ್ಥರ ಮದುವೆ ನಡೆಯುತ್ತದೆ. ಫಿಲ್ಮ್‌ರಂಗದಲ್ಲಿ ಖ್ಯಾತಿಯ ಶಿಖರಕ್ಕೇರಿದ ಅವಳು ರಾಷ್ಟ್ರಪ್ರಶಸ್ತಿಯನ್ನೂ ಗಳಿಸು ತ್ತಾಳೆ. ಆಮ್ರಪಾಲಿಯ ಗಂಡ ಎಂದು ತನ್ನನ್ನು ಜನರು ಗುರುತಿಸತೊಡಗುವ ಸಂದರ್ಭ ಬಂತೆಂದು ನಿರಾಶೆಗೊಂಡ ಸಿದ್ಧಾರ್ಥ ಮಡದಿಯಿಂದ ವಿಚ್ಛೇದನ ಪಡೆಯಲು ನಿರ್ಧರಿಸುತ್ತಾನೆ. ಇನ್ನೊಬ್ಬ ಜನಪ್ರಿಯ ನಟ ವಿನೋದನೊಂದಿಗೆ ಅಮೃತಾ ಇರತೊಡಗಿದಾಗ ಅವಳ ಜೀವನ ಮೂರನೆಯ ಘಟ್ಟವನ್ನು ಪ್ರವೇಶಿಸುತ್ತದೆ.

ಅಮೃತಾ-ಸಿದ್ಧಾರ್ಥರ ಕಥೆಯೊಂದಿಗೆ ಕಪಿಲ್‌ರಾಯ್ ಹಾಗೂ ಅವರ ಮಡದಿಯಾದ ಚಿತ್ರನಟಿ ಚಂದ್ರಿಕಾರ ಜೀವನ ಚಿತ್ರಣವೂ ಈ ಕಾದಂಬರಿ ಯಲ್ಲಿದೆ. ಹೊರಗಿನವರ ದೃಷ್ಟಿಯಲ್ಲಿ ಅತ್ಯಂತ ಸುಖಿಗಳಾಗಿ ಕಾಣುವ ಚಿತ್ರ

ಕಲಾವಿದರ ಆಂತರಿಕ ಜೀವನ ಎಷ್ಟು ದುಃಖಸಂಕಟಗಳಿಂದ, ಏಳುಬೀಳುಗಳಿಂದ ಕೂಡಿರಬಹುದು ಎಂದು ಲೇಖಕಿ ಮನಮುಟ್ಟುವಂತೆ ನಿರೂಪಿಸಿದ್ದಾರೆ. ಸ್ತ್ರೀಯರ ಮನಸ್ಸಿನ ಒಳತೋಟಿಯನ್ನು ಲೇಖಕಿ ಚೆನ್ನಾಗಿ ಚಿತ್ರಿಸಬಲ್ಲರು ಎಂಬುದಕ್ಕೆ, ಮಕ್ಕಳಿಗಾಗಿ ಹಂಬಲಿಸಿ, ಕೊನೆಗೂ ತಾಯಿಯಾಗದೆ ಆತ್ಮಹತ್ಯೆ ಮಾಡಿಕೊಂಡ ಚಂದ್ರಿಕಾ ಹಾಗೂ ಕೆಡುಕಿಗೆ ಹೆದರದೆ ಸದಾ ಒಳಿತನ್ನೇ ನಿರೀಕ್ಷಿಸುತ್ತಾ, ಧೃತಿಗೆಡದೆ ಮುಂದುವರಿದ ಅಮೃತಾ-ಇವರ ಪಾತ್ರಗಳು ಜೀವಂತ ನಿದರ್ಶನಗಳಾಗಿವೆ. ಆದರೆ ವಿನೋದ್, ಸಿದ್ಧಾರ್ಥ ಮತ್ತು ಕಪಿಲ್ ರಾಯ್-ಇವರ ಪಾತ್ರಚಿತ್ರಣ ಮಾತ್ರ ಅಷ್ಟೇನೂ ಯಶಸ್ವಿಯಾಗಿಲ್ಲ. (ಉದಾಹರಣೆಗೆ, ಆನಂದ್ ಅಮೃತಾಳನ್ನು ಮದುವೆಯಾಗಲು ನಿರಾಕರಿಸುವುದು ಹಾಗೂ ಸಿದ್ಧಾರ್ಥ ಅಮೃತಾಳಿಂದ ಬಿಡುಗಡೆ ಪಡೆಯುವ ನಿರ್ಧಾರಕ್ಕೆ ಬರುವುದು—ಈ ಪ್ರಸಂಗಗಳಲ್ಲಿ ಅವರ ನಿರ್ಧಾರಗಳು ಕೆಲವುಸಲ ದಿಢೀರ್ ಅನಿಸುತ್ತವೆ.)

ಎಕ್ಸ್‌ಟ್ರಾ ನಟನಟಿಯರ ಬದುಕು, ಚಿತ್ರರಂಗದ ಹೊಲಸು ರಾಜಕೀಯ, ಗಾಸಿಪ್‌ಗಳು, ಡಬ್ಬಿಂಗ್, ಷೂಟಿಂಗ್, ಚಿತ್ರಕಲಾವಿದರ ಜೀವನದಲ್ಲಿ ಆಕಸ್ಮಿಕವಾಗಿ ಕಾಣಿಸಿಕೊಳ್ಳುವ ಸೋಲು-ಗೆಲುವುಗಳು—ಹೀಗೆ ಒಟ್ಟಿನಲ್ಲಿ ಚಲನಚಿತ್ರ ಕ್ಷೇತ್ರದೊಳಗೊಂದು ಇಣುಕುನೋಟ ಬೀರುವ ಈ ಕಾದಂಬರಿ, ಕಾದಂಬರಿಗೆ ಮುಖ್ಯವಾಗಿ ಇರಬೇಕಾದ ಬೇಸರವಿಲ್ಲದೆ ಓದಿಸಿಕೊಂಡುಹೋಗುವ ಗುಣವನ್ನು ಹೊಂದಿದೆ. 'ಜೋಡಿಹಂಸ'ವೇ ಮೊದಲಾದ ಹಿಂದಿನ ಕಾದಂಬರಿಗಳಲ್ಲಿನಂತಹ ಭಾವುಕ ಬರವಣಿಗೆ ಇಲ್ಲಿಲ್ಲ. ಆಯ್ಕೆ ಮಾಡಿಕೊಂಡ ವಸ್ತುವನ್ನು ಸಂಯಮದಿಂದ ಅಚ್ಚುಕಟ್ಟಾಗಿ ನಿರೂಪಿಸುವ ಪ್ರಯತ್ನದಲ್ಲಿ ಲೇಖಕಿಯರು ಸಫಲರಾಗುತ್ತಿದ್ದಾರೆ ಎಂಬುದನ್ನು 'ನಾವಿಕನಿಲ್ಲದ ನೌಕೆ' ಸ್ಪಷ್ಟಪಡಿಸುತ್ತದೆ.

ಶಂಸ



ಧೈರ್ಯವು ನಮ್ಮ ದೃಷ್ಟಿಯಲ್ಲಿ ಕಟ್ಟಿರಬೇಕು. ಧಾರ್ಮಿಕ ಶಿಕ್ಷಣವಿಲ್ಲದೆ ನಮ್ಮ ನಡೆನುಡಿಗಳಲ್ಲಿ ನೀತಿ ತುಂಬಲಿಕ್ಕಿಲ್ಲ. ನಾಸ್ತಿಕತೆ ನಮಗುಚಿತವಲ್ಲ. ಧಾರ್ಮಿಕ ದೃಷ್ಟಿಗೆ ನಾವು ಮಹತ್ವ ಕೊಡಬೇಕು.

—ಗಾಂಧೀಜಿ

ಪುಸ್ತಕ ಪ್ರಪಂಚ

(ಮಾಸ ಪತ್ರಿಕೆ)

ಕ್ರೌನ್ ಅಷ್ಟದಳ ೬೪ ಪುಟಗಳು

ಬಿಡಿ ಪ್ರತಿ: ಒಂದು ರೂಪಾಯಿ

ವಾರ್ಷಿಕ ಚಂದಾ: ೧೦ ರೂಪಾಯಿ

ಸಾರ್ವಜನಿಕ ವಿದ್ಯಾವಂತರ ಉಪಯೋಗಕ್ಕಾಗಿ, ಮುಖ್ಯವಾಗಿ ಗ್ರಾಮಸ್ಥರ ಮತ್ತು ಗ್ರಾಮ ಪುಸ್ತಕ ಭಂಡಾರಗಳ ಅಧಿಕಾರಿಗಳ ಉಪಯೋಗಕ್ಕಾಗಿ ಈ ಪತ್ರಿಕೆ ಪ್ರಕಟವಾಗುತ್ತಿದೆ.

(ಅ) ಕನ್ನಡೇತರ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳ ಮತ್ತು ಲೇಖನಗಳ ಸಾರಾಂಶಗಳನ್ನು ಪ್ರಕಟಿಸಿ ಅವುಗಳ ಪರಿಚಯವನ್ನು ಮಾಡಿಕೊಡುವುದು.

(ಆ) ಆಯಾ ತಿಂಗಳಲ್ಲಿ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳ ಮತ್ತು ಮುಖ್ಯ ಕನ್ನಡ ಲೇಖನಗಳನ್ನು ಪ್ರಕಟಿಸುವುದು.

(ಇ) ಕನ್ನಡದಲ್ಲಿ ಪ್ರಕಟವಾಗಿರುವ ಉತ್ತಮ ಪುಸ್ತಕಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸುವುದು.

(ಈ) ಪುಸ್ತಕ ಭಂಡಾರ ವ್ಯವಸ್ಥೆ ವಿಚಾರವಾಗಿ ಲೇಖನಗಳನ್ನು ಪ್ರಕಟಿಸುವುದು.

(ಉ) ಒಬ್ಬ ಲೇಖಕರ ಎಲ್ಲ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು. ಒಂದು ವಿಷಯದ ಮೇಲೆ ಬರೆದಿರುವ ಅನೇಕ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು.

(ಊ) ಗ್ರಾಮ ಜೀವನಕ್ಕೆ ಸಂಬಂಧಪಟ್ಟ ಕಥೆಗಳು, ಕವಿತೆಗಳು, ಪ್ರಬಂಧಗಳ ಮತ್ತು ವ್ಯಕ್ತಿ ಚಿತ್ರಗಳನ್ನು ಪ್ರಕಟಿಸುವುದು.

(ಋ) ಕಲಾಚಿತ್ರಗಳನ್ನು ಅಚ್ಚು ಮಾಡುವುದು.

(ೠ) ಕನ್ನಡದಲ್ಲಿ ಪ್ರಕಟವಾದ ಅತಿ ಮುಖ್ಯ ಲೇಖನದ ಸಾರಾಂಶವನ್ನು ಪ್ರಕಟಿಸುವುದು.

(ಎ) ಗ್ರಾಮಸ್ಥರಿಗೆ ರುಚಿಸುವ ವಿಷಯಗಳ ಮೇಲೆ ಸುಲಭ ಶೈಲಿಯಲ್ಲಿ ಲೇಖನಗಳನ್ನು ಪ್ರಕಟಿಸುವುದು.

ಪ್ರಧಾನ ಕಾರ್ಯನಿರ್ವಹಣಾಧಿಕಾರಿ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಕೃಷ್ಣಮೂರ್ತಿಪುರಂ :: ಮೈಸೂರು - ೪

Reg. No. KRNN. 29 / WPP 6 | LICENSE No. 21
LICENSED TO POST WITHOUT PREPAYMEN

ನೀವು ಓದಲೇಬೇಕಾದ ಪುಸ್ತಕಗಳು.....

ಜನಪ್ರಿಯ ವಾಲ್ಮೀಕಿ ರಾಮಾಯಣ
ಶರಣ ಚರಿತಾಮೃತ
ನನ್ನೂರು
ಗೋಕುಲ
ಭಗತ್‌ಸಿಂಗ್
ಸಿ. ವಿ. ರಾಮನ್
ವಚನ ಭಾಗವತ
ವಿದ್ಯಾಪೀಠಗಳು
ಶ್ರೀ ಶಂಕರಾಚಾರ್ಯ
ಆಂಡರ್‌ಸನ್ ಮತ್ತು ಇತರ ಕತೆಗಳು
ನಳಚರಿತ್ರೆಯ ಸಂಗ್ರಹ
ಗ್ರಂಟ್ವಿಗ್

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು ತರಿಸಿ ಓದಿರಿ

Edited by R. Boraiah, Printed by H. G. Ramaswamy Iyeng Manager at Karnataka State Adult Education Council Pre and Published by Karnataka State Adult Education Coun Mysore city (India)